"ಅಥಣಿ ತಾಲೂಕಿನ ದೇಸಗತಿಗಳು ವಿಶೇಷವಾಗಿ ಪವಾರ ದೇಸಾಯಿಗಳ (ಮಂಗಸೂಳಿಕರ)" – ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಶ್ರೀಶೈಲ ಸಿ. ದೇವರಡ್ಡಿ

ಎಂ. ಎ. (ಸುವರ್ಣ ಪದಕ ವಿಜೇತರು)

ಮಾರ್ಗದರ್ಶಕರು.

ಡಾ. ಬಸವರಾಜ ಎನ್. ಅಕ್ಕಿ

ಎಂ.ಎ., ಪಿಹೆಚ್.ಡಿ

ಚರಿತ್ರೆ ವಿಭಾಗ

ಶ್ರೀ ಬಿ. ಆರ್. ಭರೂರ [illegible] ಕೇಂದ್ರ

ಹಾರೂಗೇರಿ, ತಾ॥ ರಾಯಬಾಗ



ಚರಿತ್ರೆ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೦೮







ದಿ. ಶ್ರೀ ಧೈರ್ಯಶೀಲರಾವ್ ಭೋಜರಾಜ ಪವಾರ ದೇಸಾಯಿ
1919-1987



"ಅಥಣಿ ತಾಲೂಕಿನ ದೇಸಗತಿಗಳು ವಿಶೇಷವಾಗಿ ಪವಾರ ದೇಸಾಯಿಗಳ (ಮಂಗಸೂಳಿಕರ)" - ಒಂದು ಅಧ್ಯಯನ.

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ.

ಶ್ರೀಶೈಲ ಸಿ. ದೇವರೆಡ್ಡಿ
ಎಂ. ಎ. (ಸುವರ್ಣ ಪದಕ ವಿಜೇತರು)



ಮಾರ್ಗದರ್ಶಕರು.

ಡಾ. ಬಸವರಾಜ ಎನ್. ಅಕ್ಕಿ
ಎಂ. ಎ., ಪಿ. ಹೆಚ್. ಡಿ.

ಚರಿತ್ರೆ ವಿಭಾಗ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ತಾ।। ರಾಯಬಾಗ .



ಚರಿತ್ರ ಅಧ್ಯಯನ ವಿಭಾಗ

ಸಂಯೋಜನೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬
೨೦೦೮





ಪ್ರಮಾಣ ಪತ್ರ

'ಅಥಣಿ ತಾಲೂಕಿನ ದೇಸಗತಿಗಳು ವಿಶೇಷವಾಗಿ ಪವಾರ ದೇಸಾಯಿಗಳ (ಮಂಗಸೂಳಿಕರ)' - ಒಂದು ಅಧ್ಯಯನ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಬಸವರಾಜ ಎನ್. ಅಕ್ಕಿ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗಕ್ಕೆ ಎಂ. ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲ ಮತ್ತು ಈ ಮೊದಲು ಇದನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೩೦-೦೯-೨೦೦೮

ಶ್ರೀಶೈಲ ಸಿ. ದೇವರಡ್ಡಿ
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನಾ
ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಶ್ರೀಶೈಲ ಸಿ. ದೇವರೆಡ್ಡಿ ಇವರು **ಅಥಣಿ ತಾಲೂಕಿನ ದೇಸಗತಿಗಳು ವಿಶೇಷವಾಗಿ ಪವಾರ ದೇಸಾಯಿಗಳು (ಮಂಗಸೋಳಿಕರ)-ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗಕ್ಕೆ **ಎಂ.ಫಿಲ್.** ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಮತ್ತು ಈ ಮೊದಲು ಎಲ್ಲಿಯೂ ಇಡಿಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಬಸವರಾಜ ಎನ್. ಅಕ್ಕಿ.
ಮಾರ್ಗದರ್ಶಕರು
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ

ಸ್ಥಳ : ಹಾರೂಗೇರಿ
ದಿನಾಂಕ :

ಪರಿವಿಡಿ

ಅ.ನಂ.	ವಿಷಯಾನುಕ್ರಮಣಿಕೆ	ಪುಟ ಸಂಖ್ಯೆ

ಅಧ್ಯಾಯ - ೧

ಅಧ್ಯಾಯ - ೧

ದೇಸಗತಿ ಪದದ ಅರ್ಥ-ವ್ಯಾಪ್ತಿ - ಉದ್ದೇಶ ಮತ್ತು ಅವಶ್ಯಕತೆ ಸ್ವರೂಪ - ಪೂರ್ವ ಪ್ರಯತ್ನಗಳ ಸಮೀಕ್ಷೆ

ದೇಸಗತಿ ಪದದ ಅರ್ಥ :

ಕರ್ನಾಟಕವನ್ನಾಳಿದ ಹಲವು ರಾಜ ಮನೆತನಗಳಲ್ಲಿ ಶಾತವಾಹನವು ಕದಂಬರು ಗಂಗರು, ಬಾದಾಮಿಯ ಚಾಲುಕ್ಯರು, ಕಲ್ಯಾಣಿಯ ಚಾಲುಕ್ಯರು , ರಾಷ್ಟ್ರಕೂಟರು, ಹೋಯ್ಸಳರ ವಿಜಯನಗರದ ಅರಸರು, ಮೈಸೂರಿನ ಒಡೆಯರು ಪ್ರಮುಖರು ಇವರೆಲ್ಲರೂ ಮಹಾಸಾಮ್ರಾಜ್ಯಗಳನ್ನೇನೋ ಸ್ಥಾಪಿಸಿ ಅಧಿಪತಿಗಳೆನಿಸಿಕೊಂಡಿರಬಹುದು ಆದರೆ, ಇವರ ಪೂರ್ವಜರೆಲ್ಲರೂ ಅನೇಕ ಸಂಸ್ಥಾನಗಳನ್ನು ವಿಲಿನಗೊಳಿಸಿಕೊಂಡು ಅವುಗಳನ್ನೇ ತಮ್ಮ ಅಧೀನದಲ್ಲಿ ಇಟ್ಟುಕೊಂಡು ಆಳ್ವಿಕೆ ಮಾಡಿರುವುದು ನಮ್ಮ ರಾಜ್ಯದ ಚರಿತ್ರೆಯ ಪುಟಗಳಲ್ಲಿ ಕಾಣ ಸಿಗುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಸಾಮ್ರಾಜ್ಯಗಳ ನಿರ್ಮಾಣಕ್ಕೆ, ಏಳಿಗೆಗೆ ಪರೋಕ್ಷವಾಗಿ ಶ್ರಮಿಸಿದ, ಹೋರಾಡಿದ ಅನೇಕ ಸಾಮಂತರು, ಪಾಳೆಗಾರರು, ಮತ್ತು ಸಂಸ್ಥಾನಗಳ ದೇಸಗತಿಗಳ ಶ್ರಮ ಅನಾವರಣಗೊಳ್ಳುತ್ತದೆ. ಇದೇ ನಿಲುವಿನ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾ ಹೋದಾಗ ನಮ್ಮ ಚರಿತ್ರೆಯ ಅಧ್ಯಯನ ಕೇವಲ ಸಾಮ್ರಾಜ್ಯಗಳ ಅಧ್ಯಯನದಿಂದ ಮಾತ್ರ ಪೂರ್ಣಗೊಳ್ಳುವುದಿಲ್ಲ. ಅದು ಸಂಸ್ಥಾನಗಳ ಅಧೀನರಾಗಿ ಕೆಲಸ ಮಾಡಿದವರೆಲ್ಲರ ಅಧ್ಯಯನದಿಂದ ಮಾತ್ರ ಸಾಧ್ಯವಾಗುತ್ತದೆ ಎಂಬ ಸ್ಪಷ್ಟ ಧೋರಣೆ ಈ ನನ್ನ ದೇಸಗತಿಗಳ ಕುರಿತ ಪ್ರಸ್ತುತ ಅಧ್ಯಯನ ಪ್ರಬಂಧ ತಾಳಿದೆ.

ಸಾಮಂತರು ವಿಜಯನಗರದ ಕಾಲಕ್ಕೆ ತಮ್ಮದೆಯಾದ ವಿಶಿಷ್ಟ ಕಾರ್ಯಗಳ ಮೂಲಕ ಆಳರಸರ ಅಡಿಯಲ್ಲಿ ಆಳ್ವಿಕೆ ನಡೆಸಿರುವದು ಕಂಡು ಬರುತ್ತದೆ. ಇವರು ರಾಜರ ಆಹ್ವಾನದ ಮೇರೆಗೆ ಯುದ್ದಗಳಲ್ಲಿ ಭಾಗವಹಿಸುತ್ತಿದ್ದರು. ಸಾಮಂತರು ರಾಜನಿಗೆ ಯುದ್ಧದಲ್ಲಿ ಗೆದ್ದ ಸಂಪತ್ತಿನಲ್ಲಿ ಅಧಿಕ ಪಾಲನ್ನು ನೀಡಬೇಕಾಗುತ್ತಿತ್ತು.


ಮಾಂಡಳಿಕರು ಸಾಮಂತರಿಗಿಂತ ಭಿನ್ನವಾದ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇವರು ಸಂಪೂರ್ಣವಾಗಿ ರಾಜನ ಅಧೀನದಲ್ಲಿಯೇ ಕಾರ್ಯ ಪ್ರವರ್ತರಾಗಬೇಕಿತ್ತು. ಯುದ್ದ ಇನ್ನಿತರ ಕಾರ್ಯಗಳಲ್ಲಿ ರಾಜನ ಬೇಡಿಕೆಯಂತೆ ಸೈನಿಕರನ್ನು ಪೂರೈಸಬೇಕಾಗುತ್ತಿತ್ತು. ರಾಜನ ಆಜ್ಞೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತಿತ್ತು.

'ಪಾಳೆಗಾರರು ಉತ್ತರ ಕರ್ನಾಟಕ ದೇಸಾಯಿಗಳಂತೆ ದಕ್ಷಿಣ ಕರ್ನಾಟಕದಲ್ಲಿ ಇವರ ಪಾತ್ರ ಪ್ರಮುಖವಾಗಿದ್ದಂತೆ ಕಂಡು ಬರುತ್ತದೆ. ದೇಸಾಯಿಗಳಂತೆ ಪಾಳೆಗಾರರು ಸ್ವತಂತ್ರ ಆಡಳಿತಗಾರರಂತೆ ವರ್ತಿಸುತ್ತಿದ್ದರು. ಬಹು ವಿಸ್ತಾರದ ಭೂಮಿ, ಆಸ್ತಿ - ಪಾಸ್ತಿಗಳನ್ನು ಹೊಂದಿದ್ದು

ಆ ಸ್ಥಳದ ಶಾಶ್ವತ ನಿವಾಸಿಗಳಾಗಿದ್ದರು. ಯುದ್ಧದ ಸಮಯದಲ್ಲಿ ಸ್ವತಃ ತಮ್ಮ ದಂಡನ್ನು ಪ್ರತಿನಿಧಿಸುತ್ತಿದ್ದರು.' (೧)

ದೇಸಗತಿಗಳು ಉತ್ತರ ಕರ್ನಾಟಕದ ಬೆಳಗಾವಿ ಹಾಗೂ ಬಾಗಲಕೋಟ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ದೇಸಗತಿಗಳು ಸ್ಥಳೀಯ ಸರ್ಕಾರದ ಪ್ರತಿನಿಧಿಗಳಾಗಿದ್ದರು ಇವರ ಆಳ್ವಿಕೆಯು ಸಾಮಂತ, ಮಾಂಡಳಿಕ, ಪಾಳೆಗಾರರ ನಂತರ ಬರುವ ಅಧಿಕಾರಿ ವರ್ಗವಾಗಿದೆ. ಇವರು ಆಳಿದ ಪ್ರದೇಶವನ್ನು 'ಪರಗಣ' ಎನ್ನುಲಾಗುತ್ತಿತ್ತು. ಪರಗಣವು ಆಡಳಿತ ಸಮುದಾಯದ ಕೇಂದ್ರವಾಗಿತ್ತು ಇದರ ಆಡಳಿತ ನೋಡಿಕೊಳ್ಳುತ್ತಿದ್ದವನೆ ದೇಸಾಯಿ. ಪರಗಣದಲ್ಲೆ ದೇಸಾಯಿ ವಾಸಿಸುತ್ತಿದ್ದ. ತನ್ನ ಹತೋಟಿಯಲ್ಲಿದ್ದ ಪ್ರದೇಶವನ್ನು ಅನೇಕ ಉಪ ವಿಭಾಗಗಳಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು .

ಅವು ಈ ಕೆಳಗಿನಂತಿವೆ. -



ನಾಯಕ ಪಟ್ಟ ಧರಿಸಿದ್ದ ದೇಸಾಯರು ಸಮಾಜದ ಪ್ರಜಾ ಪಾಲಕರಾಗಿ, ದಂಡಿನ ನಾಯಕರಾಗಿ, ಕರ್ತವ್ಯ ನಿರ್ವಹಿಸುತ್ತಿದ್ದರು. ಕ್ರಮೇಣ ರಾಜಕೀಯ ಸ್ಥಿತ್ಯಂತರ ಮತ್ತು ವಿಕೇಂದ್ರಿಕರಣದಂಥಹ ನೀತಿಯಿಂದ ಬಹುಸಂಖ್ಯಾತರು ಹುಟ್ಟಿಕೊಂಡರು, ಇವರ ಮುಖ್ಯ ಕರ್ತವ್ಯಗಳೆಂದರೆ, ಕಂದಾಯ ವಸೂಲಿ, ಸ್ಥಾನಿಕ ಸಮಸ್ಯೆಗಳನ್ನು ಬಗೆಹರಿಸುವದಾಗಿತ್ತು. ಸ್ಥಾನಿಕವಾಗಿ ದೇಸಾಯಿ, ದೇಶಮುಖ, ಶ್ರೀಮಂತ ಎಂಬ ಹೆಗ್ಗಳಿಕೆಗೆ ಇಂದಿಗೂ ಪಾತ್ರರಾಗಿದ್ದಾರೆ. ಜನಪ್ರತಿನಿಧಿಗಳಾಗಿ ಜನಾನುರಾಗಿಗಳಾಗಿದ್ದಾರೆ. ಒಟ್ಟಾರೆಯಾಗಿ ಈ ದೇಸಗತಿಗಳ ಮುಂದಿನ ನಡೆ ಅಧ್ಯಯನದ ಕುತೂಹಲತೆಯನ್ನು ಹೆಚ್ಚಿಸುತ್ತದೆ.

ದೇಸಗತಿ ಪದದ ಅರ್ಥ : -

ದೇಸಗತಿ ಎಂದರೆ, ಪರಗಣ, ವತನ ಎಂದು ಕರೆಯುತ್ತಾರೆ. ಹಾಗೆಯೇ ಸಂಸ್ಥಾನಿಕರೆಂದು ಕೂಡ ಬಳಕೆಯಲ್ಲಿದೆ. ಆಡು ಭಾಷೆಯಲ್ಲಿ ದೇಸಗತಿ ಎಂಬ ಪದ ಬಳಕೆಯಾಗದಿದ್ದರೂ ಕೂಡ, ವತನದಾರರೆಂದು ಕರೆಯುವುದು ಬಹುಪಾಲು ರೂಢಿಯಲ್ಲಿದೆ. ಹಾಗಾಗಿ ಇವರನ್ನು ಇಲ್ಲಿ ದೇಸಗತಿಗಳೆಂದೇ ಉಲ್ಲೇಖಿಸುತ್ತೇನೆ. ದೇಸಗತಿ ವತನದಾರರು ಬಹುಪರಗಣಗಳ ಯಜಮಾನಿಕೆಯ

(೧) ಪುಟ ಸಂಖ್ಯೆ : ೩೩೪ ಸಂಪಾದಕರು : ಪ್ರೊ. ಲಕ್ಷ್ಮಣ ತೆಲಗಾಂವಿ ಕರ್ನಾಟಕ ಪಾಳೆಗಾರರ ನ್ಯಾಯಾಡಳಿತ ಪ್ರಕಟಣೆಯ ವರ್ಷ : ೨೦೦೮

ವಾರಸುದಾರರಾಗಿದ್ದರು. ಒಂದು ಪರಗಣ ಸುಮಾರು ೨೦ ರಿಂದ ೫೦ ಹಳ್ಳಿಗಳ ಸಮೂಹವಾಗಿತ್ತು. ಅದರ ಮೇಲ್ವಿಚಾರಣೆಯನ್ನು ಆಡಳಿತದ ಹಕ್ಕನ್ನು ಸ್ಥಾನಿಕ ಒಡೆಯರಿಗೆ ವಹಿಸಿಕೊಟ್ಟದ್ದು ದೇಸಗತಿಯವರಿಂದ ಎಂಬುದು ಬಹುಜನರ ಅಭಿಪ್ರಾಯವಾಗಿದೆ. ಇಂಥಹ ದೇಸಗತಿಗಳ ಆಡಳಿತವನ್ನು ಸ್ಥಾನಿಕ ಒಡೆಯರೆನಿಸಿದ ದೇಸಪಾಂಡೆ, ನಾಡಗೌಡ, ಕುಲಕರ್ಣಿ, ದೇಸಾಯಿ, ನಾಡಿಗ, ನಾಡಿಗೇರ, ಮಹಾರಾಷ್ಟ್ರದಲ್ಲಿ ಚೌಧರಿ, ಚೌಗುಲೆ, ಎಂದು ಕರೆಯುತ್ತಿದ್ದ ವಾಡಿಕೆ ಇದೆ. ಈ ದೇಸಗತಿಯ ಮೂಲ ಪುರುಷರನ್ನು (ದೇಸಾಯಿಗಳನ್ನು 'ಡಿಸ್ಟ್ರಿಕ್ ಹೆರಿಡಿಟ್ರಿ ಆಫಿಸರ್ಸ್ ' ಅಥವಾ ' ಪರಗಣ' ಇನಾಂದಾರರೆಂದು ಕರೆಯುತ್ತಿರುವುದು ಇನಾಂ ಕಮಿಷನ್ ದಾಖಲೆಗಳಲ್ಲಿದೆ.)

ದೇಸಗತಿ ಪದವನ್ನು ವಿಭಜಿಸಿದಾಗ ಅದರ ಅರ್ಥವು ಭಿನ್ನ ಭಿನ್ನವಾಗಿ ಕಂಡು ಬರುತ್ತದೆ.

ದೇಶಾಖತ್ > ದೇಶಗತ್ > ದೇಶಗತಿ > ದೇಸಗತಿ

ಎಂಬ ವೈರುದ್ಧತೆ ಇರುವ ಪದಗಳು ನೋಡಲು ಕಂಡು ಬಂದರು ಇವೆಲ್ಲವು ಮೂಲದಲ್ಲಿ ಒಂದೇ ಆಶಯವನ್ನು ಹೊಂದಿವೆ. ಈ ಪದಗಳನ್ನು ವಿಭಜಿಸಿದಾಗ ದೇಶ - ದೇಸ - ದೇಶಿ ಎಂಬವುಗಳು ಕೂಡ ಒಂದೇ ಅರ್ಥವನ್ನು ಧ್ವನಿಸುತ್ತವೆ. ಇವೆಲ್ಲದರ ಅರ್ಥದ ಹಿನ್ನಲೆಯಲ್ಲಿ ಗಮನಿಸಿದಾಗ ಸ್ಥಾನಿಕ, ಸ್ಥಳೀಕ, ಗ್ರಾಮಾಧಿಕ ಎಂಬುದರ ಮೂಲವನ್ನು ಇಲ್ಲಿ ಅರ್ಥೈಸಬಹುದು. 'ದೇಶ ಎಂಬುದು ದ್ರಾವಿಡ ಭಾಷೆಯ ಮೂಲ ಪದವಾಗಿದೆ' (೨). ಈ ಪದದ ಅರ್ಥದ ಜಾಡನ್ನು ಹಿಡಿದಾಗ ದೇಶದಲ್ಲಿ ಹುಟ್ಟಿದವ, ದೇಶದಲ್ಲಿ ವಾಸಿಸುವ, ದೇಶದಲ್ಲಿ ಇರುವವ ಎಂಬುದಾಗಿ ತೋರುತ್ತದೆ.

'ದೇಸ್ ಎಂದರೆ ಸ್ಥಳ, ನಾಡು, ಪ್ರದೇಶ, ಸೀಮೆ ಎಂದಾಗುವುದು. ' (೩)

ಹಾಗೇಯೇ ಗತ, ಖತ್, ಗತಿ, ಎಂಬಂತಹ ಉತ್ತರ ಪದದ ಅರ್ಥವನ್ನು ಲಕ್ಷಿಸಿದಾಗ ಅದನ್ನು ಈ ರೀತಿ ಗ್ರಹಿಸಬಹುದಾಗಿದೆ. ಹೊಂದು, ಒಳಪಡು ಎಂಬುದಾಗಿ ಪದದ ಮೂಲಾರ್ಥ ಕೂಡ ಧ್ವನಿಸುತ್ತದೆ. ಈಗಾಗಲೇ ದೇಸ್ ಪದವನ್ನು ಚರ್ಚಿಸಿದ್ದರು ಕೂಡ ಇನ್ನೂ ಅದರ ಒಳ ಹೂರಣವನ್ನು ಅಪೇಕ್ಷಣಿಯ ನೆಲೆಯಲ್ಲಿ ಗುರುತಿಸಿದಾಗ ದೇಶ್ ಸಂಸ್ಕೃತ ಪದವಾದರೆ, ದೇಸ್ ಎಂಬುದು ಅದರ ತದ್ಭವ ಪದವೆನಿಸಿದೆ. ದೇಶ್ ಪದದೊಡನೆ ಸೇರಿದ 'ಗತಿ' ಸಮೀಕರಿಸಿ ಹೇಳುವಲ್ಲಿ ದೇಶ್‌ಗತಿ , ದೇಸ್‌ಗತಿ ಎಂಬಂಥಹ ಪದವಾಗಿ ರೂಪಗೊಂಡಿದೆ.

ಒಟ್ಟಾರೆಯಾಗಿ ಗೃಹಿಸುವದಾದರೆ ಈ ಎಲ್ಲ ಹೇಳಿಕೆಗಳು ವಿಮರ್ಶೆಯ ಪರಿಭಾಷೆಯಲ್ಲಿ ತಾತ್ಕಾಲಿಕವಾಗಿ ದೇಸ್‌ಗತಿಯನ್ನು ಉಲ್ಲೇಖಿಸುವಲ್ಲಿ ಸಹಕರಿಸುತ್ತವೆ.

---

(೨) ಪುಟ ಸಂಖ್ಯೆ : ೧೮ ಡಾ. ಸಂಗಮೇಶ ಕಲ್ಯಾಣಿ 'ಬಾಗಲಕೋಟ ಜಿಲ್ಲೆಯ' ದೇಸಗತಿಗಳು ಅಪ್ರಕಟಿತ ಮಹಾಪ್ರಬಂಧ. ವರ್ಷ : ೨೦೦೬

(೩) ಅದೇ ಪುಟ.

ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನಕ್ಕೆ ಅಥಣಿ ತಾಲೂಕಿನ ದೇಸಗತಿಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಶೇಷವಾಗಿ ಅನುಲಕ್ಷಿಸಿ ಪವಾರ ದೇಸಗತಿ (ಮಂಗಸೂಳಿಕರ) ಎಂಬುವದನ್ನು ಆಯ್ಕೆ ಮಾಡಿ ಕೊಂಡಿದ್ದೇನೆ. ಈ ತಾಲೂಕಿನಲ್ಲಿ ಬಹುಪಾಲು ದೇಸಗತಿಗಳು ಕಾಣಸಿಗುವುದಿಲ್ಲ. ಇಡೀ ಜಿಲ್ಲೆಯನ್ನು ಅನುಲಕ್ಷಿಸಿದಾಗ ಸುಮಾರು ದೇಸಗತಿಗಳು ಕಾಣಸಿಗುತ್ತವೆ. ಪ್ರಸ್ತುತ ಅಧ್ಯಯನಕ್ಕೆ ಕ್ಷೇತ್ರ ಕಾರ್ಯ ಕೈಕೊಂಡಾಗ ಬೇರೆ ಬೇರೆ ಜಹಗೀರದಾರರು ಇನಾಂದಾರರು) ಕಾಣಸಿಗುತ್ತಾರೆ. ಅಂತಹವರಲ್ಲಿ ರಾಸ್ತೆ, ಘೋರ್ಪಡೆ, ದೇಸಾಯಿಗಳು ಇತ್ಯಾದಿಯಾಗಿ ಕಾಣಸಿಗುತ್ತಾರೆ

ಈ ತಾಲೂಕಿನಲ್ಲಿ ದೇಸಗತಿಗಳವರು ಮಂಗಸೂಳಿಕರ ಎಂದೇ ಪರಿಚಿತರಾಗಿದ್ದಾರೆ. ಅಂತಹವರನ್ನು ಅಧ್ಯಯನಕ್ಕೆ ಅಳವಡಿಸಿಕೊಂಡು . ಬಹು ನೆಲೆಯಲ್ಲಿ ಪ್ರಾಸ್ತಾಗಿಕವಾಗಿ ದೇಸಗತಿ ಕೂಡ ಒಂದಾಗಿ ಕಂಡು ಬರುತ್ತದೆ. ಅದನ್ನು ಅಲಕ್ಷಿಸಬಾರದೆಂಬ ಆಶಯದೊಂದಿಗೆ ಸಂಕ್ಷಿಪ್ತವಾಗಿ ಇಲ್ಲಿ ಚರಿತ್ರೆಯನ್ನು ಕಟ್ಟಿಕೊಡುತ್ತೇನೆ. ಈ ಎಲ್ಲ ಸಂಸ್ಥಾನಿಕರು (ಇನಾಂದಾರರು) ಸ್ವತಂತ್ರ್ಯವಾಗಿ ಜನ ಸಮುದಾಯದೊಂದಿಗೆ ಬೆರೆತು ಸಾರ್ವಜನಿಕ ಹಿತಾಸಕ್ತಿ ಬಯಸುತ್ತಿರುವುದರಿಂದ ಅವರನ್ನು ಕಡೆಗಣಿಸದೆ ಮೂಲ ದೇಸಗತಿಯೊಂದಿಗೆ ಸೇರಿಸಿಕೊಂಡು ಅಧ್ಯಯನಿಸಲಾಗಿದೆ.

ಒಟ್ಟಾರೆಯಾಗಿ ಗಮನಿಸುವುದಾದರೆ, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ದೇಸಗತಿಗಳು ಎಂಬುದು ಈ ಅಧ್ಯಯನ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಅಧ್ಯಯನದ ಅವಶ್ಯಕತೆ :

ಗತಿಸಿ ಹೋದ ಇತಿಹಾಸದ ತುಣುಕುಗಳು ಬಹುಕಾಲದ ನಂತರ ತಮ್ಮದೆಯಾದ ಸ್ಥಾನವನ್ನು ಅಲಂಕರಿಸುತ್ತವೆ.ಅಂತಹ ಅಂಶಗಳು ದೊಡ್ಡದಿರಲಿ, ಚಿಕ್ಕದಿರಲಿ, ಅದು ತುಂಬಾ ಅರ್ಥಪೂರ್ಣವಾದುದೆ. ಸ್ವಾತಂತ್ರ್ಯ ಪೂರ್ವದಲ್ಲಿ ಆಚಿನ ಆಚೆ ಕರ್ನಾಟಕದಲ್ಲಿ ಆಡಳಿತ ಅತ್ಯಂತ ಬಿಗುವಿನಿಂದ ಕೂಡಿತ್ತು. ಅದು ಶ್ರಮಪೂರ್ಣ ಸಾಹಸಿ ಆಡಳಿತವೆಂದೆ ಭಾವಿಸಬೇಕು. ಕೃಷ್ಣಾ ನದಿಯ ಉತ್ತರ ಭಾಗ ಮುಸ್ಲಿಂ ಅರಸರುಗಳದ್ದು ಆದರೆ, ಕೃಷ್ಣಾ ನದಿಯ ದಕ್ಷಿಣ ಭಾಗ ವಿಜಯ ನಗರದ ಅಧಿಪತ್ಯಕ್ಕೆ ಒಳಪಟ್ಟಿತ್ತು. ಇವೇರಡರ ಘರ್ಷಣೆಯಲ್ಲಿ ಹುಟ್ಟಿದವುಗಳೇ ದೇಸ್‌ಗತಿಗಳು. ಇಂಥಹ ಗ್ರಾಮ ಮಟ್ಟದ ಆಡಳಿತವನ್ನು, ಸಮಗ್ರ ಚಿತ್ರಣವನ್ನು ಬಿಂಬಿಸುವದು ಈ ಅಧ್ಯಯನದ ಉದ್ದೇಶವಾಗಿದೆ.

‘ ಗಂಗ, ಕದಂಬ, ಹೊಯ್ಸಳ, ಚಾಲುಕ್ಯ , ರಾಷ್ಟ್ರಕೂಟ, ನವಾಬರ ಇತಿಹಾಸ ಎಷ್ಟು ಅರ್ಥಪೂರ್ಣ ಹಾಗೂ ಐತಿಹಾಸಿಕವೆಂದು ಗುರುತಿಸುತ್ತೆವೆಯೋ ಅದೇ ರೀತಿಯಲ್ಲಿಯೇ ಈ ಸಂಸ್ಥಾನಗಳ ಅಥವಾ ಈ ದೇಸ್‌ಗತಿಗಳ ಆಳ್ವಿಕೆಯನ್ನು ಗುರುತಿಸಿ ಅವರು ಸಮಾಜಕ್ಕೆ ಕೊಟ್ಟ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕೊಡುಗೆಗಳು ಏನೆಂಬುದನ್ನು ಅರಿವುದು ಸಹ ಅಷ್ಟೇ ಪ್ರಮುಖವಾದ ಘಟ್ಟವಾಗಿದೆ’. (೪)

ಇಂಥಹ ದೇಸ್‌ಗತಿಗಳ ಸಮಗ್ರ ತಲಸ್ಪರ್ಷ ಅಧ್ಯಯನ ನಡೆಯದೆ ಇದ್ದಲ್ಲಿ ಅವುಗಳ ಪರಿಚಯಾತ್ಮಕ, ಸಂಶೋಧನಾತ್ಮಕ ಅಂಶಗಳನ್ನು ಹೊರಹಾಕದಿದ್ದರೆ ಇತಿಹಾಸದಲ್ಲಿ ಬಹುದೊಡ್ಡ ಕೊರತೆಯಾದಂತೆ ಅನಿಸುತ್ತದೆ. ದೇಸಗತಿಗಳ ಆಡಳಿತ ಕ್ರಮ, ಅವುಗಳ ಸಾಧನೆಗಳ ಮೂಲಕವಾಗಿ ಈ ನಾಡಿಗೆ ಕೊಟ್ಟಂಥಹ ಕಾಣಿಕೆ ಏನೆಂಬುದನ್ನು ಅಧ್ಯಯನಿಸುವುದೆ ಈ ದೇಸಗತಿಗಳ ಅಧ್ಯಯನದ ಮೂಲ ಉದ್ದೇಶವಾಗಿದೆ.

ಉತ್ತರ ಕರ್ನಾಟಕವೆ ದೇಸಗತಿಗಳ ಉಗಮಕ್ಕೆ ಕಾರಣವಾಗಿದೆ. ಹಾಗಾಗಿ ಈ ಭಾಗದ ಪ್ರತಿಯೊಂದು ಗ್ರಾಮವು ದೇಸಗತಿಯ ಹೆಸರನ್ನು ಸೂಚಿಸುತ್ತವೆ. ಸಮಾಜದ ಕಲ್ಯಾಣವನ್ನೆ ಸಾಧಿಸುತ್ತಾ, ನ್ಯಾಯ , ಧರ್ಮ, ಶಿಕ್ಷಣ , ಸಾಹಿತ್ಯ, ಕಲೆ, ಅರವಟ್ಟಿಗೆ, ಗ್ರಾಮಗಳ ಪುನರ್ ನಿರ್ಮಾಣ, ಹಾಗೂ ನೈಸರ್ಗಿಕ ಪರಿಸರವನ್ನು ಕಾಪಾಡುವ ಜನಮನದಲ್ಲಿ ಧೈರ್ಯ , ಸಾಹಸಗಳನ್ನು ತುಂಬುವಲ್ಲಿ ಅತ್ಯಮೋಘವಾದ ಪಾತ್ರವನ್ನು ತುಂಬುವದರಲ್ಲಿ ಮೇಲುಗೈ ಸಾಧಿಸಿದವರೆ ದೇಸಾಯಿಗಳಾಗಿದ್ದಾರೆ. ಯಾವುದೇ ಆಸೆ ಆಮಿಸಕ್ಕೆ ಒಳಗಾಗದೇ ಆ ದಿನಮಾನದಲ್ಲಿ ಸಂಸ್ಕೃತಿಯ ಸಂವಾಹಕರಾದವರು , ಉಪೇಕ್ಷಿತ ನೆಲೆಯಲ್ಲಿ ನಿಂತವರು ದೇಸಗತಿಗಳೆಂಬುದನ್ನು ಮರೆಯುವಂತಿಲ್ಲ. ಎಂಥಹ ಉನ್ನತ ಹುದ್ದೆಯನ್ನು ಅಲಂಕರಿಸಿದರು ಪ್ರಜೇಗಳನ್ನು ‘ ಯಥಾ-ರಾಜ, ತಥಾ-ಪ್ರಜಾ’ ಎನ್ನುವ ನಾಣ್ಣುಡಿಯಂತೆ

---

(೪) ಪುಟ ಸಂಖ್ಯೆ : ೧ ಡಾ. ಎ. ಸಿ. ನಾಗಭೂಷಣಮೂರ್ತಿ ‘ಧಾರವಾಡ ಜಿಲ್ಲೆಯ ದೇಸಗತಿಗಳು’ ಅಪ್ರಕಟಿತ ಪ್ರಬಂಧ.

ಇವರನ್ನು ರಕ್ಷಿಸುತ್ತಿದ್ದುದ್ದಲ್ಲದೆ ದೇಸಾಯಿಗಳ ಕಾರ್ಯ ವೈಖರಿ ಯಾವ ಅರಸರೊಂದಿಗೂ ಈರ್ಷೆ ಬೆಳೆಸದೆ ಪ್ರಜೆಗಳ ಮತ್ತು ರಾಜರುಗಳ ನಡುವಿನಲ್ಲಿ ಸುಮಧುರ ಭಾಂದವ್ಯವನ್ನು ಕಲ್ಪಿಸಿ ಒಂದು ರೀತಿಯ 'ಕ್ಯಾಸ್ಟೇಲ್ ಏಜೆಂಟ್' ಆಗಿ ಕಾರ್ಯ ನಿರ್ವಹಿಸಿ, ದಕ್ಷಿಣ ಕರ್ನಾಟಕದ ಅರಸರಂತೆ ತಮ್ಮ ಚಿರ ಖ್ಯಾತಿಯನ್ನು ಇಂದಿಗೂ ಉಳಿಸಿಕೊಂಡಿರುವದನ್ನು ಹಲವಾಗು ದೇಸಗತಿಗಳಲ್ಲಿ ಗಮನಿಸುವುದಾಗಿದೆ.

ಈ ರೀತಿ ದೇಸಗತಿ ಮನೆತನಗಳ ಇತಿಹಾಸವನ್ನು ಒಂದೆಡಗೆ ಸಮಷ್ಟಿ ಗೊಳಿಸಲು ಆಕರ ಸಾಮಗ್ರಿಗಳ ಕೊರತೆ ವೀಪರೀತವಾಗಿ ಎದ್ದು ಕಾಣುತ್ತದೆ. ಕಾರಣವೆಂದರೆ, ಈ ಮನೆಗೆ ಬಂದಂತಹ ದತ್ತಕ ಪುತ್ರರು ತಮ್ಮ ಮೂಲ ಇತಿಹಾಸದ ಬಗ್ಗೆ ನಕಾರಾತ್ಮಕ ತಂತ್ರಗಳಲ್ಲಿ ತೊಡಗಿದ್ದು ತಮ್ಮ ದೇಸಗತಿ ಚರಿತ್ರೆಯನ್ನು ಇತಿಹಾಸಕ್ಕೆ ವಿಲೀನಗೊಳಿಸುವದನ್ನು ಬಿಟ್ಟು ಭೂಗತಗೊಳಿಸುತ್ತಾ ಸಾಗಿ ಬಂದಿದ್ದಾರೆ.

ಎರಡನೇಯದಾಗಿ, ಐಷಾರಾಮಿ ವೈಭವೋಪೇತ ಜೀವನಕ್ಕೆ ಗಂಟು ಬಿದ್ದಿದ್ದರಿಂದ ವಿಲಾಸಿಪ್ರೀಯರಾಗಿದ್ದರಿಂದ ತಮ್ಮ ಚರಿತ್ರೆಯನ್ನು ಮರೆ ಮಾಚಿದ್ದು ಕಾರಣವಾಗಿದೆ.

ಮೂರನೇಯದಾಗಿ, ರಾಜ್ಯ ಸಾಮ್ರಾಜ್ಯಗಳ ಉದಯ ಅಸ್ತಂಗಳ ನೆರಳಿನಾಟದಲ್ಲಿ ಕರ್ನಾಟಕವು ಅದರಲ್ಲಿ ಉತ್ತರ ಕರ್ನಾಟಕವು ಹಿಂದಿನಿಂದಲೂ ತನ್ನದೇಯಾದ ರಾಜಕೀಯ, ಧಾರ್ಮಿಕ, ಸಾಮಾಜಿಕ ಸ್ಥಿರತೆಗಳನ್ನು ಬಲವಾಗಿ ಹರಡಿಕೊಂಡಿದ್ದರು ಸಹ ಈ ಪ್ರದೇಶವು ತನ್ನದೆಯಾದ ವೈಶಿಷ್ಟ್ಯತೆಗಳನ್ನು ಅಳವಡಿಸಿಕೊಂಡು ಇಂದಿನವರೆಗೂ ಆದರ್ಶಪ್ರಾಯವಾದಂತೆ ಕಂಡು ಬರುತ್ತದೆ. ಈ ದಿಶೆಯಲ್ಲಿ ಅನೇಕ ಜಾತಿ, ಮತ, ಪಂಥದವರು ಈ ನಾಡಿಗೆ 'ತಮ್ಮ ದೇಹಗಳನ್ನೆ ಮುಡುಪಾಗಿಟ್ಟ ವಿರೋಚಿತವಾದ ನಡುವಳಿಕೆಗಳು ಆದರ್ಶ ಜೀವನ, ಸಾವಿನೊಡನೆ ಹೋರಾಟಿ ನಾಡಿಗಾಗಿ ತ್ಯಾಗ ಮಾಡಿದ್ದಾರೆ' (೫). ಇಂಥವರು ತ್ಯಾಗ ಸಂಪನ್ನರು, ಭೋಗ ಸಂಪನ್ನರು ಆಗಿದ್ದರೆಂಬುದ್ದಕ್ಕೆ ಲೆಂಕರು, ಗರುಡರು, ವೇಳೆವಾರಿಗಳು, ಇತ್ಯಾದಿ ವೃತ್ತಿಯವರು ಸಾಕ್ಷಿಯಾಗಿದ್ದಾರೆ.

ಇದೇ ಮಾದರಿಯಲ್ಲಿ ನಾಡಿನ ಏಳ್ಗೆಯಲ್ಲಿ ಸಕ್ರಿಯ ಪಾತ್ರವಹಿಸಿದ ಈ ನಾಡಿನ ದೇಸಗತಿಗಳ ಆಡಳಿತಗಳ ಕ್ರಮವು ಸಹ ಇದೇ ತಳಹದಿಯ ಮೇಲೆ ಸಾಗಿದೆ. ಶೌರ್ಯ, ಸಾಹಸ, ಸದ್ಗುಣ, ಸಂಪನ್ನರನ್ನು ಬಹು ವಿಧದಲ್ಲಿ ಅನೇಕ ದೇಸಗತಿ ಮನೆತನಗಳು ಪೋಷಿಸಿ, ರಕ್ಷಿಸಿ, ಮರ್ಯಾದೆಯುತವಾಗಿ ಸಲ್ಲಿಸುವುದರ ಜೊತೆಗೆ ವೀರರಿಗೆ ಋಣಿಯಾಗಿ ಹೊಗಳಿ ಅಂತಹವರಿಗೆ ಪ್ರಶಸ್ತಿ ನೀಡಿ ಸಮರ್ಥ ಆಡಳಿತವನ್ನು ನಿರ್ವಹಿಸಿದಂತೆ ಕಂಡು ಬರುತ್ತದೆ. ಇಂತಹ ತ್ಯಾಗಶೀಲ ವೀರರುಗಳು ಜನಿಸದಿದ್ದರೆ, ವಿಜಯನಗರದಂಥಹ ಹಲವಾರು ರಾಜ ಮನೆತನಗಳು ಜನಿಸುತ್ತಿರಲಿಲ್ಲ ಎಂಬುದು ವಿಧಿತವಾಗುತ್ತದೆ.

'ಹಿಂದಿನ ಕಾಲದಲ್ಲಿ ರಾಜ ಪುರೋಹಿತರಿಗೆ ಒಳ್ಳೇಯ ಗೌರವವಿತ್ತು. ಇವರನ್ನು ಜನ

---

(೫) ಅದೇ ಪುಟ.

ದೈವ ಸಮಾನರೆಂದು ಭಾವಿಸಿದ್ದರು, ರಾಜರು ಸಹ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ಕಾಣುತ್ತಿದ್ದರು. ಅಲ್ಲದೆ, ಸಾಮಾಜಿಕ ಮೌಲ್ಯಗಳಿಗೆ ಕುಂದು ಬರದ ರೀತಿಯಲ್ಲಿ ಆಡಳಿತ ನಿರ್ವಹಣೆ ಮಾಡುತ್ತಿದ್ದರು. ಪ್ರಜಾಕ್ಷೇಮ, ಸಾಮಾಜಿಕ ಸ್ಥಿರತೆ ಮತ್ತು ರಕ್ಷಣೆ, ತಪ್ಪಿತಸ್ಥರಿಗೆ ಶಿಕ್ಷೆಗಳಂತಹ ಸಾಮಾಜಿಕ ಮೌಲ್ಯಗಳನ್ನು ಚಾಚು ತಪ್ಪದೆ ಪಾಲಿಸುವುದು ಇವರ ಕರ್ತವ್ಯವಾಗಿತ್ತು. ಇಂಥಹ ಆದರ್ಶಮಯ ಆಡಳಿತ ಮತ್ತು ಸಾಮಾಜಿಕ ಮೌಲ್ಯಗಳು ದೇಸಗತಿಗಳ ಮನೆತನಗಳಲ್ಲೂ ಕಾಣಬರುತ್ತವೆ. ಈ ದೇಸಗತಿ ಮನೆತನಗಳ ಪರಸ್ಪರ ವೈವಿಧ್ಯಮಯವಾದ ಚಾರಿತ್ರಿಕ ಅಂಶಗಳು ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಆ ಕಾರಣಕ್ಕಾಗಿ ಈ ಮನೆತನಗಳು ತನ್ನದೆಯಾದ ಅನನ್ಯತೆಯನ್ನು ಪಡೆದುಕೊಂಡಿವೆ. ಈ ಹಿನ್ನಲೆಯಲ್ಲಿ ದೇಸಗತಿಗಳ ಕುರಿತು ಅಧ್ಯಯನ ಮಾಡುವುದು ಅವಶ್ಯವಾಗಿದೆ.' (೬)

---

(೬) ಅದೇ ಪುಟ

ಅಧ್ಯಯನದ ಸ್ವರೂಪ :

ಪ್ರಸ್ತುತ ಪ್ರಬಂಧದ ಮೊದಲ ಅಧ್ಯಾಯವು ದೇಸಗತಿ ಪದದ ಅರ್ಥ, ಅಧ್ಯಯನ ವ್ಯಾಪ್ತಿ, ಅಧ್ಯಯನದ ಉದ್ದೇಶ, ಮತ್ತು ಮಹತ್ವ ಹಾಗೂ ದೇಸಗತಿಯ ಸ್ವರೂಪ ವಿವಿಧ ನೆಲೆಗಳಲ್ಲಿ ಅಧ್ಯಾಯವನ್ನು ಕಟ್ಟಿಕೊಡಲಾಗಿದೆ. ಅಥವಾ ವಿವರಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಮಂಗಸೂಳಿ ಪವಾರ ದೇಸಾಯಿಗಳ ಮನೆತನದ ಸಂಕ್ಷಿಪ್ತ ಚರಿತ್ರೆಯನ್ನು, ಕಾರ್ಯಕ್ಷೇತ್ರವನ್ನು ಈ ಅಧ್ಯಾಯದಲ್ಲಿ ಕಟ್ಟಿ ಕೊಡಲಾಗಿದೆ.

ಅಧ್ಯಾಯ ಮೂರರಲ್ಲಿ ದಿ. ದೈರ್ಯಶೀಲರಾವ್ ಪವಾರ ದೇಸಾಯಿಯವರ ಜೀವನ ಮತ್ತು ಸಾಧನೆಗಳ ಕುರಿತಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಪವಾರ ದೇಸಾಯಿಗಳವರ ಸಾಂಸ್ಕೃತಿಕ ಕೊಡುಗೆಗಳನ್ನು ವಿಶೇಷವಾಗಿ ಗುರುತಿಸಲಾಗಿದೆ. ಆಡಳಿತ, ಸಾಮಾಜಿಕ, ಆರ್ಥಿಕ ಕುರಿತಾಗಿ ಶೈಕ್ಷಣಿಕ ಮತ್ತು ಕಂದಾಯ ವ್ಯವಸ್ಥೆಯನ್ನು ಗಮನದಲ್ಲಿ ಇಟ್ಟುಕೊಂಡು, ಧಾರ್ಮಿಕ ಆಚರಣೆಯನ್ನು ಲಕ್ಷಿಸಿ, ವಿವೇಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಅಥಣಿ ತಾಲೂಕಿನ ಇತರ ದೇಸಗತಿಗಳು ಎಂಬುದರ ಅಡಿಯಲ್ಲಿ ಕೊಕಟನೂರ ದೇಸಾಯಿಗಳ ಸಂಕ್ಷಿಪ್ತ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ಆರರಲ್ಲಿ ಇಡೀ ದೇಸಗತಿಗಳ ಅಧ್ಯಯನದ ಫಲಿತಗಳ ಭಾಗವಾಗಿದೆ. ಒಟ್ಟು ಅಧ್ಯಯನದ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

ಹೀಗೆ ಅಥಣಿ ತಾಲೂಕಿನ ಮಂಗಸೂಳಿಕರ ದೇಸಾಯಿಗಳ ಮನೆತನವನ್ನು ವಿಶೇಷ ಅಧ್ಯಯನಕ್ಕೆ ಒಳಪಡಿಸಿ ಆಡಳಿತಾತ್ಮಕ, ಚಾರಿತ್ರಿಕ ದಾಖಲೆಗಳನ್ನು ಆಧರಿಸಿ ಅಧ್ಯಯನ ನಡೆಸಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಸಂಬಂಧಿಸಿದ ವಿವಿಧ ವಿಷಯವನ್ನು ಜೋಡಿಸಿಕೊಂಡು ಅಧ್ಯಯನಿಸಲಾಗಿದೆ. ಆ ಮೂಲಕ ಸಕಾರಾತ್ಮಕ ಮತ್ತು ನಕಾರಾತ್ಮಕ ಬೆಳವಣಿಗೆಯನ್ನು ಅವುಗಳ ಸಾಮಾಜಿಕ, ಸಾಂಸ್ಕೃತಿಕ ಉಪಯುಕ್ತತೆಯನ್ನು ಚರ್ಚಿಸಲಾಗಿದೆ. ಇಂತಹ ದೇಸಗತಿಗಳನ್ನು ಉಳಿಸಿ ಬೆಳೆಸಿಕೊಳ್ಳಲು ಬೇಕಾದ ಅಭಿಪ್ರಾಯವನ್ನು ಮಂಡಿಸಲಾಗಿದೆ.

ಪೂರ್ವ ಪ್ರಯತ್ನಗಳ ಸಮೀಕ್ಷೆ :

ಜಾಗತೀಕರಣದ ಯುಗದಲ್ಲಿ ಇಂತಹ ಅನೇಕ ಸಾಹಿತ್ಯಿಕ, ಚಾರಿತ್ರಿಕ ಅಧ್ಯಯನಗಳನ್ನು ಮುಂದುವರೆಯಿಸಿಕೊಂಡು ಹೋಗುವುದು ಅಸಾಧ್ಯವಾದದ್ದು ಏನಿಸುತ್ತದೆ. ಏಕೆಂದರೆ, ಸಾಹಿತ್ಯಿಕರ ಓಘವು ಪಶ್ಚಿಮಾಭಿಮುಖಿಯಾಗಿರುವುದರಿಂದ ಸಾಹಿತ್ಯಿಕ ಕ್ರಿಯೆ ಕುಂಟಿತವಾಗುತ್ತದೆ. ಈ ದಿಸೆಯಲ್ಲಿ ಸಂಶೋಧಕರು ಚಾರಿತ್ರಿಕ ಜಾಡನ್ನು ಹಿಡಿದು ಸ್ಥಾನಿಕ ಒಡೆತನದ ಕುರಿತಾಗಿ ಸಂಶೋಧನೆಗೆ ಒಳಪಡದಿರುವುದು ಅಂಶ ಅಲಕ್ಷಿತಕ್ಕೆ ಕಾರಣವಾಗಿದೆ. ಈ ದೆಸೆಯಲ್ಲಿ ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ದೇಸಗತಿಗಳ ಬಗ್ಗೆ ಅಧ್ಯಯನವನ್ನು ಕೈಗೊಂಡಾಗ ಪೂರ್ವ ಪ್ರಯತ್ನಗಳ ಸಮೀಕ್ಷೆಯನ್ನು ಇಡೀ ದೇಸಗತಿಗಳ ನೆಲೆಗಳನ್ನು ಗುರುತಿಸಲು ಪ್ರಯತ್ನಿಸುತ್ತಿರುವಾಗ ವ್ಯವಸ್ಥಿತವಾಗಿ ಅದ್ಯಯನ ನಡೆದಿಲ್ಲ, ಆದರೆ ಇದೇ ಮಾದರಿಯಲ್ಲಿ ದಕ್ಷಿಣ ಕರ್ನಾಟಕದ ಪಾಳೇಗಾರರ ಕುರಿತಾಗಿ ಸಾಕಷ್ಟು ಅಧ್ಯಯನ ನಡೆದಿದೆ ನಮ್ಮ ಸಂಶೋಧಕರ ಅಲಕ್ಷಿತ ಅಧ್ಯಯನದ ದೃಷ್ಠಿಯಿಂದ ತುಂಬಾ ನಿರ್ಲಕ್ಷಕ್ಕೆ ಒಳಗಾಗಿದ್ದು ತಿಳಿದು ಬರುತ್ತದೆ. ಹಾಗೆಯೇ ಕೆಲವು ಸಾಹಿತಿಗಳು, ಪ್ರಬಂಧಕಾರರು, ಲೇಖಕರು, ವಿದ್ವಾಂಸರು ಚಿಕ್ಕ ಪುಟ್ಟ ಕುರಿತಾಗಿ ಅಧ್ಯಯನ ನಡೆಯಬೇಕೆಂದು ತಾತ್ಕಾಲಿಕ ಹೇಳಿಕೆ ನೀಡುತ್ತಿರುವದು ಕಂಡುಬಂದರೂ ನಿರ್ದಿಷ್ಟ ಅಧ್ಯಯನಕ್ಕೆ ಒಳಪಡಿಸದೇ ಇರುವುದು ಇನ್ನೂ ವಿಷಾದನೀಯ.

ದಕ್ಷಿಣ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕ ಸ್ಥಳೀಯ ಆಡಳಿತದ ಜವಾಬ್ದಾರಿಯನ್ನು ಹೊತ್ತಂತಹ ಪರಗಣಗಳ ಅಧಿಕಾರಿಗಳನ್ನು ಚೌಗಲೆ, ಚೌಧರಿ, ದೇಸಾಯಿ, ನಾಡಗೌಡ ಎಂದು ಕರೆದದ್ದು ಉಂಟು. ಹಾಗಾಗಿ, ದಕ್ಷಿಣ ಮಹಾರಾಷ್ಟ್ರದಲ್ಲಿ ಈ ಕುರಿತಾದ ಯಾವುದೇ ಒಂದು ಹೇಳಿಕೆಗಳು ಇಲ್ಲ. ಆದರೆ, ತತ್ಕಾಲಿಕ ಒಂದು ಸಮಾದಾನದ ಸಂಗತಿಯೆನೆಂದರೇ ಕೆಲವು ಬಿಡಿ ಚಿಂತನೆಗಳು, ಲೇಖನಗಳು ನಡೆದದ್ದು ಮಾತ್ರ ಕಾಣುತ್ತದೆ. ಇತ್ತಿಚೇಗೆ ಧಾರವಾಡ ಜಿಲ್ಲೆಯ ದೇಸಗತಿಗಳ ಕುರಿತು ಡಾ. ಎ.ಸಿ. ನಾಗಭೂಷಣಮೂರ್ತಿ ಅವರು ಅಧ್ಯಯನಿಸಿದ್ದಾರೆ. ಎರಡನೆಯದಾಗಿ, ಹಂಪಿ ಕನ್ನಡ ವಿಶ್ವ ವಿದ್ಯಾಲಯದಿಂದ ಬಾಗಲಕೋಟೆ ಜಿಲ್ಲೆಯ ದೇಸಗತಿಗಳ ಕುರಿತು ಡಾ. ಸಂಗಮೇಶ ಕಲ್ಯಾಣಿ, ಬಿಜಾಪೂರ ಜಿಲ್ಲೆಯ ದೇಸಗತಿಗಳ ಕುರಿತು ಡಾ. ಶೇಖದಾರ್ ಹಾಗೆಯೇ ಬೆಳಗಾವಿ ಜಿಲ್ಲೆಯ ಶಿರಸಂಗಿ ದೇಸಗತಿಗಳ ಕುರಿತು ಡಾ. ವಿರೂಪಾಕ್ಷ ಬಡಿಗೇರ, ಕೆಲವು ಅರಸು ಮನೆತನಗಳ ಕುರಿತಾಗಿ ಡಾ. ಎಮ್.ಎಮ್. ಕಲಬುರ್ಗಿ, ಹಿರಿಯ ವಿದ್ವಾಂಸರು ಸಂಪಾದನೆ ಕೈಗೊಂಡದ್ದು ಬಿಟ್ಟರೆ, ಮತ್ತಾವ ಪ್ರಯತ್ನಗಳು ನಡೆಯದೆ ಇರುವದು ವಿಷಾದನಿಯ.

ಒಟ್ಟಾರೆಯಾಗಿ ಗಮನಹರಿಸುವುದಾದರೇ ಈ ನಾಡಿನ ದೇಸಗತಿಗಳು ಸಮಾಜಮುಖಿಯಾಗಿ ಕೆಲಸಮಾಡಿದ್ದನ್ನು ಗಮನಿಸಿದರೆ ಇನ್ನೂ ಅನೇಕ ದೇಸಗತಿಗಳು ನಿರ್ಲಕ್ಷಕ್ಕೆ ಒಳಗಾಗಿವೆ. ಈ ದಿಸೆಯಲ್ಲಿ ಇದ್ದ ಇತಿಹಾಸ ಕಳಚಿ ಹೋಗುವ ಪೂರ್ವದಲ್ಲಿಯೇ ಅವೆಲ್ಲವುಗಳನ್ನು ಸಾರ ಸಂಗ್ರಹವಾಗಿ, ಸಂಗ್ರಹಿಸಿ ತಲಸ್ಪರ್ಶ ಅಧ್ಯಯನಿಸುವುದು ಅವಶ್ಯವೆನಿಸುತ್ತದೆ.

ಗ್ರಂಥ ಋಣ :

(೧) ಪುಟ ಸಂಖ್ಯೆ : ೩೩೪ ಸಂಪಾದಕರು : ಪ್ರೊ. ಲಕ್ಷ್ಮಣ ತೆಲಗಾಂವಿ ಕರ್ನಾಟಕ ಪಾಳೆಗಾರರ ನ್ಯಾಯಾಡಳಿತ ಪ್ರಕಟಣೆಯ ವರ್ಷ : ೨೦೦೮

(೨) ಪುಟ ಸಂಖ್ಯೆ : ೧೮ ಡಾ. ಸಂಗಮೇಶ ಕಲ್ಯಾಣಿ 'ಬಾಗಲಕೋಟ ಜಿಲ್ಲೆಯ' ದೇಸಗತಿಗಳು ಅಪ್ರಕಟಿತ ಮಹಾಪ್ರಬಂಧ. ವರ್ಷ : ೨೦೦೬

(೩) ಅದೇ ಪುಟ.

(೪) ಪುಟ ಸಂಖ್ಯೆ : ೧ ಡಾ. ಎ. ಸಿ. ನಾಗಭೂಷಣಮೂರ್ತಿ 'ಧಾರವಾಡ ಜಿಲ್ಲೆಯ ದೇಸಗತಿಗಳು' ಅಪ್ರಕಟಿತ ಪ್ರಬಂಧ.

(೫) ಅದೇ ಪುಟ.

(೬) ಅದೇ ಪುಟ

ಅಧ್ಯಾಯ - ೨

ಅಧ್ಯಾಯ -೨

ಮಂಗಸೂಳಿ ಪವಾರ ದೇಸಾಯಿಗಳ ಇತಿಹಾಸ

೧) ದೇಸಾಯಿಗಳ ಕಾರ್ಯಕ್ಷೇತ್ರ:

ಉತ್ತರ ಕರ್ನಾಟಕದಲ್ಲಿಯ ಹಲವು ದೇಸಗತಗಳಲ್ಲಿ ಮಂಗಸೂಳಿ ಪವಾರ ದೇಸಗತಿಯ ಸಾಧನೆಗಳು ವಿಶಿಷ್ಟತಮವಾಗಿದೆ. ಅಥಣಿ ತಾಲೂಕು ಕೇಂದ್ರವಾದ ಇವರ ಕಾರ್ಯವ್ಯಾಪ್ತಿಯೂ ಕೂಡ ಅಷ್ಟೇ ವಿಶಿಷ್ಟವಾದದ್ದು. ಸುಮಾರು ಅರವತ್ನಾಲ್ಕು (೬೪) ಹಳ್ಳಿಗಳು ಮತ್ತು ಸುಮಾರು ೧೭೦೦೦ ಏಕರೆ ಭೂಮಿಯನ್ನೊಳಗೊಂಡ ಇವರ ಆಡಳಿತ ಕ್ಷೇತ್ರವು ಇಂದಿನ ಅಥಣಿ ತಾಲೂಕಿನ ಬಹುಭಾಗಗಳ ವ್ಯಾಪ್ತಿಯನ್ನೊಳಗೊಂಡಿತ್ತು.

ಪ್ರಾಚೀನ ಕರ್ನಾಟಕದಿಂದಲೇ ಹಲವು ರಾಜ ಮನೆತನಗಳ ಕೊಡುಗೆಗಳನ್ನು ಪರಿಗಣಿಸಿ ನೋಡಲಾಗಿ ಅದರಲ್ಲಿ ಹಲವು ರೀತಿಯಾದ ಸಾಮ್ಯತೆ ಇದ್ದರೂ ಕೂಡಾ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಿದ್ದನ್ನು ಕಾಣಬಹುದು. ರಾಜಕೀಯ, ಸಾಮಾಜಿಕ, ಧಾರ್ಮಿಕ ಪರಸ್ಪರ ವೈತ್ಯಾಸವನ್ನು ಕಾಣಬಹುದು.

ಕರ್ನಾಟಕದ ಪ್ರಾಚೀನ ರಾಜ ಮನೆತನಗಳು ಹಲವು ಸ್ಥಿತ್ಯಂತರಗಳನ್ನೆದುರಿಸಿ ತಮ್ಮದೇಯಾದ ಆಡಳಿತ ಕ್ರಮವನ್ನು ರೂಪಿಸಿಕೊಂಡು ಬಂದಿದ್ದವಷ್ಟೇ ಅದರಂತೆ ವಿಕೇಂದ್ರಿಕರಣ ಆಡಳಿತ ವ್ಯವಸ್ಥೆಯೂ ಕೂಡ ಅಸ್ಥಿತ್ವದಲ್ಲಿತ್ತು ಎಂಬುದನ್ನು ಪರಿಗಣಿಸಿದರೆ ಈ ಕ್ರಮ ಬ್ರಿಟಿಷರ ಕೊಡುಗೆಯಲ್ಲವೆಂದೇ ಪರಿಗಣಿಸಬಹುದು. ಕ್ರಿ.ಶ. ೧೮ ನೇ ಶತಮಾನದಲ್ಲಿ ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರಷ್ಟೇ ಅಲ್ಲ, ಅದರ ಭದ್ರತೆಗಾಗಿ ವಿಕೇಂದ್ರಿಕರಣ ವ್ಯವಸ್ಥೆಯನ್ನೇ ಮುಂದುವರೆಸಿ ಸ್ಥಳೀಯ ನಾಯಕರ ಕೈಯಲ್ಲಿಯೇ ಆಡಳಿತೆಯನ್ನು ನೀಡಿದ ಅಂಶ ಸ್ಪಷ್ಟವಾಗುತ್ತದೆ. ಆದರೆ ಪ್ರಾಚೀನ ಕಾಲಕಿಂತಲೂ, ಆಡಳಿತ ಅಚ್ಚು ಕಟ್ಟತೆಯ ತಳಹದಿಯನ್ನು ಹೊಂದಿತೆನ್ನುವುದು ಸ್ಪಷ್ಟ. ಈ ಅವಧಿಯಲ್ಲಿ ಜನತೆ ಓದು- ಬರಹಕ್ಕೆ ಹೆಚ್ಚು ಮಹತ್ವ ಕೊಟ್ಟಿಲ್ಲವೆಂದು ತಿಳಿದು ಬರುತ್ತದೆ. ಆದ್ದರಿಂದ ಬ್ರಿಟಿಷರು ಆಡಳಿತ ನಿರ್ವಹಣೆಗೆಂದು ತಮ್ಮದೇ ಸರಕಾರದ ಪ್ರತಿನಿಧಿಯನ್ನು ನೇಮಿಸುತ್ತಿದ್ದುದನ್ನು ಕಾಣುತ್ತೇವೆ. ಇದನ್ನೇ ''ನಕ್ತನೇಮಕ'' ವೆಂದು ಕರೆಯುತ್ತಿದ್ದರು ಈ ವ್ಯವಸ್ಥೆಯನ್ನು ಪ್ರಾಚೀನ ಕರ್ನಾಟಕದಲ್ಲಿ ನೇಮಕಮಾಡುತ್ತಿದ್ದ ರಾಜಪ್ರತಿನಿಧಿ (ರಿಜೆಂಟ್) ಎಂಬ ಪದವಿಗೆ ಹೋಲಿಸಲಾಗಿದೆ.

ಈ ದೇಸಗತಿಗಳ ಆಡಳಿತ ವ್ಯವಸ್ಥೆಯಲ್ಲಿ ಭಾಷೆ, ಕಾನೂನು, ಆಡಳಿತ ಕಡತಗಳ ಪದ್ದತಿಯಲ್ಲಿಯೂ ಹಲವೂ ಬದಲಾವಣೆಗಳನ್ನು ಕಾಣುತ್ತೇವೆ. ಮುಂದಿನ ಆಡಳಿತ ಪದ್ದತಿಯಲ್ಲಿ ಆಂಗ್ಲ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ಇದ್ದದ್ದನ್ನು ಕಾಣಬಹುದು ಕನ್ನಡದ ಭಾಷೆಯ ಬಳಕೆ ಕೃಷ್ಟವಾಗಿತ್ತು. ತಾಲೂಕು ಕಛೇರಿ, ಕೋರ್ಟು, ಪೋಲಿಸ್ ಮತ್ತು ಸಾರ್ವಜನಿಕ ಆಡಳಿತ ಪದ್ದತಿಯಲ್ಲಿ ಇಂಗ್ಲೀಷ

ಭಾಷೆಯನ್ನೇ ಹೆಚ್ಚಾಗಿ ಬಳಸಲಾಗುತ್ತಿತ್ತು. ಇದರ ಜೊತೆಗೆ ಮಂಗಸೂಳಿ ಪವಾರ ದೇಸಾಯಿಗಳ ಮಾತೃಭಾಷೆ ಮರಾಠಿಯಾಗಿದ್ದು, ಅವರ ಪತ್ರಗಳು, ದಾಖಲೆಗಳು ಮೊದಲಾದ ಕಡತಗಳು ಮರಾಠಿಯಲ್ಲಿಯೂ ದೊರೆಯುತ್ತವೆ. ವಾಡೆಯಲ್ಲಿ (ಚಿತ್ರ -೧ ಮತ್ತು ೨ ರಲ್ಲಿ ವಾಡೆಯನ್ನು ಕಾಣಬಹುದು) ದೊರೆತ ಕೆಲವು ಲೆಕ್ಕ ಪತ್ರಗಳು, ಭೂದಾನಗಳು ಕನ್ನಡದಲ್ಲಿವೆ. ಅಥಣಿಯ ಮಂಗಸೂಳಿ ಪವಾರ ದೇಸಾಯಿಗಳ ಮಾತೃಭಾಷೆಯು ಮರಾಠಿಯೇ ಆದ್ದರಿಂದ ಅವರ ದಿನ ನಿತ್ಯದ ವ್ಯವಹಾರಗಳು ಮರಾಠಿಯಲ್ಲಿಯೇ ಜರುಗುತ್ತಿದ್ದವು. ಅವರ ಸಂದರ್ಶನದ ಸಮಯದಲ್ಲಿಯೂ ಕೂಡ ಆ ಮನೆತನದವರು ಮರಾಠಿಯಲ್ಲಿಯೇ ಉತ್ತರಿಸುವುದನ್ನು ಗಮನಿಸಬಹುದಾಗಿದೆ.

ಹೀಗೆ ಅಥಣಿ ಮತ್ತು ಸುತ್ತಲಿನ ಪ್ರದೇಶಗಳ ವ್ಯಾಪ್ತಿ ಪಡೆದುಕೊಂಡು ಮಂಗಸೂಳಿ ಪವಾರ ದೇಸಾಯಿಗಳ ಒಡೆತನಕ್ಕೆ ಸೇರಿದ ಗ್ರಾಮಗಳ ಸಂಖ್ಯೆ--೬೪ ಅವುಗಳನ್ನು ಈ ಕೆಳಗಿನಂತೆ ಕಾಣಬಹುದು.

೧) ಅಥಣಿ	೨) ಆಜೂರ	೩) ಪಾಂಡೇಗಾಂವ
೪) ಚಂದ್ರಪ್ಪನ ವಾಡಿ	೫) ಖಿಳೇಗಾಂವ	೬) ಅನಂತಪೂರ
೭) ಮಲಾಬಾದ್	೮) ತಾಂವಶಿ	೯) ನಾಗನೂರ ಪಿ.ಕೆ
೧೦) ಸಂಬರಗಿ	೧೧) ಶಿರೂರ	೧೨) ಅರಳಿಹಟ್ಟಿ
೧೩) ಬೊಮ್ಮನಾಳ	೧೪) ಮದಬಾವಿ	೧೫) ಜಕಾರಟ್ಟಿ
೧೬) ವಿಷ್ಣುವಾಡಿ	೧೭) ತೆವರಟ್ಟಿ	೧೮) ಸಿದ್ದೇವಾಡಿ
೧೯) ಜಂಬಗಿ	೨೦) ಕಲ್ಲೂತಿ	೨೧) ಬೇವನೂರ
೨೨) ಬಳ್ಳಿಗೇರಿ	೨೩) ಕಿರಣಗಿ	೨೪) ಹಣಮಾಪೂರ
೨೫) ಶಿವನೂರ	೨೬) ಮಸರಗುಪ್ಪಿ	೨೭) ಝುಂಜರವಾಡ
೨೮) ಗುಂಡೇವಾಡಿ	೨೯) ಚಮಕೇರಿ.	೩೦) ಬ್ಯಾಡರಟ್ಟಿ
೩೧) ಅಡಹಳ್ಳಿ	೩೨) ಅಡಹಳ್ಳಟ್ಟಿ	೩೩) ಐಗಳಿ
೩೪) ಪಡತರವಾಡಿ	೩೫) ಕೋಹಳ್ಳಿ	೩೬ ರಾಮತೀರ್ಥ
೩೭) ಕೊಟ್ಟಲಗಿ	೩೮) ಕಕಮರಿ	೩೯) ಬನ್ನೂರ
೪೦) ಕನ್ನಾಳ	೪೧) ತೆಲಸಂಗ	೪೨) ಖಿಲಾರಟ್ಟಿ
೪೩) ಯಕ್ಕಂಚಿ	೪೪) ಸಂಕೋನಟ್ಟಿ	೪೫) ದೇವರಡ್ಡೆರಹಟ್ಟಿ
೪೬) ಮುರಗುಂಡಿ	೪೭) ಬಡಚಿ	೪೮) ಎಲೆಹಡಲಗಿ

೪೯) ಬ್ಯಾಡಗಿ   ೫೦) ಅರಟಾಳ   ೫೧) ಹಾಲಹಳ್ಳಿ

೫೨) ಕೊಕಟನೂರ   ೫೩) ಬುರ್ಲಟ್ಟಿ   ೫೪) ದೇಸಾಯರಟ್ಟಿ

೫೫) ಸುಟ್ಟಟ್ಟಿ   ೫೬) ಕಟಗೇರಿ   ೫೭) ನಂದಗಾಂವ

೫೮) ಘಟನಟ್ಟಿ   ೫೯) ಕೊಡಗಾನೂರ   ೬೦) ಬಳವಾಡ

೬೧) ಶಿರಹಟ್ಟಿ   ೬೨) ಅಬ್ಬಿಹಾಳ (ಅ. ಇಂಗಳಗಾಂವ)

೬೩) ಪಾರ್ಥನಹಳ್ಳಿ (ಮಾಯನಟ್ಟಿ)   ೬೪) ಮಂಗಸೂಳಿ (ಮೂಲವತನ)

ಈ ಎಲ್ಲ ಗ್ರಾಮಗಳು ಮಂಗಸೂಳಿ ದೇಸಾಯಿಗಳ ಹಿಡಿತದಲ್ಲಿದ್ದವು ಇವುಗಳಲ್ಲಿ ಪರಗಣೆವತನ, ಇನಾಂ, (ಅನುಬಂಧದಲ್ಲಿ ಬೆಳಗಾವಿ ಜಿಲ್ಲೆಯ ಇನಾಂದಾರರ ಯಾದಿ ನೋಡಬಹುದು) ಮಜರೆ ಮೊದಲಾದ ಹಕ್ಕುಗಳುನ್ನು ಹೊಂದಿದ್ದರು.

ಆರಂಭದಲ್ಲಿ ಮಂಗಸೂಳಿಯನ್ನು ಕೇಂದ್ರವಾಗಿರಿಸಿಕೊಂಡು ತಮ್ಮ ಆಳ್ವಿಕೆ ಆರಂಭಿಸಿದ ಇವರು ಮೂಲತ: ಮಂಗಸೂಳಿ ಗ್ರಾಮದವರು.

೨) ಮಂಗಸೂಳಿ ಪವಾರ ದೇಸಾಯಿಗಳ ಹುಟ್ಟು ಮತ್ತು ಬೆಳವಣಿಗೆ :

ಇವರ ಮೂಲ ಪುರುಷ ಸಿದ್ಧರಾಜಗೌಡ ಈ ವಂಶ ಯಾವಾಗ ಅಸ್ಥಿತ್ವಕ್ಕೆ ಬಂದಿತೆಂದು ಊಹಿಸಲು ಸಾಧ್ಯವಿಲ್ಲ. ಮತ್ತು ಅದಕ್ಕೆ ತಕ್ಕ ಯಾವುದೇ ದಾಖಲೆಗಳು ನಮಗೆ ಲಭ್ಯವಿರುವುದಿಲ್ಲ. ದೊರೆತಿರುವ ವಂಶಾವಳಿಯ ಕ್ರಮಾನುಸಾರ ಈ ಮಾಹಿತಿಯನ್ನು ದಾಖಲಿಸಲಾಗಿದೆ. ಸಿದ್ಧರಾಜಗೌಡನ ನಂತರ ಆತನ ಮಗ ಕೇದಾರಿಗೌಡರು. ಇವರ ಮಗ ಭೂಪತರಾವ್ ದೇಸಾಯಿ ಈ ಭೂಪತರಾವ್ ದೇಸಾಯಿಯೇ ಈ ದೇಸಗತ್‌ವನ್ನು ಸಂಪಾದಿಸಿದನೆಂದು ತಿಳಿದು ಬರುತ್ತದೆ. ಈತನ ನಂತರ ಸುಮಾರು ಒಂಭತ್ತು ಜನ ದೇಸಾಯಿಗಳು ಈ ದೇಸಗತಿಯನ್ನು ಆಳಿದರೆಂದು ತಿಳಿದು ಬರುತ್ತದೆ. ಏಂಟನೇಯ ದೇಸಾಯಿಯರಾದ ಭೋಜರಾಜ ದೇಸಾಯಿಯವರ ದತ್ತಕ ಪುತ್ರ (ಮೊಮ್ಮಗ) ಅಪ್ಪಾಸಾಹೇಬರ ಪುತ್ರ ಸಿದ್ಧರಾಜ ದೇಸಾಯಿಯವರಿಂದ ಈ ದೇಸಗತಿಯ ಕುರಿತಂತೆ ಹೆಚ್ಚಿನ ಮಾಹಿತಿ ಲಬಿಸುತ್ತದೆ. ಇವರಿಗೆ ಬಾಬಾಸೋ ಎಂತಲೂ ಮತ್ತೊಂದು ಹೆಸರಿತ್ತೆಂದು ತಿಳಿದುಬರುತ್ತದೆ. ಬೋಜರಾಜ ದೇಸಾಯಿಯವರು ೧೮೭೦ ರಲ್ಲಿ ಜನಿಸಿದರು. ಈ ಅವಧಿಯಲ್ಲಿ ದೇಸಗತಿಯ ಬೆಳವಣಿಗೆಯನ್ನು ಪರಿಗಣಿಸಬಹುದಾಗಿದೆ. ಸಿದ್ಧರಾಜ ದೇಸಾಯಿಯವರು ಧರ್ಮಸಹಿಷ್ಣುವೂ ಮತ್ತು ಪರೋಪಕಾರಿಗಳೂ ಆಗಿದ್ದು, ಬಡಜನರ ಬಗ್ಗೆ ಹಚ್ಚಿನ ಕಾಳಜಿಯನ್ನು ಹೊಂದಿದವರಾಗಿದ್ದರು. ಇವರಿಗೆ ಇಬ್ಬರು ಪತ್ನಿಯರಿದ್ದು ಕೃಷ್ಣಾಬಾಯಿ ಮತ್ತು ಹವಸಾಬಾಯಿ ಎಂಬುವರು. ಇವರ ಹಿರಿಯ ಪತ್ನಿ ಕೃಷ್ಣಾಬಾಯಿಯವರು ಅಥಣಿ ತಾಲೂಕಿನ ಮದಬಾಂವಿಯ ಬೇಡಗಕರ ಘೋರ್ಪಡೆಯವರ ಮನೆತನದವರು. ಅವರ ದ್ವಿತೀಯ ಪತ್ನಿ ಹವಸಾಬಾಯಿಯು ಗ್ವಾಲಿಯರ್ ಸಿಂದಿಯಾ ಮನೆತನದ ಹೆಣ್ಣುಮಗಳು ಅಂದರೆ ಮದಬಾಂವಿಯ ಘೋರ್ಪಡೆ ಮನೆತನವು ರಾಜಮನೆತನವಾಗಿದ್ದು, ಅದರಂತೆ ಗ್ವಾಲಿಯರನ ಮರಾಠ ಅಧಿಪತಿಗಳಾದ ಸಿಂಧಿಯಾ ರಾಜಮನೆತನಗಳೊಂದಿಗೆ ಇವರ ರಕ್ತ ಸಂಬಂಧ ವಿತ್ತೆಂಬುದು ಸ್ಪಷ್ಟವಾಗುತ್ತದೆ. ಆ ಅವಧಿಯಲ್ಲಿ ಬೇಡಗಕರ ಘೋರ್ಪಡೆಯವರು ಇನಾಮನ್ನು ಪಡೆದುಕೊಂಡಿದ್ದು ಮಂಗಸೂಳಿ ಪವಾರ ದೇಸಾಯಿಗಳ ಆಡಳಿತೆಯ ಎಲ್ಲ ಆಗು ಹೋಗುಗಳನ್ನು ಅವರೇ ನಿರ್ವಹಿಸುತ್ತಿದ್ದರೆಂದು ತಿಳಿದು ಬರುತ್ತದೆ. ಅಂತೆಯೇ ಬ್ರಿಟಿಷ ಸರಕಾರ ಇವರಿಗೆ "ಸರ್ದಾರ ಆಫ್ ಡೆಕ್ಕನ್" ಎಂಬ ಬಿರುದನ್ನು ನೀಡಿ ಗೌರವಿಸಿತ್ತು.

ಸಿದ್ಧರಾಜ ದೇಸಾಯಿ ಅಥವಾ ಬಾಬಾಸೋ ದೇಸಾಯಿಯವರು ಸಾಮಾಜಿಕ ಕಳಕಳಿಯನ್ನು ಹೊಂದಿದವರಾಗಿದ್ದು, ಗ್ರಾಮ ನೈರ್ಮಲ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದರು. ಗ್ರಾಮದ ಹಿರಿಯರ ಸಭೆ ಕರೆದು ಸಮಸ್ಯೆಗಳ ಕುರಿತು ಚರ್ಚಿಸುತ್ತಿದ್ದರಲ್ಲದೇ ತಮ್ಮ ಕೈಲಾದ ಧನ ಸಹಾಯವನ್ನು ನೀಡುತ್ತಿದ್ದರು. ಮಂಗಸೂಳಿ ಮತ್ತು ಸುತ್ತ ಮುತ್ತಲಿನ ಗ್ರಾಮಗಳ ಜನರು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದು ಅದಕ್ಕೆ ಬಾವಿಯೊಂದನ್ನು ಕಟ್ಟಿಸಿ ಸಾರ್ವಜನಿಕರಿಗೆ ಉಪಯೋಗಿಸಲು ವ್ಯವಸ್ಥೆ ಕಲ್ಪಿಸಿದರು.

ಧರ್ಮವೀರುವಾಗ ಸಿದ್ಧರಾಜ ದೇಸಾಯಿಯು ದೈವ ಭಕ್ತನು ಮತ್ತು ದಯಾಪರರೂ ಆಗಿದ್ದರು. ಆದ್ದರಿಂದಲೇ ಮನೆದೇವರಾದ ಮಂಗಸೂಳಿಯ ಮಲ್ಲಯ್ಯನ ದೇವಾಲಯಕ್ಕೆ ಅಪಾರ ಕಾಣಿಕೆ ನೀಡಿದ್ದರಲ್ಲದೇ, ಅದರ ಅರ್ಚನೆಗೆಂದೇ ದಾನ ನೀಡಿದ ಉಲ್ಲೇಖವನ್ನು ನೋಡಬಹುದು. ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳು ಸುಗಮವಾಗಿ ನೇರವೇರುವಂತೆಯೂ ನೋಡಿಕೊಳ್ಳುತ್ತಿದ್ದರು.

ಸಿದ್ದರಾಜ ದೇಸಾಯಿಯವರು ಉತ್ತಮ ದೇಹಾದಾರ್ಢ್ಯವನ್ನು ಹೊಂದಿದ್ದು ಬೇಟೆಯಾಡುವುದು ಅವರಿಗೆ ಅಚ್ಚುಮೆಚ್ಚಿನ ಹವ್ಯಾಸವಾಗಿತ್ತು (ಚಿತ್ರ ನಂ. ೩ ರಲ್ಲಿ ಕಾಣಬಹುದು) ಸದಾ ಕೈಯಲ್ಲಿ ಕತ್ತಿಯನ್ನು ಹಿಡಿದೇ ಇರುತ್ತಿದ್ದ ಇವರಿಗೆ ಕದಾಡುವುದೆಂದರೆ, ಅವರಿಗೆ ಅತಿಯಾದ ಪ್ರೀತಿ ಅವರು ಬಳಸುತ್ತಿದ್ದ ಕತ್ತಿಯಲ್ಲಿ ಅವರ ಹೆಸರನ್ನು ಕಾಣಬಹುದಾಗಿದೆ. ಇವರು ಕ್ರಿ.ಶಕ ೧೯೪೧ ರಲ್ಲಿ ಮಂಗಸೂಳಿಯಲ್ಲಿಯೇ ಮರಣ ಹೊಂದಿದರು.

ಸಿದ್ಧರಾಜ ದೇಸಾಯಿಯವರಿಗೆ ಭೋಜರಾಜ ಅಲಿಯಾಸ್ ಬಾಳಾಸಾಹೇಬ ಮತ್ತು ಅಪ್ಪಾಸಾಹೇಬ ಅಲಿಯಾಸ್ ವಿಲಾಸರಾಜೇ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಇಬರಿಬ್ಬರೂ ಕೃಷ್ಣಾಬಾಯಿಗೆ ಹುಟ್ಟಿದವರು ಹಿರಿಯನಾದ ಭೋಜರಾಜ ಅಲಿಯಾಸ್ ಬಾಳಾಸಾಹೇಬ ಸಿದ್ಧರಾಜನ ನಂತರ ಪವಾರ ದೇಸಗತಿಯ ಮಾಲಿಕತ್ವವನ್ನು ವಹಿಸಿಕೊಂಡರು.

ಭೋಜರಾಜ ಪವಾರ ದೇಸಾಯಿಯವರು ಮಂಗಸೂಳಿಯಲ್ಲಿ ಜನಿಸಿದರು. ಸುಮಾರು ೧೬ ನೇ ವಯಸ್ಸಿನಲ್ಲಿಯೇ ಮದುವೆಯಾದ ಇವರಿಗೆ ಇಬ್ಬರು ಪತ್ನಿಯರಿದ್ದರು. ಒಬ್ಬ ಪತ್ನಿ ಮದಬಾಂವಿಕರ ಘೋರ್ಪಡೆಯವರ ಮನೆತನಕ್ಕೆ ಸಂಬಂಧಿಸಿದವಳು. ಮತ್ತು ಇನ್ನೊಬ್ಬಳು ಚಾವರೇಕರ ಭೋಸ್ಲೆ ಮನೆತನಕ್ಕೆ ಸೇರಿದ ಸುಶೀಲಾಬಾಯಿ (ಚಿತ್ರ ನಂ. ೩ ಎ ರಲ್ಲಿ ಕಾಣಬಹುದು) ಮೊದಲ ಪತ್ನಿ ಸ್ವಲ್ಪ ಅವಧಿಯಲ್ಲಿಯೇ ಅಕಾಲ ಮರಣಕ್ಕೀಡಾದಳು.


ಭೋಜರಾಜ ಪವಾರ ದೇಸಾಯಿಯವರು ಸಮರ್ಥರು ಜ್ಞಾನಿಗಳು ಆಗಿದ್ದರೆಂದು ತಿಳಿದು ಬರುತ್ತದೆ. ಹಲವು ಮರಾಠಾ ಮನೆತನಗಳೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದ ಇವರು ಸಾರ್ವಜನಿಕ ಕಾರ್ಯಗಳನ್ನು ಅಷ್ಟೇ ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದರು. ಬಡವರು ಹಾಗೂ ಬಡರೈತರಿಗೆ ಸಾಕಷ್ಟು ಭೂಮಿಗಳನ್ನು ದಾನ ಮಾಡಿದ ಭೋಜರಾಜರು ಉದಾರ ಮನೋಭಾವದವರಾಗಿದ್ದರು. ದೇವಾಲಯಗಳಿಗೂ ಅಪಾರ ಕಾಣಿಕೆ ನೀಡಿದ್ದಾರಲ್ಲದೆ, ಅರ್ಚಕರಿಗೂ ಕೂಡ ದತ್ತಿ ನೀಡಿದ್ದರು. ರಾಜಕೀಯಕ್ಕೆ ಅಷ್ಟೊಂದು ಮಹತ್ವ ನೀಡಿದ ಇವರು ಸಾಮಾಜಿಕ ಕಾರ್ಯಗಳಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಂಗಸೂಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿಯಾಗಲಿ, ಅಥವಾ ಅವರ ವತನೀ ಗ್ರಾಮಗಳಲ್ಲಾಗಲಿ, ಜಾತ್ರೆ -ಉತ್ಸವ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರಲ್ಲದೇ. ಉದಾರವಾದ ಕಾಣಿಕೆಗಳನ್ನು ನೀಡುತ್ತಿದ್ದರು. ತೀಕ್ಷ್ಣಮತಿಯಾದ ಇವರು ದೇಸಗತಿಯ ಎಲ್ಲ ಆಗು-ಹೋಗುಗಳ ಕುರಿತಂತೆ ಕಟ್ಟುನಿಟ್ಟಿನ ಕ್ರಮಗಳನ್ನು

ಅನುಸರಿಸುತ್ತಿದ್ದರು. ಜೊತೆಗೆ ಆಳುಗಳ, ಹಣಕಾಸು, ವ್ಯಾಪಾರ, ಬೆಳೆಗಳು, ಧಾನ್ಯಗಳ ಕುರಿತಂತೆ ಕ್ರಮಬದ್ಧವಾದ ಲೆಕ್ಕಪತ್ರಗಳನ್ನು ಇಡುವಲ್ಲಿ ನಿಷ್ಣಾತರಾಗಿದ್ದರು.


ಭೋಜರಾಜ ದೇಸಾಯಿಯವರು ಎಷ್ಟೊಂದು ಉದಾರಿಗಳಾಗಿದ್ದರೆನ್ನುವುದಕ್ಕೆ ಇನ್ನೊಂದು ಅಂಶವೆಂದರೆ, ವತನೀ ಗ್ರಾಮಗಳಲ್ಲಿ ಆಯಾ ರೈತರಿಗೆ ಭೂಮಿಯನ್ನು ಉಳಿಮೆ ಮಾಡಲು ನೀಡಲಾಗಿತ್ತಲ್ಲದೇ ಅದರಿಂದ ತೆರಿಗೆಯನ್ನಾಗಲೀ ಅಥವಾ ಧಾನ್ಯರೂಪ ಬಾಡಿಗೆಯನ್ನಾಗಲಿ ಏಂದೂ ಕೇಳುತ್ತಿರಲ್ಲಿಲ್ಲ. ರೈತರು ಕೊಟ್ಟಷ್ಟನ್ನೇ ತೆಗೆದುಕೊಳ್ಳುತ್ತಿದ್ದು ಕೆಲವೊಮ್ಮೆ ಅದು ಕೂಡಾ ಬರುತ್ತಿರಲಿಲ್ಲವೆಂದು ತೋರುತ್ತದೆ.


ಭೋಜರಾಜರು ಉದಾರಿಗಳಾಗಿದ್ದಂತೆ ಕಠಿಣ ದೇಹವನ್ನು ಹೊಂದಿದ್ದು ಯಾವಾಗಲೂ ದೇಹವನ್ನು ದಂಡಿಸುವ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಕಟ್ಟುಮಸ್ತಾದ ದೇಹ, ಉದ್ದನೆಯ ಮೀಸೆ, ತಲೆಯಲ್ಲಿ ಪೇಟಾ, ಕೈಯಲ್ಲಿ ಸದಾ ಕಾಡತೂಸು ಇವರ ವ್ಯಕ್ತಿತ್ವಕ್ಕೆ ಪ್ರಭಲತೆಯನ್ನು ತಂದುಕೊಟ್ಟಿದ್ದವು. ಬೇಟೆಯಾಡುವುದು ತಲೆತಲಾಂತರದಿಂದ ಬಂದ ಹವ್ಯಾಸವಾಗಿತ್ತು, ಭೋಜರಾಜರು ಕೂಡ ಬೇಟೆಯಾಡುವುದನ್ನು ತಮ್ಮ ಮುಖ್ಯ ಹವ್ಯಾಸವಾಗಿಸಿಕೊಂಡಿದ್ದರು. ಹೀಗೆ ಏಪ್ಪತ್ತಕ್ಕೂ ಹೆಚ್ಚು ವರ್ಷಗಳ ತುಂಬು ಜೀವನದ ನಂತರ ಭೋಜರಾಜರು ೧೯೫೦ ರ ಅಕ್ಟೋಬರ ೮ ರಂದು ಮಿರಜದ ಮಿಶನ್ ಆಸ್ಪತ್ರೆಯಲ್ಲಿ ಹೃದಾಯಾಘಾತದಿಂದ ಮರಣ ಹೊಂದಿದರು (ಅನುಬಂಧದಲ್ಲಿ ಮರಣ ಪ್ರಮಾಣ ಪತ್ರ ನೋಡಬಹುದು) ಇವರ ಸೋದರ ಅಪ್ಪಾಸಾಹೇಬ ಅಲಿಯಾಸ ವಿಜಯರಾಜೇಯವರೂ ಕೂಡ ಹಿರಿಯ ಸಹೋದರ ಭೋಜರಾಜರೊಂದಿಗೆ ಅವರ ಎಲ್ಲ ಕಾರ್ಯಗಳಲ್ಲಿಯೂ ಸಹಭಾಗಿಗಳಾಗಿದ್ದರು. ಇವರಿಗೂ ಇಬ್ಬರು ಪತ್ನಿಯರಿದ್ದು ಅವರೆಂದರೆ, ಪ್ರಮಿಳಾರಾಜೇ (ಕಾಟಿ ದೇಶಮುಖ ಮನೆತನದವಳು) ಮತ್ತು ಇನ್ನೊಬ್ಬಳು ಸತ್ವಶೀಲಾದೇವಿ (ಅಕ್ಕೋಲಾ ಲಿಗಾಡೆ ಮನೆತನದವಳು) ಎಂಬಿಬ್ಬರೇ ಅವರ ಪತ್ನಿಯರು. ಇವರು ಶಿಕ್ಷಣ ಪ್ರೇಮಿಗಳಾಗಿದ್ದು ಕಿರಿಯ ಪತ್ನಿ ಸತ್ವಶೀಲಾ ದೇವಿಯ ಹೆಸರಿನಲ್ಲಿ ೧೯೬೧ ರಲ್ಲಿ ಹೆಣ್ಣು ಮಕ್ಕಳ ಪ್ರೌಢಶಾಲೆಯನ್ನು ಅಥಣಿಯಲ್ಲಿ ಸ್ಥಾಪಿಸಲಾಗಿದೆ. ಅದು ಇಂದಿಗೂ ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಸಾಧನೆಗೈದ ವಿದ್ಯಾಕೇಂದ್ರವಾಗಿದೆ.


ಭೋಜರಾಜ ಪವಾರ ದೇಸಾಯಿಯವರಿಗೆ ಮೂರು ಜನ ಗಂಡು ಮಕ್ಕಳಿದ್ದರು. ಅವರೆಂದರೆ ಸಿದ್ದರಾಜ ಉರ್ಫ ಧೈರ್ಯಶೀಲರಾವ್ , ಜಯವಂತರಾವ ಉರ್ಫ ಬಾಪುಸಾಹೇಬ ಮತ್ತು ಯಶವಂತವಾರ ಉರ್ಫ ಅಮರಸಿಂಹ ಎಂಬುವರು. (ಚಿತ್ರ ನಂ. ೪ ರಲ್ಲಿ ಮೂವರು ಸಹೋದರರನ್ನು ಕಾಣಬಹುದು.



ಸಿದ್ಧರಾಜಗೌಡ
(ಮೂಲ ಪುರುಷ) (पाटील की संपादक)
ಕೇದಾರಿಗೌಡ
ಭೂಪತ್‌ರಾವ್ ದೇಸಾಯಿ
(देसगत संपादक)
ಸಿದ್ಧರಾಜ ದೇಸಾಯಿ
ಭೂಪತ್‌ರಾವ್ ದೇಸಾಯಿ
ದೇವರಾವ
ಸಿದ್ಧರಾಜ ದೇಸಾಯಿ
ಭೋಜರಾಜ ದೇಸಾಯಿ
ಸಿದ್ಧರಾಜ ದೇಸಾಯಿ
ಅಲ್ಲಪ್ಪಾ
ಶಾಹುಬಾ
ಭೋಜರಾಜ ದೇಸಾಯಿ
ಬಳವಂತರಾವ್ ದೇಸಾಯಿ
ಖಂಡೇರಾವ್
ಸಿದ್ಧರಾಜ ದೇಸಾಯಿ
ಭವಾನ್‌ರಾವ್
ಭೋಜರಾಜ ದೇಸಾಯಿ
ಸಿದ್ಧರಾಜ ದೇಸಾಯಿ
ಭೋಜರಾಜ ದೇಸಾಯಿ
ಸಿದ್ಧರಾಜ ಉರ್ಫ ಧೈರ್ಯಶೀಲರಾವ್
ಜಯವಂತರಾವ ಉರ್ಫ ಬಾಪೂಸಾಹೇಬ
ಯಶವಂತರಾವ್ ಉರ್ಫ ಅಮರಸಿಂಗ್
ಅ
ಬ
ಕ







ಈ ಸದರಿ ವಂಶಾವಳಿಯನ್ನು ಹೆಳವರಿಂದ ಪಡೆಯಲಾಗಿದೆ. ಮತ್ತು ಶ್ರೀ ಉಜ್ವಲಸಿಂಗ ಹಾಗೂ ಶ್ರೀ ದಿಗ್ವಿಜಯ ಪವಾರ ದೇಸಾಯಿಯವರ ಸಂದರ್ಶನದ ಮೂಲಕ ಪಡೆಯಲಾಗಿದೆ.

ಅಧ್ಯಾಯ - ೩

ಅಧ್ಯಾಯ - ೩

ದಿ. ಶ್ರೀಮಂತ ಧೈರ್ಯಶೀಲರಾವ್ (ಸಿದ್ಧರಾಜ) ಪವಾರ ದೇಸಾಯಿಯವರ ಜೀವನ ಮತ್ತು ಸಾಧನೆಗಳು.

ಮಂಗಸೂಳಿ ಪವಾರ ದೇಸಾಯಿಗಳಲ್ಲಿಯೇ ಧೈರ್ಯಶೀಲರಾವ್ ಅವರು ಅತ್ಯಂತ ಪ್ರಮುಖ ದೇಸಾಯಿಯಾಗಿದ್ದರೆ ಈ ಅಧ್ಯಯನದ ಕೇಂದ್ರ ಬಿಂದುವೇ ಧೈರ್ಯಶೀಲರಾವ್ ಎಂದರೂ ತಪ್ಪಲ್ಲ. ಭೋಜರಾಜ ದೇಸಾಯಿಯವರ ಹಿರಿಯ ಮಗನಾದ ಧೈರ್ಯಶೀಲರಾವ್ ಅವರ ಮೇಲೆ ಹೆಚ್ಚಿನ ಪ್ರೀತಿ ಹೊಂದಿದ್ದು. ಅವರ ಶಿಕ್ಷಣ ಮತ್ತು ಚಾರಿತ್ರಿಕ ಬೆಳವಣಿಗೆಯಲ್ಲಿ ಅವರ ತಂದೆಯ ಪಾತ್ರ ಅಮೋಘವಾದದ್ದು.

ಭೋಜರಾಜ ಮತ್ತು ಸುಶೀಲಾ ಬಾಯಿಯವರ ಹಿರಿಯ ಮಗನೇ ಧೈರ್ಯಶೀಲರಾವ್ ಕ್ರಿ.ಶಕ. ೧೯೧೯ ಜೂನ್ ೨೦ ರಂದು ಕೊಲ್ಹಾಪುರದಲ್ಲಿ ಜನಿಸಿದರು ಬಾಲ್ಯದಲ್ಲಿ ತೀಕ್ಷ್ಣಬುದ್ಧಿಯುಳ್ಳವರಾದ ಇವರು ಶಾಲಾ ಜೀವನವನ್ನು ಕೂಡ ಯಶಸ್ವಿಯಾಗಿಯೇ ಪೂರೈಸಿದರು. ಮುಂದೆ ಉನ್ನತ ಶಿಕ್ಷಣಕ್ಕಾಗಿ ವಾಡಿಯಾ ಕಾಲೇಜನ್ನು ಸೇರಿದರು ಕಾಲೇಜು ಶಿಕ್ಷಣವನ್ನು ಉನ್ನತ ದರ್ಜೆಯಲ್ಲಿ ಯಶಸ್ವಿಯಾಗಿಯೇ ಪೂರೈಸಿದರು. ಕಾಲೇಜಿಗೆ ಸೇರಿದ ಮೇಲೆ ಅಲ್ಲಿಯೇ ವಿದ್ಯಾರ್ಥಿನಿಲಯದಲ್ಲಿ ತಮ್ಮ ಅಭ್ಯಾಸಜೀವನವನ್ನು ನಡೆಸಿದ ಇವರು ದಿನನಿತ್ಯದ ಮತ್ತು ಎಡಬಿಡದ ಕಾರ್ಯವೆಂಬಂತೆ ಪರಿಶ್ರಮದಿಂದಲೇ ಅಭ್ಯಾಸ ಕ್ರಮ ರೂಡಿಸಿಕೊಂಡರು ೧೯೩೮ ರಲ್ಲಿ ಅವರು ತಮ್ಮ ಇಂಟರ ಮಿಡಿಯೆಟ್ ಶಿಕ್ಷಣವನ್ನು ಪಂಚಗಣಿ (ಮಹಾಬಳೇಶ್ವರ ಸಮೀಪ) ಆಂಗ್ಲ ಮಾಧ್ಯಮದಲ್ಲಿ ತಮ್ಮ ಇಂಟರ ಮಿಡಿಯಟ್ ಕಲಿಕೆಯನ್ನು ವಿದ್ಯಾರ್ಥಿನಿಲಯದಲ್ಲಿ ನೀಡುತ್ತಿದ್ದ ಆಹಾರವನ್ನಷ್ಟೇ ಸೇವಿಸುತ್ತಿದ್ದರಲ್ಲದೇ ಒಂದೊಂದು ದಿನ ಓದುತ್ತಾ ಕುಳಿತಾಗ ಊಟವೂ ಮರೆತು ಹೋಗುತ್ತಿತ್ತು. ಅಷ್ಟೊಂದು ಪರಿಶ್ರಮವಹಿಸಿ ಅಧ್ಯಯನದಲ್ಲಿ ತೊಡಗಿದ ಧೈರ್ಯಶೀಲರಾವ್ ಅವರು ಅದಕ್ಕೆ ತಕ್ಕಂತೆಯೇ ಪರಿಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದರು. ಬ್ರಿಟಿಷ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಇವರು ಉನ್ನತ ದರ್ಜೆಯಲ್ಲಿ ತೇರ್ಗಡೆಯಾದದ್ದು ಒಂದು ವಿಶೇಷವೆ ಆಗಿತ್ತು. ಪ್ರಾಥಮಿಕ, ಮಾಧ್ಯಮಿಕ, ಮತ್ತು ಕಾಲೇಜು ಓದಿನಲ್ಲಿಯೇ ಶಿಸ್ತಿನ ಸಿಪಾಯಿಗಳಾದ್ದರು. ತಂದೆ ಭೋಜರಾಜರು ಈ ಪೂರ್ವದಲ್ಲಿ ಈತನ ಬಾಲ್ಯದಲ್ಲಿಯ ಇವರ ಚಟುವಟಿಕೆಗಳನ್ನು ಗುರುತಿಸಿ ಸುಶಿಕ್ಷಿತರನ್ನಾಗಿ ಮಾಡಬೇಕೆಂದು ಹಂಬಲಿಸಿಯೇ ಇವರ ಓದಿಗೆ ಕಾಳಜಿಯಿಂದ ಸ್ಪಂದಿಸತೊಡಗಿದರು ಪ್ರತಿಯಾಗಿ ಧೈರ್ಯಶೀಲರಾವ್ ಪ್ರಥಮ ದರ್ಜೆಯಲ್ಲಿಯೇ ತೇರ್ಗಡೆಯಾಗುತ್ತಾ ಬಂದರು. ಧೈರ್ಯಶೀಲರಾವ್ ಪಠ್ಯ ಚಟುವಟಿಕೆಗಳಲ್ಲಿ ಎಷ್ಟು ಕ್ರಿಯಾಶೀಲರಾಗಿದ್ದರೂ, ಕ್ರೀಡೆಗಳಂತಹ ಪಠ್ಯೇತರ ಚಟುವಟಿಕೆಗಳಲ್ಲೂ ಅವರು ಆಸಕ್ತಿಯನ್ನು ತೆಳೆದಿದ್ದರು ವಿದ್ಯಾರ್ಥಿ ಜೀವನದಲ್ಲಿಯೇ ಕ್ರಿಕೆಟ್, ಕುಸ್ತಿಗಳು ಅವರ ಅಚ್ಚುಮೆಚ್ಚಿನ ಕ್ರೀಡಾ ಚಟುವಟಿಕೆಗಳಾಗಿದ್ದವು. ಹೀಗೆ ತಮ್ಮ ದೈಹಿಕ ಆರೋಗ್ಯವನ್ನು

ಹೆಚ್ಚಿಸಿಕೊಂಡ ಧೈರ್ಯಶೀಲರಾವ್ ಆರೋಗ್ಯವಂತ ದೇಹದಲ್ಲಿ ಆರೋಗ್ಯಕರ ವೈಚಾರಿಕ ಶಕ್ತಿ ಬೆಳೆಯುವಂತೆ ಇವರಲ್ಲಿ ಆ ಗುಣಗಳು ಸಹಜವಾಗಿಯೇ ಬೆಳೆದು ಬಂದವು. (ಚಿತ್ರ : ೪ ರಲ್ಲಿ ಕಾಣಬಹುದು) ಅಂತೆಯೇ ೧೯೩೮ ರಲ್ಲಿ ಇಂಟರ ಮಿಡಿಯೇಟ್ ಶಿಕ್ಷಣವನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಮುಂದೆ ಹೆಚ್ಚಿನ ವ್ಯಾಸಾಂಗಕ್ಕಾಗಿ ವಿದೇಶಕ್ಕೆ ತೆರಳುವ ಅಭಿಲಾಶೆಯನ್ನು ಹೊಂದಿದ್ದರು.

೧೯೩೮ ರ ಅಗಸ್ಟ ತಿಂಗಳು ಲಂಡನ್‌ಗೆ (ಗ್ರಹ ವಿಜ್ಞಾನ) ಪದವಿ ಅದ್ಯಯನಕ್ಕಾಗಿ ತೆರಳಿದರು. ಇದಕ್ಕೆ ತಂದೆ ಭೋಜರಾಜ ಅವರೂ ಪ್ರೋತ್ಸಾಹ ನೀಡಿದರು. ಲಂಡನ್‌ಗೆ ತೆರಳಿದ ಧೈರ್ಯಶೀಲರಾವ್ ಕೌಟುಂಬಿಕ ಸಮಸ್ಯೆಯನ್ನು ಏದುರಿಸಿದ ಕಾರಣ ಅದ್ಯಯನ ಮುಂದುವರೆಸಲಾಗದೇ ೧೯೩೯ ರಲ್ಲಿ ಮರಳಿ ತಾಯ್ನಾಡಿಗೆ ಹಿಂದಿರುಗಿದರು. ನಂತರ ತಂದೆಯ ವತನ ಆಡಳಿತೆಯಲ್ಲಿ ನೇರವಾಗಿ ನಿಂತು ಹಲವು ಕಾರ್ಯಗಳನ್ನು ಸ್ವತ: ತಾವೇ ನೇರವೇರಿಸುತ್ತಿದ್ದರು. ಹಿರಿಯ ಮಗನಾದ ಇವರಿಗೆ ಭೋಜರಾಜರು ದೇಸಗತ ಆಡಳಿತೆ ನಿರ್ವಹಣೆಯಲ್ಲಿ ಸರ್ವರೀತಿಯಿಂದಲೂ ಪಳಗಿಸಿದರು. ಈ ಅವಧಿಯಲ್ಲಿಯೇ ವತನಗಳಿಗೆಲ್ಲ ಬೇಟ್ಟಿಕೊಟ್ಟು ಎಲ್ಲ ಆಗು ಹೋಗುಗಳನ್ನು ಸ್ವತ: ತಾವೇ ವೀಕ್ಷಿಸುತ್ತಿದ್ದರಲ್ಲದೇ ರೈತರ -ರೈತ ಕೂಲಿಕಾರರ ಕುಂದುಕೊರತೆಗಳನ್ನು ಅರಿತು ಅವುಗಳ ಪರಿಹಾರಕ್ಕಾಗಿ ಹಣಕಾಸು ನೆರವನ್ನು ನೀಡುತ್ತಿದ್ದರೆಂದು ತಿಳಿದು ಬರುತ್ತದೆ. (ಚಿತ್ರ : ೫ ರಲ್ಲಿ ಕಾಣಬಹುದು) ತಂದೆಯ ಧಾರ್ಮಿಕ ಕಾರ್ಯಗಳಲ್ಲಿ ಇವರೂ ಭಾಗವಹಿಸುತ್ತಿದ್ದರು. ಇದೇ ಅವಧಿಯಲ್ಲಿ ಸಾರ್ವಜನಿಕರಿಗೆ ಅವಶ್ಯವಿದ್ದ ಎಲ್ಲ ಸೌಲಭ್ಯಗಳನ್ನು ನೀಡಲು ಪ್ರಯತ್ನಿಸಿದರಲ್ಲದೆ, ತಮ್ಮ ವತನದ ಎಲ್ಲ ರೈತ -ಕೂಲಿಕಾರರ ಅಚ್ಚುಮೆಚ್ಚಿನ ಕಿರಿಯಧಣಿ ಯಾಗಿ ಅವರ ಪ್ರೀತಿಯನ್ನು ಸಂಪಾದಿಸಿದರು. ತಂದೆ ಭೋಜರಾಜರು ಘೋರ್ಪಡೆ ಮನೆತನದ ಆಶಾದೇವಿ ಏಂಬುವಳೊಂದಿಗೆ (ಚಿತ್ರ : ೬ ರಲ್ಲಿ ಕಾಣಬಹುದು) ಮಗನ ವಿವಾಹವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರಲ್ಲದೆ, ಪ್ರಜೆಗಳಿಗೆಲ್ಲ ಅನ್ನ -ವಸ್ತ್ರದಾನ ಮಾಡಲಾಯಿತು. ಇದೇ ಅವಧಿಯಲ್ಲಿ ಅಥಣಿಯ ದೇವಾಲಯಗಳಿಗೂ ಅನೇಕ ದಾನ ನೀಡಲಾಯಿತೆಂದು ತಿಳಿದು ಬರುತ್ತದೆ.

ಸಾರ್ವಜನಿಕ ಜೀವನದಲ್ಲಿ ಧೈರ್ಯಶೀಲರಾವ್ :

ಧೈರ್ಯಶೀಲರಾವ್ ದೇಸಾಯಿಯವರು ತಂದೆಯ ಮರಣದ ನಂತರ ೧೯೫೨ ರಲ್ಲಿ ಸಾರ್ವಜನಿಕ ಜೀವನದಲ್ಲಿ ಕಾಲಿರಿಸಿದರು. ವಿವಿಧ ರಾಜಕೀಯ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ ಇವರು ರಾಜಕೀಯದಲ್ಲಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡರು. (ಚಿತ್ರ : ೭ ರಲ್ಲಿ ಕಾಣಬಹುದು) ನಂತರ ಅಥಣಿ ಪುರ ಸಭೆಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದರು. ಈ ಅವಧಿಯಲ್ಲಿ ಅಥಣಿ ಪ್ರದೇಶವು ಸಾಕಷ್ಟು ನೀರಿನ ಸಮಸ್ಯೆಯನ್ನು ಏದುರಿಸುತ್ತಿತ್ತು. ಅದನ್ನು ನಿವಾರಿಸುವುದಗೋಸ್ಕರವೇ ಅಥಣಿಯ ನಗರಸಭೆಯ ಹತ್ತಿರ ದೊಡ್ಡದಾದ ಬಾವಿಯನ್ನು ತೊಡಿಸಿ ನೀರಿನ ಸರಬರಾಜಿಗೆ ಅನುಕೂಲ ಕಲ್ಪಿಸಿದರು. ಈಗಲೂ ಅಥಣಿ ಪಟ್ಟಣಕ್ಕೆ ಈ ಬಾವಿಯಿಂದಲೇ ನೀರು ಸರಬರಾಜಾಗುತ್ತದೆ.

೧೯೬೨ ರ ಸುಮಾರಿಗೆ ಧೈರ್ಯಶೀಲರಾವ್ ಸಾರ್ವಜನಿಕ ಸಂಪರ್ಕದಲ್ಲಿ ಹೆಚ್ಚು ಹೆಚ್ಚಾಗಿ ಬೆಳಕಿಗೆ ಬಂದದ್ದು. ಕೃಷ್ಣಾ ನದಿಯಿಂದ ನೀರು ಸರಬರಾಜಿಗೆ ವ್ಯವಸ್ಥೆ ಕಲ್ಪಿಸಿದ್ದು ನಿಜಕ್ಕೂ ಅದ್ಭುತವಾದದ್ದು. ಈ ಅವಧಿಗೆ ಧೈರ್ಯಶೀಲರಾವ್ ಯಾವುದೇ ರಾಜಕೀಯ ಪಕ್ಷದೊಂದಿಗೆ ತಮ್ಮನ್ನು ಗುರುತಿಸಿಕೊಂಡಿರಲಿಲ್ಲ. ಸ್ವತಂತ್ರವಾಗಿಯೇ ಇಂತಹ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸಿದರು. ಕಾರಣ ತತ್ವಶೀಲರಾದ ಇವರು ಇಂತಹ ರಾಜಕೀಯ ಪಕ್ಷಗಳ ಕರೆಗೆ ಓಗೊಡಲಿಲ್ಲವೆಂಬುದು ಮಾತ್ರ ವಿಶೇಷವಾದದ್ದು. ಹೀಗೆಯೆ ತಮ್ಮ ಸಾಮಾಜಿಕ ಚಟುವಟಿಕೆಗಳ ಮೂಲಕ ಸಮಸ್ತ ಜನರ ಮನಗೆದ್ದರಲ್ಲದೇ ಇವರ ಇಂತಹ ಸಾಧನೆಗಳು ಅಥಣಿಯಲ್ಲೆಲ್ಲಾ ಮನೆಮಾತಾದವು ಕೆಲವೊಮ್ಮೆ ತಮ್ಮ ಸ್ವಂತ ಹಣವನ್ನು ಕೂಡ ಖರ್ಚುಮಾಡಿ ಕಾರ್ಯಸಾಧನೆ ಗೈಯುತ್ತಿದ್ದರು.

೧೯೫೩ ರಲ್ಲಿ ಮಂಗಸೂಳಿ ಮಾರ್ತಂಡ ದೇವಾಲಯದ ಟ್ರಸ್ಟನ್ನು ಸ್ಥಾಪಿಸಿ ಅದರ ಟ್ರಸ್ಟಿಯಾಗಿಯೂ ಕಾರ್ಯನಿರ್ವಹಿಸಿದ ಇವರು (ಅನುಬಂಧದಲ್ಲಿ ಪ್ರಮಾಣ ಪತ್ರ ನೀಡಲಾಗಿದೆ.) ಧಾರ್ಮಿಕ ಕಾರ್ಯಗಳು ಅನ್ನಸಂತರ್ಪಣೆಗಾಗಿ ಧಾರಾಳವಾಗಿ ಕಾಣಿಕೆ ನೀಡುತ್ತಾ ಬಂದಿದ್ದರು. ಅಲ್ಲಿ ನವರಾತ್ರಿ ಉತ್ಸವ, ಪಲ್ಲಕ್ಕಿ ಉತ್ಸವ ದೀಪಾವಳಿ ಮೊದಲಾದ ಹಬ್ಬಗಳನ್ನು ಬಹುವಿಜೃಂಭಣೆಯಿಂದ ಆಚರಿಸುವ ಪದ್ದತಿಯನ್ನು ವ್ಯವಸ್ಥೆಗೊಳಿಸಿದರು. ದೇವಾಲಯದ ಪೂಜೆಗೈಯುವ ಸಲುವಾಗಿಯೇ ಅರ್ಚಕರನ್ನು ನೇಮಿಸಿ ಅವರಿಗೆ ಭೂಮಿಯನ್ನು ಉಂಬಳಿಗಾಗಿ ಬಿಟ್ಟುಕೊಟ್ಟ ದಾಖಲೆಗಳನ್ನು ನೋಡಬಹುದು. ಉತ್ಸವ ಸಮಯದಲ್ಲಿ ಪಲ್ಲಕ್ಕಿಯನ್ನು ಹೊರುವುದಕ್ಕಾಗಿಯೇ ಪ್ರತ್ಯೇಕ ಸೇವಕರನ್ನು ನೇಮಿಸಿ ಅವರಿಗೂ ಕೂಡಾ ಭೂಮಿಯನ್ನು ಉಂಬಳಿಯಾಗಿ ಬಿಟ್ಟದ್ದನ್ನು ಕಾಣಬಹುದು. ಅಷ್ಟೇ ಅಲ್ಲ ದೇವಾಲಯದಲ್ಲಿ ಕಾರ್ತಿಕ ಮಾಸಾಚರಣೆಯನ್ನು ಕೂಡ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಉದಾರ ಕಾಣಿಕೆ ನೀಡಿದರು. ಅದರಂತೆಯೇ ಇದೆ ಅವಧಿಯಲ್ಲಿಯೇ ಅಥಣಿಯ ಸಿದ್ದೇಶ್ವರ ದೇವಾಲಯಕ್ಕೂ ಅಪಾರ ಕಾಣಿಕೆ ನೀಡಿ ಹಬ್ಬ -ಉತ್ಸವಾಚರಣೆಗಳು ಕಾಲದಿಂದ ಕಾಲಕ್ಕೆ ನೆರವೇರಿಸಲು ಸಹಕರಿಸಿದರು. ಈ ದೇವಾಲಯದಲ್ಲಿ ಇವರು ಮಾಡಿಸಿಕೊಟ್ಟ ಸಿದ್ದೇಶ್ವರನ ಬೆಳ್ಳಿಯ ವಿಗ್ರಹ ಇಂದಿಗೂ ಪೂಜೆಗೊಳ್ಳುತ್ತಿದೆ. (ಚಿತ್ರ : ೮ ರಲ್ಲಿ ಕಾಣಬಹುದು.)

ಹೀಗೆ ಸಾರ್ವಜನಿಕ ಜೀವನದಲ್ಲಿ ತಮ್ಮ ಉದಾರ ಕೊಡುಗೆ ಧಾನ -ಸಹಾಯ ನೀಡುವುದರಿಂದ ಜನರ ಪ್ರೀತಿಗೆ ಪಾತ್ರರಾದರಲ್ಲದೇ ಜನತೆಯ ಇಚ್ಛೆಯ ಮೇರೆಗೆ ೧೯೫೮ ರಲ್ಲಿ ತಾಲೂಕಾ ಅಭಿವೃದ್ಧಿ ಮಂಡಳಿಗೆ ಆಯ್ಕೆಯಾದ ಇವರು ಹಲವಾರು ಅಭಿವೃದ್ಧಿಶೀಲ ಕಾರ್ಯಗಳು ಕಾರ್ಯಗತವಾಗುವಂತೆ ನೋಡಿಕೊಂಡರಲ್ಲದೇ ಅಥಣಿಯ ಅಭಿವೃದ್ಧಿಗಾಗಿ ಪ್ರಯತ್ನಿಸಿದರು. ತಾವು ಯೋಜಿಸಿದ ಹಲವಾರು ಸಾರ್ವಜನಿಕ ಕಾರ್ಯಗಳನ್ನು ಪೂರ್ಣಗೊಳಿಸಲು ಹಗಲು -ರಾತ್ರಿಯನ್ನದೇ ದುಡಿದರು. ಯಾವುದೇ ಕಾರ್ಯಗಳನ್ನು ಕೈಗೆತ್ತಿಕೊಂಡರೂ ಕೂಡ ಸರಕಾರದ ಅನುದಾನ ವಿಳಂಬವಾಗುತ್ತಿತ್ತಲ್ಲದೇ ಕಾರ್ಯಗಳು ಮೊಟಕುಗೊಳ್ಳಬಾರದೆಂದು ಸ್ವತ: ಹಣಕಾಸು

ಸಹಾಯ ನೀಡುತ್ತಿದ್ದರು. ಅವರು ಕೈಗೆತ್ತಿಕೊಂಡ ಕಾರ್ಯಗಳಲ್ಲಿ ಅತಿ ಮಹತ್ವದವುಗಳೆಂದರೆ, ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿ ಕೆರೆ, ಕಾಲುವೆ ನಿರ್ಮಾಣಕ್ಕೆ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಶ್ರಮಪಟ್ಟರು. ಮಂಗಸೂಳಿ ಊರಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಬಾವಿಯನ್ನು ನೀಡಿರುವುದು. ರಿ.ಸ.ನಂ-೪೦೩/೧ಎ ದಲ್ಲಿ ಕಂಡುಬರುತ್ತದೆ. ಅಥಣಿ ತಾಲೂಕಿನಾದ್ಯಂತ ಹಲವು ಕೆರೆಗಳ ನಿರ್ಮಾಣ, ರಸ್ತೆ ನಿರ್ಮಾಣ, ಆರೋಗ್ಯ ನೈರ್ಮಲ್ಯ, ಮತ್ತು ಶಿಕ್ಷಣ ರಂಗಗಳಿಗೆ ಆದ್ಯತೆ ನೀಡಿ ಅವುಗಳನ್ನು ಕಾರ್ಯರೂಪಕ್ಕೆ ತಂದ ಕೀರ್ತಿ ಧೈರ್ಯಶೀಲರಾವ್ ಪವಾರ ದೇಸಾಯಿಯವರದು.

೧೯೬೭ ರಲ್ಲಿ ಕರ್ನಾಟಕ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಹುಮತಗಳ ಅಂತರದಿಂದ ಆಯ್ಕೆಯಾದರು (ಅನುಬಂಧದಲ್ಲಿ ಪ್ರಮಾಣ ಪತ್ರ ನೋಡಬಹುದು) ಇವರ ಆಯ್ಕೆ ಇಡೀ ಅಥಣಿ ತಾಲೂಕಿನಲ್ಲಿಯೇ ಸಂಭ್ರಮದ ವಾತಾವರಣವನ್ನು ಸೃಷ್ಟಿಸೀತು. ಈ ಅವಧಿಯಲ್ಲಿಯೂ ಇವರ ಸೇವೆ ಅಮೋಘವಾದದ್ದು ಆದ ಕಾರಣದಿಂದಲೇ ೧೯೬೮ ರಲ್ಲಿ ಮತ್ತೆ ೩ ನೇ ಬಾರಿಗೆ ಶಾಸಕರಾಗಿ ಚುನಾಯಿತರಾದರು ಇವರಿಗಿದ್ದ ಜನ ಬೆಂಬಲ ಮತ್ತು ಶಾಸಕರಿರುವಾಗಲೇ ಇವರು ಸಲ್ಲಿಸಿದ ಸೇವೆಯ ಫಲವಾಗಿಯೇ ೧೯೬೮ -೧೯೭೩ ರ ವರೆಗೆ ರಾಜ್ಯದ ಸಹಾಯಕ ಕೃಷಿ ಸಚಿವರಾಗಿ ಸೇವೆ ಸಲ್ಲಿಸಿದರು.

ಧೈರ್ಯಶೀಲರಾವ್ ಪವಾರ ದೇಸಾಯಿಯವರು ಶಾಸಕ -ಸಚಿವರಾಗಿ (ಅನುಬಂಧದಲ್ಲಿ ಚುಣಾವಣಾ ಅಧಿಕಾರಿ ನೀಡಿದ ಪತ್ರ ನೋಡಬಹುದು) ಸಲ್ಲಿಸಿದ ಸೇವೆಯು ಅವರ ಪೂರ್ವಜರ ದೇಸಗತಿಗೆ ಸಂದ ಗೌರವವೆಂದೇ ಪರಿಗಣಿಸಲ್ಪಟ್ಟದ್ದು, ರಾಜಕೀಯ ಜೀವನದಲ್ಲಿಯೇ ಅವರೊಬ್ಬ ಅನುಕರಣೀಯ ವ್ಯಕ್ತಿ ಎಂದು ಅವರ ಸಮಕಾಲೀನರ ಅಭಿಪ್ರಾಯವಾಗಿದೆ. ಕೃಷಿ -ವ್ಯವಸಾಯಕ್ಕೆ ಹೆಚ್ಚು ಒತ್ತು ನೀಡಿ ಆರ್ಥಿಕ ಸಬಲತೆ ಸಾಧಿಸುವ ನಿಟ್ಟಿನಲ್ಲಿಯೇ ಕಾರ್ಯನಿರ್ವಹಿಸಿದರು. ಆದ್ದರಿಂದಲೇ ಅಥಣಿ ತಾಲೂಕಿನಲ್ಲಿ ಅನೇಕ ಕೆರೆಗಳನ್ನು ನಿರ್ಮಿಸುವ ಯೋಜನೆಯನ್ನು ಹಾಕಿಕೊಂಡು ಅವುಗಳನ್ನು ಪೂರ್ಣಗೊಳಿಸಿದರು. ಅಥಣಿಯ ಪೂರ್ವದಲ್ಲಿ ಅಂದರೆ ೨೩ ಕಿ.ಮೀ. ದೂರದಲ್ಲಿರುವ ಕೋಹಳ್ಳಿಯಲ್ಲಿ ಕೆರೆಯೊಂದನ್ನು ನಿರ್ಮಿಸಿದರು. (ಚಿತ್ರ : ೯ ರಲ್ಲಿ ಕಾಣಬಹುದು) ಇದು ಬೆಳಗಾಂವ ಜಿಲ್ಲೆಯಲ್ಲಿಯೇ ಅತ್ಯಂತ ದೊಡ್ಡದು. ಅನೇಕ ಅಡೆತಡೆಗಳು ಬಂದರೂ ಅವುಗಳಿಗೆ ಜಗ್ಗದೇ ರಾಜ್ಯ ಸರಕಾರದ ಹಣಕಾಸು ನೆರವಿನಿಂದ ಈ ಕಾರ್ಯವನ್ನು ಸಾಧಿಸಿದರು. ಇದಕ್ಕೆ ಕೇಂದ್ರ ಸರಕಾರದಿಂದ ಯಾವುದೇ ಹಣಕಾಸು ನೆರವು ದೊರೆಯದೆ ಇದ್ದಾಗ ಸ್ವತ: ತಮ್ಮದೇ ಹಣವನ್ನು ನೀಡಿಯೂ ಕೂಡ ಇದನ್ನು ಸ್ಥಾಪಿಸಿದ ಕೀರ್ತಿ ಧೈರ್ಯಶೀಲರಾವ್ ಅವರದು, ಇದರಿಂದಾಗಿಯೇ ಅಥಣಿ ತಾಲೂಕಿನ (ಪೂರ್ವದ) ಬಹುಭಾಗದ ಜಮೀನು ನೀರಾವರಿಗೆ ಒಳಪಟ್ಟಿತು.

ನೀರಾವರಿ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿದ ಇವರು ಮಂಗಸೂಳಿಯಲ್ಲಿ ಬಸವಣ್ಣನ ಕೆರೆ ಮತ್ತು ಮಲ್ಲಯ್ಯನ ಕೆರೆ ಹೀಗೆ ಎರಡು ಕೆರೆಗಳುನ್ನ ನಿರ್ಮಿಸಿ ಮಂಗಸೂಳಿ ಸುತ್ತಲಿನ

ನೀರಾವರಿ ಕಾರ್ಯಗಳಿಗೆ ಅನುಕೂಲ ಕಲ್ಪಿಸಿದರು.

ತಾಂತ್ರಿಕತೆಯನ್ನು ಸ್ವತ: ಅಧ್ಯಯನ ಗೈದು ರಾಜ್ಯದಲ್ಲಿಯೂ ಅಂತಹ ತಂತ್ರಾಂಶಗಳನ್ನು ರೂಡಿಸಲು ಅನುವಾದರು ಇದನ್ನು ಕಾರ್ಯರೂಪಕ್ಕೆ ತರಲು ಮತ್ತು ಅಭಿವೃದ್ಧಿಪಡಿಸಲು ವಿದೇಶಗಳಲ್ಲಿಯೂ ಅಸ್ತಿತ್ವದಲ್ಲಿದ್ದ ಪದ್ದತಿಗಳನ್ನು ಸ್ವತ: ಆಸಕ್ತಿಯಿಂದ ಅಧ್ಯಯನ ಗೈದರು.

ಹೀಗೆ ಧೈರ್ಯಶೀಲರಾವ್ ಅವರ ಕಾರ್ಯಸಾಧನೆಗಳು ಅವಿಸ್ಮರಣೀಯವಾಗಿವೆ. ಕೃಷಿ -ಬಂದರು ಖಾತೆ ಮಂತ್ರಿಯಾಗಿ ತಮಗೆ ವಹಿಸಿದ ಖಾತೆಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದರಲ್ಲದೇ ಪ್ರತಿ ಕಾರ್ಯದಲ್ಲೂ ತಾವೇ ಬಾಗಿಗಳಾಗಿ ಸ್ವತ: ವೀಕ್ಷಿಸಿ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು. ರಾಜ್ಯದ ಯಾವುದೇ ಮೂಲೆಯಲ್ಲಿ ಕುಳಿತು ಈಗಿನ ಮಂತ್ರಿಗಳಂತೆ ವರದಿಗಳನ್ನು ತರಿಸಿಕೊಂಡು ಮೆಲ್ನೋಟದ ಕಾರ್ಯಗಳನ್ನು ಕೈಗೊಳ್ಳುವುದನ್ನು ಒಪ್ಪದೇ ಪ್ರತಿ ಪ್ರದೇಶಗಳಿಗೆ ತಾವೇ ಬೇಟಿ ನೀಡಿ ವಸ್ತುಸ್ಥಿತಿಯನ್ನು ಅರಿಯಲು ಪ್ರಯತ್ನಿಸುತ್ತಿದ್ದರು. (ಚಿತ್ರ ಸಂಖ್ಯೆ - ೧೦) ಅವರ ಕೈಗೆ ಬಂದ ಯಾವುದೇ ಕಾರ್ಯಗಳಿರಲಿ ಅಚ್ಚುಕಟ್ಟಾಗಿ ಯೋಜನಾ ಬದ್ಧವಾಗಿ ನೇರವೇರುತ್ತಿದ್ದವೆಂದು ಗಮನಿಸಬೇಕಾದ ಅಂಶ.

ಆರೋಗ್ಯ ಮತ್ತು ನೈರ್ಮಲ್ಯ :

ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಕಾಯ್ದುಕೊಳ್ಳಲು ಹಲವು ಕಾರ್ಯಗಳನ್ನು ಜಾರಿಗೊಳಿಸಿದರು. ಬಡವರು ಹೆಣ್ಣು ಮಕ್ಕಳ ಆರೋಗ್ಯಕ್ಕೆ ಗಮನ ನೀಡಿದ ಧೈರ್ಯಶೀಲರಾವ್ ಅವರು ಅಥಣಿಯಲ್ಲಿ ತಾಲೂಕಾ ಆರೋಗ್ಯ ಕೇಂದ್ರ ಸ್ಥಾಪನೆಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ತಾಲೂಕಿನ ಕಾಗವಾಡ, ಸತ್ತಿ, ಅನಂತಪೂರ, ಕಕಮರಿ, ಸಂಕ್ರಟ್ಟಿ ಮತ್ತು ಮದಭಾಂವಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಅಸ್ತು ಹಾಕಿದರು ಬಡ ನಿರ್ಗತಿಕರಿಗೆ ಉಚಿತವಾಗಿ ವೈದ್ಯಕೀಯ ಸೇವೆ ಲಭಿಸುವಂತೆ ಮಾಡಿದರು. ಬಡವರು ಅತಿಯಾದ ರೋಗದಿಂದ ಬಳಲುತ್ತಿದ್ದರೆ ಅಂತವರಿಗೆ ಹೆಚ್ಚಿನ ವೈದ್ಯಕೀಯ ಪರೀಕ್ಷೆಯ ಖರ್ಚುಗಳನ್ನು ತಾವೇ ಭರಿಸುತ್ತಿದ್ದರು. ತಮ್ಮ ವತನ ಭೂಮಿಯಲ್ಲಿ ಕೆಲಸ ಮಾಡುವ ರೈತರ ಕೂಲಿಕಾರರ ಆರೋಗ್ಯ ಮತ್ತು ಮಕ್ಕಳ ಶಿಕ್ಷಣದ ಖರ್ಚಿಗಾಗಿಯೂ ಧೈರ್ಯಶೀಲರಾವ್ ಅವರೇ ತಮ್ಮ ಜೇಬಿನಿಂದ ಧನಸಹಾಯವನ್ನು ನೀಡುತ್ತಿದ್ದರೆನ್ನುವದನ್ನು ಸ್ವತ: ಕಂಡ ಹಿರಿಯರು ಅವರ ವ್ಯಕ್ತಿತ್ವವನ್ನು ಕೊಂಡಾಡುತ್ತಾರೆ.

ಅಥಣಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಅಥಣಿ ಪಟ್ಟಣದ ಕಲುಷಿತ ನೀರು ಹೊರಹೋಗುವಂತೆ ವ್ಯವಸ್ಥೆ ಮಾಡಿಸಿದರಲ್ಲದೇ ಹಲವು ಗ್ರಾಮಗಳಲ್ಲಿ ಕೊಳೆಯಾದ ನೀರು ನಿಲ್ಲದಂತೆ ರಸ್ತೆಗಳ ಇಕ್ಕೆಲಗಳಲ್ಲಿ ಕಾಲುವೆ ತೋಡಿಸಿದ ದೇಸಾಯಿಯವರು ಗ್ರಾಮ ನೈರ್ಮಲ್ಯಕ್ಕೂ ಅಮೋಘವಾದ ಕೊಡುಗೆ ನೀಡಿದ್ದಾರೆ.

ಧೈರ್ಯಶೀಲರಾವ್ ಅವರ ವ್ಯಕ್ತಿತ್ವ :

ಧೈರ್ಯಶೀಲರಾವ್ (ಡಿ.ಬಿ.ಪವಾರ್) ಪವಾರ ದೇಸಾಯಿಯವರ ವ್ಯಕ್ತಿತ್ವವು ಆಕರ್ಷಣೀಯವಾದದ್ದು. ಛಾಯಾ ಚಿತ್ರದಲ್ಲಿರುವ (ಚಿತ್ರ ಸಂಖ್ಯೆ -೧೧) ಅವರ ಮುಖವನ್ನು ನೋಡಿದರೆಯೇ ಅವರೊಬ್ಬ ನಿಸ್ವಾರ್ಥ, ಜನಪರ ಸೇವಾಕಾಂಕ್ಷಿಯಾದ ಮತ್ತು ನೈತಿಕ ನೆಲೆಗಟ್ಟಿನ ಮೇಲೆಯೇ ತಮ್ಮ ಜೀವನವನ್ನು ಸಾಗಿಸಿದವರು ರಾಜಕೀಯವಾಗಿಯೂ ಲಂಚಗುಳಿತನ, ಭ್ರಷ್ಟಾಚಾರದಿಂದ ದೂರ ಉಳಿದ ಅಪರೂಪದ ರಾಜಕಾರಣಿ ಸರ್ವಗುಣ ಸಂಪನ್ನತೆ ಇವರ ವ್ಯಕ್ತಿತ್ವದ ಒಂದ ಭಾಗವೇ ಆಗಿತ್ತು. ಶಾಸಕ ಸಚಿವರಾಗಿದ್ದಾಗಲೂ ಸರಕಾರದ ಒಂದು ಪೈಸೆಯನ್ನು ತಮ್ಮ ಸ್ವಂತಕ್ಕೆ ಬಳಸಿಕೊಳ್ಳದೇ ತಮ್ಮ ಕೈಯಿಂದಲೇ ಸ್ವತ: ದುಡ್ಡನ್ನು ದಾನವಾಗಿ ನೀಡುತ್ತಿದ್ದರು. ಬಡ ಕೂಲಿಕಾರರು ತಮ್ಮ ಸಮಸ್ಯೆಗಳನ್ನು ಇವರ ಮುಂದಿಟ್ಟಾಗ ತಾವೇ ಅವರ ಸಮಸ್ಯೆಗೆ ಪರಿಹಾರ ಸೂಚಿಸುತ್ತಿದ್ದರಲ್ಲದೇ ''ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಕೊಟ್ಟದ್ದು ಕೆಟ್ಟಿತೆನಬೇಡಾ'' ಎಂಬ ಮಾತನ್ನು ಅಕ್ಷರಶ : ಪಾಲಿಸಿದವರು ಮನೆಯಿಲ್ಲದವರಿಗೆ ತಮ್ಮ ಹಣದಿಂದಲೇ ಮನೆ ಕಟ್ಟಿಸಿಕೊಟ್ಟದ್ದು ಕೆಲವರಿಗೆ ಜಾಗೆಯನ್ನು ದಾನ ಮಾಡಿ ಅಲ್ಲಿ ವಾಸಿಸಲು ಅನುಕೂಲಕಲ್ಪಿಸಿಕೊಟ್ಟದ್ದು ಮತ್ತು ತಮ್ಮ ಚಿಕ್ಕಪುಟ್ಟ ಮನೆಗಳನ್ನು ಬಡವರಿಗೆ ದಾನ ಮಾಡಿ 'ದಾನ ಶೂರ ಕರ್ಣ' 'ಬಡವರು ಬಂಧು' ಎಂದು ಕರೆಯಿಸಿಕೊಂಡಿದ್ದಾರೆ. ಅಂದಿನ ರಾಜಕೀಯ ವ್ಯವಸ್ಥೆಯಲ್ಲಿಯೂ ಕೂಡ ಇವರಿಗೆ ಹೆಚ್ಚಿನ ಗೌರವವಿದ್ದಿತು ಅಂದಿನ ಕರ್ನಾಟಕ ರಾಜಕೀಯದಲ್ಲಿಯೇ ದಿಗ್ಗಜರೆನಿಸಿದ ಶ್ರೀ ದೇವರಾಜ ಅರಸ ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಗುಂಡೂರಾವ್, ಶ್ರೀ ವಿರೇಂದ್ರ ಪಾಟೀಲ, ಶ್ರೀ ಬಿ.ಡಿ. ಜತ್ತಿ, ಶ್ರೀ ಎಸ್.ಆರ್. ಕಂಠಿ ಮೊದಲಾದವರೊಂದಿಗೆ ಸ್ನೇಹ ಹೊಂದಿದ್ದ ಇವರಿಗೆ ಒಳ್ಳೇಯ ಗೌರವವೂ ಇವರಿಗಿತ್ತು ಸ್ವತ: ಶ್ರೀ ದೇವರಾಜ ಅರಸು ಕಾಲದಲ್ಲಿ ವಿಧಾನ ಸೌಧದಲ್ಲಿ ಪವಾರ ದೇಸಾಯಿಯವರು ಕಾಲಿಟ್ಟರೆ ಸ್ವತ: ಅರಸು ಅವರೇ ಇವರನ್ನು ಅತ್ಯಂತ ಗೌರವಾದರಗಳಿಂದ ಬರಮಾಡಿಕೊಳ್ಳುತ್ತಿದ್ದರು. ಶ್ರೀಮತಿ ಇಂದಿರಾಗಾಂಧಿಯವರು ೧೯೭೮ ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಇವರ ಪ್ರಚಾರಕ್ಕೆಂದು ಅಥಣಿಗೆ ಆಗಮಿಸಿದ್ದಾಗ ಇವರಿಗಿದ್ದ ಜನಬೆಂಬಲ ಮತ್ತು ಆದರ್ಶಗುಣಗಳಿಂದ ದೀನ -ದಲಿತರ ಮನಗೆದ್ದ ಪವಾರ ದೇಸಾಯಿಯವರನ್ನು ತುಂಬು ಹೃದಯದಿಂದ ಪ್ರಶಂಸಿಸಿದ್ದರಲ್ಲದೇ ಸದ್ಗುಣಗಳ ಗಣಿ ಎಂದು ಕೊಂಡಾಡಿದ್ದರು.

ಜಾತಿ ಧರ್ಮವನ್ನು ಪರಿಗಣಿಸಿದೇ ಎಲ್ಲ ಧರ್ಮೀಯರಿಗೆ ಉದಾರದಾನ ನೀಡಿದಂತೆಯೇ ನಿರುದ್ಯೋಗಿ ಬಡವರಿಗೂ ಸರಕಾರಿ ಕೆಲಸ ದೊರಕಿಸಿ ಕೊಟ್ಟ ಕೀರ್ತಿ ಇವರದು. ಇಂದಿನ ರಾಜಕಾರಣಿಗಳಂತೆ ಸ್ವಾರ್ಥವನ್ನು ಎಂದು ಬಯಸಿದವರಲ್ಲ, ಒಂದು ವೇಳೆ ಇವರು ಜೀವಿಸಿದ್ದರೆ ಇಂದಿನ ರಾಜಕೀಯ ಸ್ಥಿತಿಯನ್ನು ಕಂಡು ಮರುಗದೇ ಇರುತ್ತಿರಲ್ಲಿಲ್ಲ. ಇಂತಹ ಸದ್ಗುಣಗಳಿಂದಲೇ ಇವರು ರಾಜಕೀಯದಲ್ಲಿ ಅಷ್ಟೇ ಅಲ್ಲ, ಸಾಮಾಜಿಕ ಜೀವನದಲ್ಲಿಯೂ ''ಅಜಾತಶತ್ರು'' ಎಂದೆನಿಸಿಕೊಂಡಿದ್ದಾರೆ. ಇವರಂತಹ ಸಮಾಜ ಸುಧಾರಕ, ಉತ್ತಮ ಹರಿಕಾರ ರಾಜಕಾರಣಿ

ಅಥಣಿಯ ಅಪರೂಪದ ವ್ಯಕ್ತಿತ್ವವೇ ಸರಿ ಎಂದು ಅವರ ಸಮಕಾಲೀನರ ಅಭಿಪ್ರಾಯವಾಗಿದೆ.

ಧೈರ್ಯಶೀಲರಾವ್ ಪವಾರ ದೇಸಾಯಿಯವರು ಮರಾಠರಾದರೂ ಆದರೂ ಕೂಡ ತಮ್ಮ ಜೀವನದಲ್ಲೆಂದೂ ಜಾತಿಯನ್ನೆಣಿಸಲಿಲ್ಲ, ತಮ್ಮ ಜಾತಿ, ಬಂದು - ಬಳಗ, ಎಂದು ಸ್ವಾರ್ಥಬಯಸುವ ಇಂದಿನ ದುರುಳ ರಾಜಕಾರಣಿಗಳಿಗೆ ಇವರೊಬ್ಬ ಮಾದರಿ ವ್ಯಕ್ತಿ. ಈ ಅವಧಿಯಲ್ಲಿ ಹಿಂದೂ -ಮುಸ್ಲಿಂ ಸಾಮರಸ್ಯ ಸ್ಥಾಪನೆಗೆ ಪ್ರಥಮ ಪ್ರಾಶಸ್ತ್ಯ ನೀಡಿದರಲ್ಲದೇ ಧರ್ಮಬೇದವಿಲ್ಲದೇ ಎಲ್ಲರಿಗೂ ಸಮನಾಗಿಯೇ ದಾನ -ಧರ್ಮ ಮಾಡುತ್ತಿದ್ದರು. ಉರ್ದುಶಾಲೆಗೂ ದಾನ ನೀಡಿದರಲ್ಲದೇ, ಕುರುಬ ಸಮಾಜ ತಮ್ಮದೇಯಾದ ಕುಲದೈವನ ದೇವಾಲಯ ನಿರ್ಮಿಸಲು ಸ್ಥಳವನ್ನು ದಾನವಾಗಿ ನೀಡಿದರು. ವೈಯಕ್ತಿಕವಾಗಿ ಶಿವನ ಆರಾಧಕರಾದ ಧೈರ್ಯಶೀಲರಾವ್ ಯಾವ ಧರ್ಮವನ್ನು ಹೆಚ್ಚು ಕಡಿಮೆ ಎಂದು ಪರಿಗಣಿಸಿದವರಲ್ಲ. ಇವರು ದೇವರಲ್ಲಿ ಅಪಾರ ನಂಬಿಕೆ ಇಟ್ಟಿದ್ದರು. ಧೈರ್ಯಶೀಲರಾವ್ ಅವರು ಎಲ್ಲಿಯೇ ಹೋದರೂ ಅಥಣಿಯ ಮಣ್ಣಿನಿಂದ ಶಿವಲಿಂಗವನ್ನು ತಯಾರಿಸಿ ಪೂಜೆಗೈಯುತ್ತಿರುವುದು, ಅವರ ದೈವ ಭಕ್ತಿಯನ್ನು ಸೂಚಿಸುತ್ತದೆ ಅವರು ಸಚಿವರಾಗಿ ಬೆಂಗಳೂರಿನಲ್ಲಿರಲಿ ಅಥವಾ ವಿದೇಶಗಳಲ್ಲಿಯೇ ಇರಲಿ ತಮ್ಮ ಈ ಕಾಯಕವನ್ನು ಮಾತ್ರ ಮರೆಯುತ್ತಿರಲಿಲ್ಲ. ಇವರು ಅಯೋಧ್ಯೆಯ ಭಾಗವತ ಮಹಾರಾಜರಿಂದ ಶಿವಲಿಂಗ ದೀಕ್ಷೆ ಪಡೆದುಕೊಂಡಿದ್ದರು. ಅಷ್ಟೇಅಲ್ಲದೆ ಮುನಿಗಳು, ಋಷಿಗಳು, ಧರ್ಮಪಂಡಿತರು, ಸಾಧುಸತ್ಪುರುಷರೊಂದಿಗೆ, ಆಧ್ಯಾತ್ಮಿಕ ವಿಚಾರಗಳನ್ನು ಪಡೆಯುತ್ತಿದ್ದರು. ಹೀಗೆ ಇವರು ಸರ್ವ ಧರ್ಮ ಸಮಭಾವನೆ ಹೊಂದಿದ್ದು ಅಲ್ಲಿಯ ದೇವಾಲಯಗಳಿಗೂ ಉದಾರ ದಾನ ನೀಡಿದ್ದರೆಂಬುದನ್ನು ಅರಿಯಬಹುದು. ಒಟ್ಟಾರೆಯಾಗಿ ಸರ್ವಗುಣ ಸಂಪನ್ನ ಕ್ರಿಯಾಶೀಲ ವ್ಯಕ್ತಿತ್ವ ಇವರದಾಗಿತ್ತು.

ಸುಮಾರು ಆರು ಅಡಿ ಎತ್ತರವಿರುವ, ಉತ್ತಮ ದೇಹದಾರ್ಢ್ಯವನ್ನು ಪಡೆದಿದ್ದರು. ದೈಹಿಕವಾಗಿ ಬಲಶಾಲಿಯಾದ ಇವರು ಪ್ರತಿದಿನ ಯೋಗ ಅಭ್ಯಾಸದಲ್ಲಿ ತೊಡಗುತ್ತಿದ್ದರು. ಅವರು ಅಧ್ಯಯನ ಪ್ರಿಯರಾಗಿದ್ದು, ಅವರದೇ ಒಂದು ಗ್ರಂಥಾಲಯವೂ ಇದ್ದು, ಪ್ರತಿ ಪುಸ್ತಕವನ್ನು ಓದಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಸುಮಾರು ೬೦೦ ಪುಸ್ತಕಗಳನ್ನು ನಾವು ಈಗಲೂ ಕಾಣಬಹುದು ಯೋಗ, ಆಧ್ಯಾತ್ಮ, ತತ್ವ ವಿಜ್ಞಾನ, ತಾಂತ್ರಿಕತೆ, ಧರ್ಮ, ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ಕಾಣಬಹುದು. ಕಾರ್ಲಮಾರ್ಕ್ಸನ 'ದಾಸ್ ಕ್ಯಾಪಿಟಲ್' ನ್ನು ನಿರರ್ಗಳವಾಗಿ ಓದಿ ಅರಗಿಸಿಕೊಂಡವರಾಗಿದ್ದರು. ಮರಾಠಿಗರಾಗಿದ್ದಾಗ್ಯೂ ಕೂಡ ಕರ್ನಾಟಕ, ಕನ್ನಡದ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಕರ್ನಾಟಕ ಏಕೀಕರಣದಲ್ಲಿ ಇವರ ಪಾತ್ರವೂ ಶ್ಲಾಘನೀಯವಾದದ್ದು. ಮಹಾಜನ ವರದಿಯನ್ನು ಪ್ರೋತ್ಸಾಹಿಸಿ ಈಗ ಮಹಾರಾಷ್ಟ್ರದಲ್ಲಿರುವ ಎಷ್ಟೋ ಪ್ರದೇಶಗಳು ಕರ್ನಾಟಕಕ್ಕೆ ಬರಬೇಕೆಂದು ಪ್ರತಿಪಾದಿಸಿದವರು. ಅದಕ್ಕಾಗಿ 'ರೈಲು ರೋಖೊ' ಚಳುವಳಿಯನ್ನು ಹಮ್ಮಿಕೊಂಡವರು ಧೈರ್ಯಶೀಲರಾವ್. ಇದು ಅವರು ನಮ್ಮ ನಾಡಿನ ಮೇಲೆ ಇಟ್ಟಿದ್ದ ಅಪಾರವಾದ ಗೌರವವನ್ನು ಸೂಚಿಸುತ್ತದಲ್ಲದೆ. ಕರ್ನಾಟಕವು ಸುಸಂಸ್ಕೃತ ಜ್ಞಾನಿಗಳ ನೆಲೆಬೀಡೆಂದು ತಮ್ಮ

ಭಾಷಣದಲ್ಲಿ ಹಲವು ಬಾರಿ ಮಾತನಾಡುತ್ತಿದ್ದರು. ಇವರು ಕನ್ನಡ, ಇಂಗ್ಲಿಷ, ಮತ್ತು ಮರಾಠಿ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರಲ್ಲದೆ, ಈ ಭಾಷೆಗಳಲ್ಲಿ ಅವರಿಗೆ ಪಾಂಡಿತ್ಯವೂ ಇತ್ತು.

ಸ್ನೇಹ ಪರವಾದ, ಗುಣಶೀಲರಾದ ಇವರು ಜನ ಸಾಮಾನ್ಯರೊಂದಿಗೂ ಅತ್ಯಂತ ಸರಳ ಸಭ್ಯತೆಯಿಂದಲೇ ಬೆರೆಯುತ್ತಿದ್ದರು. ತಮ್ಮ ರಾಜಕೀಯ ಜೀವನದಲ್ಲಿ ಕೌಟುಂಬಿಕ ಜೀವನವನ್ನೆಂದೂ ಕಡೆಗಣಿಸಲ್ಲಿಲ್ಲ ಸಾಯಂಕಾಲ ಮಕ್ಕಳು, ಪತ್ನಿ, ಕುಟುಂಬದ ಸದಸ್ಯರೊಂದಿಗೆ ಉಲ್ಲಾಸದಿಂದ ಸಮಯ ಕಳೆಯುತ್ತಿದ್ದರು. ಇವರಿಗೆ ಆಶಾದೇವಿ ಎಂಬ ಪತ್ನಿ ಇದ್ದು ಉದಯಸಿಂಗ್, ಉಜ್ವಲಸಿಂಗ್ ಇಬ್ಬರು ಗುಂಡುಮಕ್ಕಳಿದ್ದಾರೆ ಮತ್ತು ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಹೀಗೆ ಅತ್ಯಂತ ಸರಳ ಸಜ್ಜನಿಕೆಯ ಜೀವನ ಸಾಗಿಸಿದ ಇವರು ಮೇ ೫ ೧೯೮೭ ರಲ್ಲಿ ಅಥಣಿ ಶಿವಾದೀನರಾದರು. ಇವರ ಪಾರ್ಥಿವ ಶರೀರವನ್ನು ಮಂಗಸೂಳಿಯಲ್ಲಿ ಅಂತ್ಯಸಂಸ್ಕಾರಗೊಳಿಸಲಾಯಿತು. ಇವರ ಶವವನ್ನು ಶ್ರೀಗಂಧ ಮತ್ತು ಕರ್ಪೂರದಲ್ಲಿಯೇ ಸಂಸ್ಕಾರ ಮಾಡಲಾಯಿತು.

ಧೈರ್ಯಶೀಲರಾವ್ ಅವರ ಪತ್ನಿ ಶ್ರೀಮತಿ ಆಶಾದೇವಿಯವರು ಪತಿಗೆ ತಕ್ಕ ಸತಿಯಾಗಿದ್ದರಲ್ಲದೇ, ಅವರು ಅನೇಕ ದಾನ -ಧರ್ಮದಲ್ಲಿ ನಿರತರಾಗಿದ್ದರಲ್ಲದೇ, ಉದಾರ ಮನೋಭಾವದವರಾಗಿದ್ದಾರೆ. ಇಂದಿಗೂ ಆರೋಗ್ಯದಿಂದ ಇರುವ ಇವರು ಸುಮಾರು ೮೫ ವರ್ಷದ ವೃದ್ಧೆಯಾಗಿದ್ದರೂ ಕೂಡ ಪತಿಯ ಕಾರ್ಯಗಳ ಕುರಿತು ಮಾಹಿತಿಯನ್ನು ಒದಗಿಸಿದರು. ಸುಶಿಕ್ಷಿತರಾದ ಇವರು ಪತಿಯ ಎಲ್ಲ ಕಾರ್ಯಗಳಲ್ಲಿ ನೆರವು ನೀಡುತ್ತಿದ್ದರಲ್ಲದೇ, ಕೆಲವು ಸಮಯದಲ್ಲಿ ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ಪ್ರತಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುವಂತೆ ಧೈರ್ಯಶೀಲರಾವ್ ಅವರ ಯಶಸ್ವಿನ ಹಿಂದೆ ಶ್ರೀಮತಿ ಆಶಾದೇವಿಯವರ ಪಾತ್ರವು ವಿಶಿಷ್ಟವಾದದ್ದು. ಕ್ರಿಕೆಟ್ ಹಿನ್ನಲೆ ಇರುವ ಮನೆತನದಿಂದ ಬಂದ ಇವರು ಇಂದಿಗೂ ಕ್ರಿಕೆಟ್ ಎಂದರೆ ದಿನವಿಡಿ ಕುಳಿತು ನೋಡುತ್ತಾರೆ.

ಪವಾರ ದೇಸಾಯಿಗಳು ಬರೋಡದ ಗಾಯಕವಾಡ, ಗ್ವಾಲಿಯರನ ಸಿಂಧಿಯಾ, ಬೋಸ್ಲೆ ಹೀಗೆ ಅನೇಕ ಮರಾಠ ಮನೆತನಗಳೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದಾರೆ. ಬೋಸ್ಲೆಯ ಯುವರಾಜ ಶಾಹು ಛತ್ರಪತಿಗೆ ತಮ್ಮ ಮಗಳಾದ ಯಜ್ಞಸೇನಿರಾಜೇಯನ್ನು ಕೊಟ್ಟು, (೧೯೭೦) ವಿವಾಹ ಮಾಡಿಕೊಡಲಾಯಿತು. ([illegible]) (ಚಿತ್ರ ಸಂಖ್ಯೆ ೧೨.) ಹೀಗೆ ಹಲವು ರಾಜಮನೆತಗಳೊಂದಿಗೆ ರಕ್ತ ಸಂಬಂಧವನ್ನು (೧) ಹೊಂದಿದ್ದರಲ್ಲದೇ ಅಕ್ಕ -ಪಕ್ಕದ ಅನೇಕ ದೇಸಗತಿಗಳೊಂದಿಗೆ ಇವರ ಸಂಬಂಧವಿತ್ತೆಂದು

---

(೧) ಕರವೀರ ರಿಯಾಸತ್ (ಮರಾಠಿ) ಲೇ-ಸದಾಶಿವ ಮಾರ್ತಾಂಡ ಗರ್ಗ.
ಪ್ರ. ರಾಣೆ ಪ್ರಕಾಶನ ವರ್ಷ - ೧೯೬೮ ಪುಟ . ೬೪೯.

ತಿಳಿದು ಬರುತ್ತದೆ.

ಹೀಗೆ ಧೈರ್ಯಶೀಲರಾವ್ ಅವರ ಸಾಧನೆಯ ಫಲವಾಗಿ ಅಥಣಿಯು ಸರ್ವಾಂಗೀಣ ಪ್ರಗತಿ ಕಾಣಲು ಸಾಧ್ಯವಾಯಿತು. ಇವರ ವೈಕ್ತಿತ್ವ, ಕರ್ತವ್ಯನಿಷ್ಠೆ, ಮತ್ತು ಪರೋಪಕಾರಿ ಮನೋಭಾವನೆಯನ್ನು ಅಥಣಿ ತಾಲೂಕಿನ ಜನರು ಇಂದಿಗೂ ಕೊಂಡಾಡುತ್ತಾರೆ. ಬೆಂಗಾಡಿನಂತಿದ್ದ ಅಥಣಿ ಪ್ರದೇಶ ಇಂದು ನೀರಾವರಿಯ ಮೂಲಕ ಶ್ರೀಮಂತ ನೆಲೆಯಾಗಿಸುವಲ್ಲಿ ಇವರು ಗೈದ ಸಾಧನೆ ಅವಿಸ್ಮರಣೀಯವೂ ಆಗಿದೆ. ಅಥಣಿಯಲ್ಲಿ ಅವರನ್ನು ಸ್ಮರಿಸುವಂತಹ ಒಂದು ವೃತ್ತಕ್ಕೆ ಇವರ ಹೆಸರನ್ನು ಇಡಲಾಗಿದೆ.

ಧೈರ್ಯಶೀಲರಾವ್ ಅವರ ಎರಡನೇಯ ಸೋದರ ಜಯವಂತರಾವ್ ಅವರೂಕೂಡ ೧೯೫೭ ರಲ್ಲಿ ಎಂ.ಎಲ್.ಎ ಆಗಿ ಹಲವು ಸಾಧನೆಗಳನ್ನು ಗೈದಿದ್ದಾರೆ ಸರಳ ಮತ್ತು ಎಲ್ಲರೊಂದಿಗೂ ಬೆಳೆಯುವ ಗುಣ ಇವರದಾಗಿತ್ತು. ಇವರು ಕೂಡ ಬಡ ಜನರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರೆಂದು ಮತ್ತು ಶಾಸಕರಾಗಿ ಅಥಣಿಯ ಅಭಿವೃದ್ಧಿಗೆ ಶ್ರಮಿಸಿದರೆಂದು ತಿಳಿದು ಬರುತ್ತದೆ. ಆದರೆ ಧೈರ್ಯಶೀಲರಾವ್‌ರಂತೆ ಧೀಮಂತ ಮನೋಭಾವನೆ ಹೊಂದಿದವರಾಗಿರಲಿಲ್ಲ. ಇವರಿಗೆ ಭೂಪತರಾವ್ ಮತ್ತು ಪ್ರತಾಪರಾವ್ ಎಂಬ ಇಬ್ಬರು ಮಕ್ಕಳಿದ್ದಾರೆ.

ಧೈರ್ಯಶೀಲರಾವ್ ಅವರ ಮತ್ತೊಬ್ಬ ಕಿರಿಯ ಸಹೋದರ ಯಶವಂತರಾವ್ ಊರ್ಫ ಅಮರಸಿಂಹ ಅವರು ರಾಜಕೀಯವಾಗಿ ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು. (ಚಿತ್ರ ಸಂಖ್ಯೆ ೧೩) ೧೯೨೯ ರಲ್ಲಿ ಜನಿಸಿದ ಇವರು ಹಿರಿಯ ಸಹೋದರನಂತೆ, ಸಾಮಾಜಿಕ, ಧಾರ್ಮಿಕ ಕಳಕಳಿ ಹೊಂದಿದವರಾಗಿದ್ದರು. ೧೯೬೦ ರಿಂದ ೧೯೭೪ ರ ವರೆಗೆ ಅಥಣಿ ತಾಲೂಕಾ ಅಭಿವೃದ್ಧಿ ಮಂಡಳಿ (ಟಿ.ಡಿಬಿ) ಯ ಸದಸ್ಯರಾಗಿ ೧೪ ವರ್ಷಗಳ ಕಾಲ ನೇಮಕಗೊಂಡು, ಅಭಿವೃದ್ಧಿಯ ಕಾರ್ಯಗಳನ್ನು ಜಾರಿಗೊಳಿಸಿದರು. ೧೯೭೦ ರಲ್ಲಿ ತೀವ್ರ ಬರಗಾಲ ಎದರಿಸುತ್ತಿದ್ದ ಅಥಣಿಯಲ್ಲಿ ಧನ -ದಾನ್ಯಗಳನ್ನು ವಿತರಿಸಿ ಜನರ ವಲಸೆಯನ್ನು ತಡೆದರು. ಅಥಣಿ ತಾಲೂಕಿನಾದ್ಯಂತ ರಸ್ತೆ ಕುಡಿಯುವ ನೀರು, ಪ್ರಾಥಮಿಕ ಶಾಲೆಗಳ ಸ್ಥಾಪನೆ ಇವರ ಸಾಧೆನೆಯ ವೈ ಖರಿಗಳಾಗಿವೆ. ತಾಲೂಕಿನ ೧೩ ಹಳ್ಳಿಗಳಲ್ಲಿ ೩೨ ಕೊಳವೆಬಾವಿಗಳನ್ನು ತೋಡಿಸಿ ಕುಡಿಯುವ ನೀರಿನ ವ್ಯೆವಸ್ಥೆ ಕಲ್ಪಿಸಿದರು ೩೩ ಹಳ್ಳಿಗಳಲ್ಲಿ ಸಾರ್ವಜನಿಕ ಬಾವಿಗಳನ್ನು ತೋಡಿಸಿದರು. ಹಿಂದುಳಿದ ವರ್ಗದ ಏಳಿಗೆಗೆ ವಸತಿ, ವಸ್ತ್ರ -ಪೂರೈಸಿದರಲ್ಲದೇ ದರ್ಬುಲರ ಜಮೀನುಗಳಿಗೆ. ಉಚಿತವಾಗಿ ನೀರು ಪೂರೈಕೆ ಮಾಡುವಲ್ಲಿ ಇವರ ಸಾಧನೆ ಅಪೂರ್ವವಾದದ್ದು. ತಾಲೂಕಾ ಅಭಿವೃದ್ಧಿ ಮಂಡಳಿಯ ಸದಸ್ಯರಾದ ಇವರು ದಿ. ದೇವರಾಜ ಅರಸು ಅವರು (ಮುಖ್ಯಮಂತ್ರಿ) ಹಿಪ್ಪರಗಿ ಬ್ಯಾರೇಜ್‌ಗೆ ಬೇಟಿಕೊಟ್ಟಾಗ ತಾಲೂಕಿನ ಬರಗಾಲವನ್ನು ವಿವರಿಸಿದರಲ್ಲದೇ ಅಲ್ಲಿಯ ಜನರ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ತಾಲೂಕಿನ ಅಭಿವೃದ್ಧಿ ಕಾರ್ಯಕ್ಕೆ ಹಣಕಾಸು ಬಿಡುಗಡೆ ಮಾಡಬೇಕೆಂದು

ವಿನಂತಿಸಿಕೊಂಡಿದ್ದರು.

ಯಶವಂತರಾವ ಪವಾರ ದೇಸಾಯಿಯವರು ಶಿವರಾಜ್ ಮತ್ತು ದಿಗ್ವಿಜಯ ಎಂಬ ಇಬ್ಬರು ಗಂಡು ಮಕ್ಕಳನ್ನು ಹೊಂದಿದ್ದಾರೆ. ದಿಗ್ವಜಯ್ ಅವರು ಈಗ ರಾಜಕೀಯವಾಗಿ ತಾಲೂಕಿನಲ್ಲಿ ತಮ್ಮ ಛಾಪನ್ನು ಮೂಡಿಸುತ್ತಿದ್ದಾರೆ. ಯುವಕರಾದ ದಿಗ್ವಜಯ್ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದಾರೆ. ರಾಜಕೀಯ ಹಿನ್ನಲೆ ಇವರು ಈ ಮನೆತನದ ಈ ಕುಡಿಯು ಇನ್ನು ಅವಕಾಶದ ನಿರೀಕ್ಷೆಯಲ್ಲಿದ್ದಾರೆ. (ಚಿತ್ರ ಸಂಖ್ಯೆ : ೧೪) ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ದಿಗ್ವಿಜಯ್ ಅವರು ವಿವಿಧ ಕ್ಷೇತ್ರಗಳಲ್ಲಿ ಬೆಳೆಯಲು ಪ್ರಯಶ್ನಿಸುತ್ತಿದ್ದಾರೆ. ಅವರು ಇತ್ತೀಚಿಗೆ ನಡೆದ ವಿಧಾನಸಭೆಯ ಚುನಾವಣೆಯಲ್ಲಿ ಕಾಗವಾಡ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿತಿಯಾಗಿ ಸ್ಪರ್ಧಿಸಿದ್ದನ್ನು ಗಮನಿಸಬಹುದು. ತಂದೆ ಮತ್ತು ದೊಡ್ಡಪ್ಪನಾದ ಧೈರ್ಯಶೀಲರಾವ್‌ರಂತೆ ಜನಪರ ಕಾಳಜಿವುಳ್ಳವರಾಗಿದ್ದಾರೆ. ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಿ ಜನತೆಯ ಸೇವೆ ಮಾಡುವ ಭಾಗ್ಯ ದೊರೆಯಲೇಂಬುದೆ ನಮ್ಮ ಆಶಯ.

ಧೈರ್ಯಶೀಲರಾವ್ ಅವರ ಈಗಿನ ವಂಶಸ್ಥರು:

ಈಗಾಗಲೇ ಹೇಳಿದಂತೆ ಧೈರ್ಯಶೀಲರಾವ್ ಅವರಿಗೆ ಇಬ್ಬರು ಗಂಡು ಮಕ್ಕಳಿದ್ದು, ಹಿರಿಯನಾದ ಉದಯಸಿಂಗ್ ಅವರು ಸುಶಿಕ್ಷಿತರಾಗಿದ್ದು, ಶಾಂತ ಸ್ವಾಭಾವದವರೂ ಆಗಿದ್ದಾರೆ. ತಂದೆಯಂತೆ ಉದಾರಿಯಾದ ಇವರು ಸುಸಂಸ್ಕೃತ ಸಂಪನ್ನರು ಆಗಿದ್ದು, ಪತ್ನಿ ಶ್ರೀಮತಿ ಶರ್ಮಿಳಾ ದೇವಿ ಹಾಗೂ ಇಬ್ಬರು ಮಕ್ಕಳೊಂದಿಗೆ ಕೌಟುಂಬಿಕ ಜೀವನ ನಡೆಸುತ್ತಿದ್ದಾರೆ. ಇವರಿಗಿದ್ದ ೫೪ ಎಕರೆ ಭೂಮಿಯಲ್ಲಿಯೇ ತಮ್ಮ ಕೃಷಿ ಜೀವನ ನಡೆಸಿಕೊಂಡು ಜೀವಿಸುತ್ತಿದ್ದಾರೆ.

ಹಾಗೆಯೇ ಧೈರ್ಯಶೀಲರಾವ್ ಅವರ ದ್ವಿತೀಯ ಪುತ್ರ ಉಜ್ವಲ್‌ಸಿಂಗ ಅವರಲ್ಲಿಯೂ ತಂದೆಯ ಗುಣಗಳನ್ನು ಕಾಣಬಹುದು. ಸಾಮಾಜಿಕ, ಧಾರ್ಮಿಕ, ಕಾರ್ಯಗಳನ್ನು ತಂದೆಯಂತೆ ನಡೆಸಿಕೊಂಡು ಮುನ್ನಡೆಯುತ್ತಿರುವ ಇವರು ಕೊಡುಗೈ ವೀರರೆಂದು ಹೇಳಬಹುದು. (ಚಿತ್ರ ಸಂಖ್ಯೆ ೧೫) ಮಂಗಸೂಳಿಯ ಮಲ್ಲಯ್ಯಾ ದೇವಾಲಯದ ಟ್ರಸ್ಟಿಯಾದ ಇವರು ಅನಾದಿ ಕಾಲದಿಂದಲೂ ನಡೆದುಬಂದ ಧಾರ್ಮಿಕ ಕಾರ್ಯಕ್ರಮಗಳನ್ನು ಮುನ್ನಡೆಸಿಕೊಂಡು ಅಪಾರ ಕಾಣಿಕೆ ನೀಡುತ್ತಾ ಬಂದಿದ್ದಾರೆ. (ಅನುಬಂಧದಲ್ಲಿ ದಾಖಲೆ ನೋಡಬಹುದು) ಸಿದ್ದೇಶ್ವರ ದೇವಾಲಯ (ಅಥಣಿ) ದ ಕಾರ್ಯಗಮಗಳಿಗೂ ಇವರ ಕಾಣಿಕೆ ಅಪಾರವಾದದ್ದು. ದೇವಾಲಯಗಳ ಜೀರ್ಣೋದ್ದಾರ, ಕಾಣಿಕೆ ಉತ್ಸವವಾದಿಗಳಿಗೆ ಉದಾರ ದಾನ ನೀಡಿದ್ದಾರೆ. (ಅನುಬಂಧದಲ್ಲಿ ಸಿದ್ದೇಶ್ವರ ಗುಡಿಗೆ ನೀಡಿದ ಜಾಗೆ ಕುರಿತ ವಿಷಯ ಉಲ್ಲೇಖ ನೋಡಬಹುದು) ಸಿದ್ದೇಶ್ವರನ ದೊಡ್ಡ ಬೆಳ್ಳಿಯ ಮೂರ್ತಿಯನ್ನು ಮಾಡಿಸಿ ದೇವಾಲಯಕ್ಕೆ ಕಾಣಿಕೆ ನೀಡಿದರು. ಸರ್ವ -ಧರ್ಮಗಳಲ್ಲಿ ಸಮಭಾವ ಹೊಂದಿದ ಇವರು ಎಲ್ಲ ಧರ್ಮಗಳ ಕಾರ್ಯಗಳಲ್ಲಿಯೂ ಭಾಗವಹಿಸುತ್ತಿದ್ದಾರೆ. ಇವರ ಧರ್ಮ ಪತ್ನಿ

ಉತ್ತಾರಾದೇವಿ (ಮದಬಾಂವಿಕರ ಘೋರ್ಪಡೆ ಮನೆತನ) ಪತಿಗೆ ತಕ್ಕ ಸತಿಯಾದ ಇವರೂ ಕೂಡಾ ಸಹ ಹೃದಯರು ಮತ್ತು ದೇಸಗತಿಯ ಬಗ್ಗೆ ಪರಿಜ್ಞಾನ ವುಳ್ಳವರಾಗಿದ್ದು, ಈ ನನ್ನ ಸಂಶೋಧನೆಗೆ ಬೇಕಾದ ಮಾಹಿತಿಗಳನ್ನು ಒದಗಿಸಿ ತಮ್ಮ ಹಿರಿಮೆಯನ್ನು ಮರೆದರು. (ಚಿತ್ರ ಸಂಖ್ಯೆ : ೧೬) ತಮ್ಮ ಮಾವನವರ (ಧೈರ್ಯಶೀಲರಾವ್ ಪವಾರ ದೇಸಾಯಿ) ಬಗ್ಗೆ ಅಪಾರ ಗೌರವ ಹೊಂದಿದ್ದ ಇವರು ಹಲವು ದಾಖಲೆಗಳನ್ನು ಇಂದಿಗೂ ಸುರಕ್ಷಿತವಾಗಿಟ್ಟವರು.

ಈ ವಂಶ ವೃಕ್ಷದಲ್ಲಿರುವ ಚಿಕ್ಕ ಕುಡಿಗಳೆಂದರೆ ಉದಯಸಿಂಗ್ ಅವರಿಗೆ ಪ್ರಿಯದರ್ಶಿನಿ ಮತ್ತು ವಿಕ್ರಾಂತ್ ಹಾಗೂ ಉಜ್ವಲ್‌ಸಿಂಗ ಅವರಿಗೆ ದೀಪಾಲಿ ಮತ್ತು ಮಯೂರ (ಚಿತ್ರ ಸಂಖ್ಯೆ : ೧೭) ಎಂಬ ತಲಾ ಇಬ್ಬರೂ ಮಕ್ಕಳಿದ್ದಾರೆ.

ಹೀಗೆ ಸಿದ್ದರಾಜಗೌಡ ಅವರಿಂದ ಸ್ಥಾಪಿಸಲ್ಪಟ್ಟ ಮಂಗಸೂಳಿ ಪವಾರ ದೇಸಗತಿ ಮನೆತನವು ಹಲವಾರು ಏರಿಳಿತಗಳನ್ನು ಕಂಡಾಗ್ಯೂ ಕೂಡ ಇವರು ಸನಾತನ ಧರ್ಮ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಬಂದವರಾಗಿದ್ದಾರಲ್ಲದೇ ದೇಸಗತವನ್ನು ರಕ್ಷಿಸಿ ತಮ್ಮ ಆಳ್ವಿಕೆಯನ್ನು ಜನರ ಪ್ರೀತಿಗೆ ಒಪ್ಪಿಸಿದವರಾಗಿದ್ದಾರೆ. ಈ ಅಧ್ಯಯನದಲ್ಲಿ ದಾಖಲೆಗಳ ಕೊರತೆ ಇದ್ದಾಗ್ಯೂ, ಕೂಡ ಹಲವು ಹಿರಿಯ ನಾಗರಿಕರ ನೆರವಿನಿಂದ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ ಈ ಕುರಿತು ಬರೆಯಲಾಗಿದೆ.

ಗ್ರಂಥ ಋಣ :

(೧) ಕರವೀರ ರಿಯಾಸತ್ (ಮರಾಠಿ) ಲೇ-ಸದಾಶಿವ ಮಾರ್ತಾಂಡ ಗರ್ಗ.
ಪ್ರ. ರಾಣೆ ಪ್ರಕಾಶನ ವರ್ಷ - ೧೯೬೮ ಪುಟ . ೬೪೯.

ಅಧ್ಯಾಯ -೪

ಅಧ್ಯಾಯ -೪

ಮಂಗಸೂಳಿಯ ಪವಾರ ದೇಸಾಯಿಗಳ ಸಾಂಸ್ಕೃತಿಕ ಕೊಡುಗೆಗಳು.

ಪ್ರಾಚೀನ ಕಾಲದಿಂದಲೂ ಕರ್ನಾಟಕವನ್ನಾಳಿದ ಅನೇಕ ರಾಜಮನೆತನಗಳು ನಮ್ಮ ಸಂಸ್ಕೃತಿ ಬೆಳವಣಿಗೆಗೆ ಅನೇಕ ಕಾಣಿಕೆಗಳನ್ನು ನೀಡಿವೆ. ಸಂಸ್ಕೃತಿ ಎಂಬುದು ಒಂದು ಕಟ್ಟಡವಲ್ಲ. ಅದೊಂದು ಮರವಿದ್ದಂತೆ ನೂರಾರು ವರ್ಷಗಳ ಕಾಲ ಅದನ್ನು ಬೆಳಸಿ ಪೋಷಿಸಿಕೊಂಡು ಬರುವುದು ಅತಿ ಮುಖ್ಯವಾಗಿದೆ. ಅದರಂತೆ ನಮ್ಮ ಸಂಸ್ಕೃತಿ ಒಮ್ಮೆಲೇ ಬೆಳೆದು ವಿಕಾಸ ಹೊಂದದೇ ವಿವಿಧ ರಾಜಮನೆತನಗಳ ಆಸಕ್ತಿಯ ಪೂರಕವಾಗಿ ಮತ್ತು ರಾಜರ ಪೋಷಣೆಯಿಂದ ಬೆಳೆದು ಬಂದ ಫಲವಾಗಿದೆ ಏನ್ನಬಹುದು. ಅದಕ್ಕಾಗಿಯೇ ನಮ್ಮದು ಭವ್ಯ ಸಂಸ್ಕೃತಿ ಏನ್ನಲಾಗಿದೆ. ಅದರಂತೆ ರಾಜ -ಮಹಾರಾಜರ ಪ್ರತಿರೂಪವೆಂಬಂತೇಯೇ ತಮ್ಮ ಅಧಿಕಾರವನ್ನು ನೆಲೆಗೊಳಿಸಿದ ದೇಸಗತಿಗಳೂ ಕೂಡ ಸಂಸ್ಕೃತಿಯನ್ನು ಮುಂದುವರೆಯಿಸಿಕೊಂಡು, ಆ ಮೂಲಕ ಪ್ರಜಾರಕ್ಷಣೆ ಪ್ರಜಾಪಾಲನೆಯನ್ನೇ ತಮ್ಮ ಉಸಿರಾಗಿಸಿಕೊಂಡು ಬಂದ ಕೀರ್ತಿ ಈ ದೇಸಗತಿಗಳದ್ದು. ಅದರಲ್ಲೂ ಮಂಗಸೂಳಿ ಪವಾರ ದೇಸಾಯಿಗಳ ಕೊಡುಗೆ ಪ್ರಜಾಪಾಲನೆಗೆ ಮೀಸಲಿದ್ದಂತೆ ತಿಳಿದು ಬರುತ್ತದೆ. ಅದಕ್ಕಾಗಿಯೇ ಪ್ರಜೆಗಳ ಕಷ್ಟಗಳಲ್ಲಿ ನೆರವು ನೀಡಿ ಸ್ಪಂದಿಸುವ ಗುಣ ಸ್ವಭಾವ ಈ ಮನೆತನದ ಎಲ್ಲ ದೇಸಾಯಿಗಳಲ್ಲಿ ರಕ್ತಗತವಾಗಿ ಬೆಳೆದು ಬಂದಿದೆ. ಏಂದರೂ ಸರಿಯೆನಿಸುತ್ತದೆ. ಕರ್ನಾಟಕ ಚರಿತ್ರೆ ಸಂಸ್ಕೃತಿಗೆ ಅವರು ನೀಡಿದ ಕೊಡುಗೆಗಳನ್ನು ಈ ಕೆಳಗಿನಂತೆ ನೋಡಬಹುದು.

೧) ಆಡಳಿತ ವ್ಯೆವಸ್ಥೆ :

ಪ್ರಾಚೀನ ಕಾಲದಿಂದಲೂ ಈ ಮಣ್ಣಿನ ಆಡಳಿತ ವ್ಯೆವಸ್ಥೆಯು ಅಲ್ಪ -ಸ್ವಲ್ಪ ಬದಲಾವಣೆಗಳನ್ನು ಹೊರತು ಪಡಿಸಿದರೆ ಉಳಿದಂತೆ ಹಾಗೆಯೇ ಉಳಿದುಕೊಂಡು ಬಂದ ಪರಂಪರೆಯನ್ನು ಗಮನಿಸಬಹುದು. ಅಂದಿನ ಆಡಳಿತ ವ್ಯೆವಸ್ಥೆಯ ಪ್ರಮುಖ ವಿಭಾಗಗಳಾದ ಜನ, ವಿಶ್, ರಾಷ್ಟ್ರ, ನಾಡು, ಗ್ರಾಮ ಹೀಗೆ ಅನೇಕ ಶಬ್ದಗಳನ್ನು ಕಾಣುತ್ತೇವೆ. ಇವೆಲ್ಲಾ ಆಯಾಕಾಲದ ಆಡಳಿತ ಘಟಕಗಳಾಗಿದ್ದವೆಂಬುದು ವಿಶೇಷವಾಗಿ ಭೋಗಿಕ, ಭೋಗಪತಿ, ರಾಜ್ಯಪಾಲ, ಹೀಗೆ ಆಡಳಿತ ಘಟಕಗಳ ಅಧಿಕಾರಗಳ ಹೆಸರುಗಳೂ ಕೂಡ ಶಾಸನಗಳಲ್ಲಿ ಉಲ್ಲೇಖಿತಗೊಂಡಿದ್ದನ್ನು ಅರಿಯಬಹುದು ಗ್ರಾಮದ ಅಧಿಕಾರಿಯನ್ನು ಗೌಡ, ಗವುಂಡ, ಗ್ರಾಮೀಣ ಎಂದು ಮುಂತಾಗಿ ಕರೆಯಲಾಗುತ್ತಿತ್ತು. ಕುಟುಂಬದ ಹಿರಿಯನಿಗೆ 'ಕುಲಪತಿ' 'ಕುಲಪ' ಎಂದು ಹೆಸರಿತ್ತು, ರಾಜರು ಹೋರಾಡಿದ್ದು ಅವರ ಆಡಳಿತ, ರಾಜ್ಯಭಾರ ಕ್ರಮ ಜೀವನ ಶೈಲಿ, ದಾನ -ಧರ್ಮಗಳಲ್ಲಿ ರಾಜರ ಪಾತ್ರಗಳನ್ನು ಗಮನಿಸಿದರೆ ಅದು ದೇಸಗತಿಗಳಲ್ಲಿಯ ನಿರಂತರವಾಗಿ ಸಾಗಿಬಂದ ಅಂಶಗಳನ್ನು ಗಮನಿಸಬಹುದಾಗಿದೆ.

ಅಧುನಿಕ ಭಾರತದಲ್ಲಿ ಅಂದರೆ, ಬ್ರಿಟಿಷ ಭಾರತದಲ್ಲಿ ಈ ದೇಸಗತಿಗಳು ಹೆಚ್ಚು ಕರ್ತವ್ಯ ನಿಷ್ಠೆತೆಯಲ್ಲಿ ತೊಡಗಿದ್ದನ್ನು ಕಾಣಬಹುದು ಈ ದೇಸಗತಿಗಳು ಮೊದ ಮೊದಲು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ತಮ್ಮ ಪ್ರಜೆಗಳ ಸೌಕರ್ಯ ಮತ್ತು ಭದ್ರತೆಗೆ ಹೆಚ್ಚು ಗಮನ ನೀಡಿರಲಿಲ್ಲ. ತಮ್ಮ ಪ್ರಭುಗಳನ್ನು ಅಧುನಿಕ ಭಾರತದಲ್ಲಿ ಅಂದರೆ, ಬ್ರಿಟಿಷ ಭಾರತದಲ್ಲಿ ಈ ದೇಸಗತಿಗಳು ಹೆಚ್ಚು ಕರ್ತವ್ಯ ನಿಷ್ಠೆತೆಯಲ್ಲಿ ತೊಡಗಿದ್ದನ್ನು ಕಾಣಬಹುದು. ತಮ್ಮ ಪ್ರಭುಗಳನ್ನು ಕಪ್ಪಕೊಡುವ ಮೂಲಕ ತೃಪ್ತಿ ಪಡಿಸುವಲ್ಲಿಯೇ ತಮ್ಮ ಕಾರ್ಯ ನಿಷ್ಠತೆಯನ್ನು ಮರೆದಿದ್ದರು. ಕರ್ನಾಟಕದ ಎಲ್ಲ ದೇಸಗತಿಗಳೂ ಕೂಡ ಯುದ್ಧದಲ್ಲಿ ನಿರತನಾದ ತಮ್ಮ ಪ್ರಭುಗಳಿಗೆ ಅಪಾರ ಕಪ್ಪ ಕಾಣಿಕೆಕೊಡುವುದರಲ್ಲಿಯೇ ನಿರತರಾಗಿದ್ದರು. ಇದು ಅಪರೂಪವೆನಿಸಿರಲಿಲ್ಲ ಈ ದೇಸಗತಿಗಳ ಕರ್ತವ್ಯ ಮತ್ತು ಆಡಳಿತ ಕ್ರಮವೆಂದೂ ಪರಿಗಣಿಸಲ್ಪಟ್ಟಿತ್ತು. ಅಂದಿನ ದೇಸಗತಿ ಸಂಸ್ಥಾನಗಳು ಧನ ಸಂಗ್ರಹಕ್ಕೆ ಹೆಚ್ಚಿನ ಆದ್ಯತೆ ನೀಡಿದಂತೆ ತೋರುತ್ತದೆ.

ದೇಸಗತಿಯಾಗಲಿ ಅಥವಾ ಸಂಸ್ಥಾನಗಳಾಗಲಿ, ಪ್ರಜಾಕರ್ಷಣೀಯರಾಗಿಯೂ, ಪ್ರಜಾ ಹಿತಾಕಾಂಕ್ಷಿಯಾಗಿಯೂ ನಡೆದುಕೊಂಡು ಪ್ರಜೆಗಳ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ನ್ಯಾಯ, ಶಾಂತಿ, ಸುವ್ಯವಸ್ಥೆಯ ಜೀವನ ಒದಗಿಸುವುದು ಈ ದೇಸಗತಿಗಳ ಪ್ರಮುಖ ಉದ್ದೇಶಗಳಾಗಿದ್ದವು.

ದೇಸಗತಿಯ ಮಾಲಿಕನನ್ನು ರಾಜನಿಗೆ ಹೋಲಿಸಬಹುದು ಆದರೆ ರಾಜನಿಗಿದ್ದ ಪರಮಾಧಿಕಾರತ್ವಗಳು ಮಾತ್ರ ಈತನಿಗಿರಲಿಲ್ಲ. ಈತನು ತಮ್ಮ ಒಡೆಯ ಹಾಕಿಕೊಟ್ಟ ವತನದ ಆಡಳಿತಗಾರನಷ್ಟೇ ಎನ್ನಬಹುದು. ಆದರೂ ರಾಜಸಂಪ್ರದಾಯಗಳೇ ಇವರಲ್ಲಿದ್ದವು. ಇವರ ಮುಖ್ಯ ಕರ್ತವ್ಯಗಳೆಂದರೆ, ತಮಗೆ ಹಾಕಿಕೊಟ್ಟ ವತನ ಭೂಮಿಗಳನ್ನು ರೈತರಿಗೆ ಊಳಲು ನೀಡಿ ಅವರಿಂದ ನಿಗದಿ ಪಡಿಸಿದ ಕಂದಾಯವನ್ನು ಧಾನ್ಯ ಅಥವಾ ಹಣದ ರೂಪದಲ್ಲಿ ವಸೂಲಿ ಮಾಡುವುದು. ತಮ್ಮ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸಿ ಜನರಿಗೆ ರಕ್ಷಣೆ ನೀಡುವುದು ಇವರ ಮುಖ್ಯ ಕರ್ತವ್ಯಗಳಾಗಿದ್ದವು.

ಇವರ ಅಧೀನಕ್ಕೊಳಪಟ್ಟ ಗ್ರಾಮಗಳನ್ನು ಚೌವರಾತ್ ಎನ್ನುತ್ತಿದ್ದರು. ಅಂತಹ ೬೪ ಗ್ರಾಮಗಳು ಮಂಗಸೂಳಿ ಪವಾರ ದೇಸಾಯಿಗಳ ವ್ಯಾಪ್ತಿಯಲ್ಲಿದ್ದವು. ಅಲ್ಲಿಂದ ಪ್ರತಿ ವರ್ಷ ನಿಗದಿ ಪಡಿಸಿದ ಬಾಬು ವಸೂಲಿಯಾಗುತ್ತಿತ್ತು. ಇವುಗಳಲ್ಲಿ ದೇಸಾಯಿ, ಪಾಟೀಲ ಕುಲಕರ್ಣಿ, ಕೊತ್ವಾಲ್ ಹೀಗೆ ಅನೇಕ ಬಾಬುಗಳು ಈ ಪವಾರ ದೇಸಾಯಿಗಳಿಗಿದ್ದವು ಎಂದು ತಿಳಿದುಬರುತ್ತದೆ. ಈ ಕಾರ್ಯದಲ್ಲಿ ಪಾಟೀಲ, ಕುಲಕರ್ಣಿ, ಗೌಡ, ಶಾನಬೋಗ, ಕೋತ್ವಾಲ್, ತಳವಾರ ಹೀಗೆ ಅನೇಕ ನೌಕರರು ದೇಸಗತದ ಸೇವೆಯಲ್ಲಿದ್ದರು. ಬ್ರಿಟಿಷ ಭಾರತದಲ್ಲಿ ಮಂಗಸೂಳಿ ಪವಾರ ದೇಸಾಯಿಗಳಿಗೆ ವಿಶೇಷ ಸ್ಥಾನ -ಮಾನಗಳಿದ್ದವೆಂದು ತೊರುತ್ತದೆ. ಬಾಂಬೆ ಪ್ರಾಂತ್ಯದಲ್ಲಿ ಈ ದೇಸಗತವು ವಿಶಿಷ್ಟ ಸ್ಥಾನ ಪಡೆದಿತ್ತು ಎನ್ನುವುದಕ್ಕೆ ಪ್ರಾಂತ್ಯ ಸರಕಾರವು ಸಿದ್ಧರಾಜ ಭೋಜರಾಜ ಪವಾರ ದೇಸಾಯಿಯವರಿಗೆ ''ಸರ್ದಾರ್ ಆಫ್ ಡೆಕ್ಕನ್'' ಎಂಬ ಬಿರುದು ನೀಡಿತು.

ಉತ್ತರಾಧಿಕಾರತ್ವ :

ಇದು ಪ್ರಾಚೀನ ಕಾಲದ ಉತ್ತರಾಧಿಕಾರತ್ವ ಪದ್ಧತಿಯನ್ನೇ ಹೋಲುತ್ತದೆ. (Law of Primoginiture) ದೇಸಾಯಿಯ ಹಿರಿಯ ಮಗನೇ ದೇಸಗತದ ಉತ್ತರಾಧಿಕಾರಿಯಾಗಿರುತ್ತಾನೆ. ಈ ಹಿಂದಿನ ಅರಸು ಮನೆತನದಲ್ಲಿಯೂ ಇದನ್ನೇ ಕಾಣುತ್ತೇವೆ. ರಾಜನ ಹಿರಿಯ ಮಗನೇ ಸಾಮ್ರಾಜ್ಯದ ಉತ್ತಾರಾಧಿಕಾರಿಯಾಗಿರುತ್ತಿದ್ದನು. ಅದರಂತೆ ದೇಸಾಯಿಯವರ ಹಿರಿಯ ಮಗನು ದೇಸಗತದ ಉತ್ತರಾಧಿಕಾರಿಯಾಗಿರುತ್ತಿದ್ದು, ಅದು ವಂಶಪಾರಂಪರ್ಯವಾಗಿರುತ್ತಿತ್ತು.

ರಾಜರಂತೆಯೇ ಈ ದೇಸಾಯಿಯರಿಗೂ ಕೂಡ ಒಂದಕ್ಕಿಂತ ಹೆಚ್ಚು ಪತ್ನಿಯರಿರುತ್ತಿದ್ದರು. ಹಿರಿಯ ಪತ್ನಿಯನ್ನು 'ಪಟ್ಟದ ಸತಿ' ಎಂದು ಕರೆಯಲಾಗುತ್ತಿತ್ತು. ಮಂಗಸೂಳಿ ದೇಸಾಯಿಯವರಿಗೆ ಸಾಮಾನ್ಯವಾಗಿ ಇಬ್ಬರು ಪತ್ನಿಯರಿರುತ್ತಿದ್ದರು. ಹಿರಿಯ ಸತಿಯ ಹಿರಿಯ ಮಗನಿಗೇ ದೇಸಗತದ ಉತ್ತರಾಧಿಕಾರತ್ವ ದೊರೆಯುತ್ತಿತ್ತು. ಉಳಿದ ಸೋದರರಿಗೆ ಇಲ್ಲಿ ಅಧಿಕಾರ ನಡೆಸಲು ಅವಕಾಶವೇ ಇರುತ್ತಿರಲ್ಲಿಲ್ಲ. ಆದರೆ ಜಮೀನಿನ ಕೆಲವು ಭಾಗವನ್ನು ಮಾತ್ರ ಸೋದರಿಗೆ ನೀಡಿ ಅವರ ಉಪಜೀವನಕ್ಕೆ ಮಾರ್ಗಮಾಡಿಕೊಡಲಾಗಿತ್ತು. ಕೆಲವು ಸಾರಿ ಹಿರಿಯ ಪತ್ನಿಗೆ ಗಂಡು ಮಕ್ಕಳು ಆಗದೇ ಇದ್ದರೆ, ಮತ್ತೊಂದು ಮದುವೆ ಮಾಡಿಕೊಳ್ಳುವ ವಾಡಿಕೆ ಇತ್ತು. ಇನ್ನು ಕೆಲವೊಂದು ಸಾರಿ ಪ್ರತಿಷ್ಠೆಗಾಗಿ ಹೆಚ್ಚು ಪತ್ನಿಯರನ್ನು ಹೊಂದುತ್ತಿದ್ದರು, ಆದರೆ ಈ ವಿಷಯದಲ್ಲಿ ಮಂಗಸೂಳಿ ದೇಸಾಯಿಗಳು ಮಾತ್ರ ಪ್ರತಿಷ್ಠೆಗಾಗಿ ಹೆಚ್ಚು ಪತ್ನಿಯರನ್ನು ಹೊಂದುವ ಮನೋಭಾವದವರಾಗಿರಲ್ಲಿಲ್ಲ. ಹೆಚ್ಚು ವಿವಾಹವಾಗಿದ್ದರೂ ಕೂಡ ಸಂಪ್ರದಾಯದಂತೆ ಹಿರಿಯ ಮಗನಿಗೇ ದೇಸಗತದ ಪಟ್ಟದೊರೆಯುತ್ತಿತ್ತು. ಭಾರತೀಯ ಸಂಪ್ರದಾಯದ ಪ್ರಕಾರ ಗಂಡು ಮಕ್ಕಳೇ ಆಸ್ತಿಯ ಉತ್ತರಾಧಿಕಾರಿಗಳಾಗಿರುತ್ತಿದ್ದರು. ಇಂಗ್ಲೆಂಡಿನಲ್ಲಿ ಹಿರಿಯ ಮಗು ಹೆಣ್ಣಿರಲ್ಲಿ ಅಥವಾ ಗಂಡಿರಲೀ ಅವಳು ಅಥವಾ ಅವನು ರಾಜರಾಣಿಯಾಗಿ ಅಧಿಕಾರವಹಿಕೊಳ್ಳುತ್ತಾರೆ. ಈ ಪದ್ದತಿ ಇಂದಿಗೂ ಜಾರಿಯಲ್ಲಿದೆ.

ಒಂದು ವೇಳೆ ದೇಸಾಯಿಯರು ಗಂಡು ಮಕ್ಕಳನ್ನು ಹೊಂದದೇ ಇದ್ದರೆ, ಅಥವಾ ಅಷ್ಟರಲ್ಲಿಯೇ ಮರಣ ಹೊಂದಿದರೆ, ದತ್ತಕ ತೆಗೆದುಕೊಳ್ಳುವ ವಾಡಿಕೆ ಇತ್ತು. ಇಂತಹ ಒಂದು ಘಟನೆಯು ಈ ದೇಸಾಯಿಗಳ ಮನೆತನದಲ್ಲಿ ಒಂದು ಬಾರಿ ಆಗಿರುವುದನ್ನು ಕಾಣುತ್ತೇವೆ.

ಅಂದರೆ ಹನ್ನೊಂದನೇಯ ಗಾದಿ ಮಾಲಿಕ (ದೇಸಾಯಿ) ರಾದ ಭೋಜರಾಜ ಪವಾರ ದೇಸಾಯಿಯವರಿಗೆ ಗಂಡು ಮಕ್ಕಳಿಲ್ಲದ್ದರಿಂದ ಮೊಮ್ಮಗನಾದ ಅಪ್ಪಾಸಾಹೇಬರನ್ನು ಮಂಗಸೂಳಿ ಗಾದಿಗೆ ಪಟ್ಟಕ್ಕೆ ತೆಗೆದುಕೊಂಡು ಸಮಸ್ತ ಅಧಿಕಾರವನ್ನು ಅವರಿಗೆ ಒಪ್ಪಿಸಿದುಂಟು. ಈ ಒಂದು ಅಂಶವನ್ನು ಬಿಟ್ಟರೆ ಉಳಿದಂತೆ ದತ್ತಕ ತೆಗೆದುಕೊಳ್ಳುವ ಪ್ರಸಂಗವೇ ಇಲ್ಲಿ ಬರಲಿಲ್ಲವೆಂದು ತೋರುತ್ತದೆ.

ಹೀಗೆ ಹಿರಿಯ ಮಗನಿಗೆ ಪಟ್ಟಕಟ್ಟಿ, ಉಳಿದ ಮಕ್ಕಳಿಗೆ ಆಸ್ತಿಯ ಕೆಲವು ಭಾಗಗಳನ್ನು ನೀಡಲಾಗುತ್ತಿತ್ತು. ಇದನ್ನು 'ಪೋಟಿಗೆ' ಎಂದು ಕರೆಯಲಾಗುತ್ತಿತ್ತು. ಇದನ್ನು ಪಡೆದ ಸೋದರರು 'ಬಿರಾದರ' ಎಂದು ಕರೆಯಿಸಿಕೊಳ್ಳುತ್ತಿದ್ದರು. ಈ ಪೋಟಗೆ ಭೂಮಿಯು ತಂದೆಯಿಂದ ಮಕ್ಕಳಿಗೆ ವಂಶಪಾರಂಪರ್ಯವಾಗಿ ಬರುತ್ತಿತ್ತು. ಈ ಭೂಮಿಯನ್ನು ಕೊಟ್ಟಗಾದಿ ಮಾಲಿಕನಿಗೂ ವಾಪಸ್ ತೆಗೆದುಕೊಳ್ಳಲು ಬರುತ್ತಿರಲಿಲ್ಲ. ಆದರೆ ಈ ಭೂಮಿಯನ್ನು ಭೋಗಿಸುವವರು ಮಾತ್ರ ಜೇಷ್ಠಪುತ್ರಾಧಿಕಾರತ್ವವನ್ನು ಪಾಲಿಸುತ್ತಿರಲ್ಲಿಲ್ಲ. ಪೋಟಗೆ ಹೊಂದಿದವರ ಮಕ್ಕಳು ಮೊಮ್ಮಕ್ಕಳು ಭೋಗಿಸುವ ಹಕ್ಕಿದರೂ ಕೂಡ ಅವರು ಆ ಭೂಮಿಯ ಮಾಲಿಕರಾಗಿರಲ್ಲಿಲ್ಲ. ಈ ಭೂಮಿಯೆಲ್ಲ ಗಾದಿ ಮಾಲಿಕನ ಹೆಸರಿನಲ್ಲಿಯೇ ಇರುತ್ತಿತ್ತು. ಇದನ್ನು ಮಾರಲು ಅಥವಾ ಅನ್ಯರ ಹೆಸರಿಗೆ ಹಸ್ತಾಂತರಿಸಲು ಬರುತ್ತಿರಲ್ಲಿಲ್ಲ. ಒಂದು ವೇಳೆ ಪೋಟಗೆ ಭೂಮಿಯು ಅವರ ಜೀವನಕ್ಕೆ ಸಾಕಾಗದಿದ್ದರೆ ಮತ್ತಷ್ಟು ಭೂಮಿ ನೀಡುವಂತೆ ಕೇಳಲುಬಹುದು. ಆದರೆ ಕೊಡುವುದು ಅಥವಾ ಬಿಡುವುದು ಗಾದಿ ಮಾಲಿಕನ ಇಚ್ಛೆಗೆ ಸಂಬಂಧಿಸಿದ್ದು, ಪೋಟಗೆಯಿಂದ ಪಡೆದ ಜಮೀನುಗಳನ್ನು ಸಮಪಾಲಿನಿಂದ (ಹಿಸ್ಸೆಯಿಂದ) ಪಡೆದ ಜಮೀನು ಎಂದು ಪರಿಗಣಿಸಲಾಗುವುದಿಲ್ಲ. ಕಾರಣ ಹಿಸ್ಸೆಪಡೆದ ಜಮೀನುಗಳನ್ನು ಪಡೆದವನ ಹೆಸರಿನಲ್ಲಿದ್ದು, ಪೋಟಗೆ ಪಡೆದವರ ಜಮೀನು ಗಾದಿ ಮಾಲಿಕನ ಹೆಸರಿನಲ್ಲಿಯೇ ಇರುತ್ತದೆ. ಪಾಲುಪಡೆದುಕೊಂಡ ಜಮೀನು ಹಸ್ತಾಂತರಿಸಲು ಬರುತ್ತದೆ. ಆದರೆ, ಪೋಟಗೆ ಜಮೀನಿನಲ್ಲಿ ಅದಕ್ಕೆ ಆಸ್ಪದವಿಲ್ಲ. ಹೀಗೆ ದೇಸಗತದ ಆಡಳಿತ ವ್ಯವಸ್ಥೆಯು ಜೇಷ್ಠ ಪುತ್ರಾಧಿಕಾರತ್ವದ ಮೇಲೆ ರೂಪಿತಗೊಂಡಿತ್ತು.

ಪಟ್ಟಮಹೋತ್ಸವ :

ಪ್ರಾಚೀನ ಕಾಲದ ಅರಸು ಮನೆತನಗಳಲ್ಲಿ ಪಟ್ಟಮಹೋತ್ಸವ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಸುತ್ತಲ್ಲಿನ ಅಧೀನ ನಾಯಕರು ರಾಜನಿಗೆ ಅಪಾರ ಕಾಣಿಕೆ ನೀಡಿ ಅವರ ಪ್ರೀತಿಗೆ ಪಾತ್ರರಾಗುತ್ತಿದ್ದರು. ಅದರಂತೆ ದೇಸಗತಿಗಳಲ್ಲಿಯೂ ಆ ಸಂಪ್ರದಾಯ ಮುಂದುವರೆದುಕೊಂಡು ಬಂದಿತು. ದೇಸಾಯಿಯರು ತಮ್ಮ ಹಿರಿಯ ಮಗನಿಗೆ ಪಟ್ಟ ವಹಿಸಿಕೊಡುವಾಗ ಅನೇಕ ಸಂಪ್ರದಾಯಗಳನ್ನು ಪಾಲಿಸುತ್ತಿದ್ದರು. ಅವರ ತಲೆಯ ಮೇಲಿನ ಪೇಟಾ (ಮುಂಡಾ) ವನ್ನು ತೆಗೆದು ಮಾಲಿಕ ನಾಗುವವನಿಗೆ ಹಾಕಿ, ಕೈಯಲ್ಲಿ ಖಡ್ಗನೀಡಿ, ಕಡಗ ತೋಡಿಸಿ ಕೊರಳಲ್ಲಿ ಬಂಗಾರದ ಒಡವೆಗಳನ್ನು ಹಾಕಿ ಗಾದಿಯ ಮೇಲೆ ಕೂಡಿಸುತ್ತಿದ್ದರು. ಇದನ್ನು 'ಗದ್ದಿನಿಷನಿ' ಎಂದು ಕರೆಯುತ್ತಿದ್ದರು. ಈ ಸಂದರ್ಭದಲ್ಲಿ ಪುರೋಹಿತರಿಂದ ಮಂತ್ರಘೋಷಣೆ ಮಾಡಿಸಿ, ಧಾರ್ಮಿಕ ವಿಧಿ ವಿಧಾನಗಳ ಮೂಲಕವೇ ಈ ಪಟ್ಟಮಹೋತ್ಸವವನ್ನು ಆಚರಿಸಲಾಗುತ್ತಿತ್ತು. ಪುತ್ರನು ಗಾದಿ ಏರಿದ ನಂತರ ದೇಸಗತದ ಮುದ್ರೆಯನ್ನು ಆತನಿಗೆ ಒಪ್ಪಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಸುತ್ತಲಿನ ಅಂದರೆ, ದೇಸಗತಿಗೆ ಒಳಪಟ್ಟ ಪ್ರದೇಶದ ಎಲ್ಲ ಗ್ರಾಮಸ್ಥರು ಮತ್ತು ಆಹ್ವಾನಿತರು ಉಪಸ್ಥಿತರಿರುತ್ತಿದ್ದರು. ಹಿಂದೆ ರಾಜ

-ಮಹಾರಾಜರ ಕಾಲದಲ್ಲಿ ಸಾಮಂತರು, ನಾಗರಿಕರು ಈ ಸಂದರ್ಭದಲ್ಲಿ ತಮ್ಮ ಕಾಣಿಕೆಗಳನ್ನು ಅರ್ಪಿಸುತ್ತಿದ್ದರು. ಆದರೆ, ಸಾಮಂತರು ರಾಜನಿಗೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಲೊಷ್ಕರವೇ ಕಪ್ಪಕಾಣಿಕೆಯನ್ನು ಅರ್ಪಿಸುತ್ತಿದ್ದರು. ಅದರೆ 'ಆಹೇರ' ಎಂದು ಕರೆಯಲ್ಪಡುವ ಕಾಣಿಕೆಯನ್ನು ಗ್ರಾಮಸ್ಥರು ಈ ದೇಸಾಯಿಗಳಿಗೆ ಅರ್ಪಿಸುತ್ತಿದ್ದರೆಂದು ತಿಳಿದು ಬರುತ್ತದೆ ಭೋಜರಾಜ ಪವಾರ ದೇಸಾಯಿ (೨ ನೇ ಗಾದಿ ಮಾಲಿಕರು) ಯವರ ಪಟ್ಟ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆದಿದ್ದು ಗಣ್ಯರು ಮತ್ತು ಸುತ್ತಲಿನ ಮರಾಠರಾಜ ಮನೆತನಗಳ ಗಣ್ಯರು ಉಪಸ್ಥಿತರಿದ್ದರೆಂದು ತಿಳಿದು ಬರುತ್ತದೆ. (೧)

ಮಂಗಸೂಳಿ ದೇಸಾಯಿ ಮನೆತನದ ಪಟ್ಟ ಮಹೋತ್ಸವಗಳು ಮರಾಠ ಸಂಪ್ರದಾಯಗಳ ಪ್ರಕಾರವೇ ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ಪೇಶ್ವೆ, ಭೋಸ್ಲೆ, ಗಾಯಕವಾಡ, ಸಿಂಧಿಯಾ ಮನೆತನದ ಪ್ರತಿನಿದಿಗಳು ಉಪಸ್ಥಿತರಿರುತ್ತಿದ್ದರೆಂದು ತಿಳಿದು ಬರುತ್ತದೆ ಇವರ ಮನೆತನದಲ್ಲಿ ಯಾವುದೇ ಸಮಾರಂಭಗಳು ನೇರವೆರಲಿ, ಆ ಸಮಯದಲ್ಲಿ ಕೈಯಲ್ಲಿ ಖಡ್ಗ, ಕಡಗ, ದಂಡ, ಪೇಟಾ, ಹಣೆಯಲ್ಲಿ ಉದ್ದನೆಯ ತಿಲಕವನ್ನಿಟ್ಟುಕೊಂಡ ವಿವಿಧ ಮಂತ್ರಘೋಷಗಳ ಮದ್ಯ ಈ ಸಮಾರಂಭ ವನ್ನೇರ್ಪಡಿಸುತ್ತಿದ್ದರು. ಶ್ರೀಮಂತ ಧೈರ್ಯಶೀಲವಾರ ಪವಾರ ದೇಸಾಯಿಯವರು ಪಟ್ಟ ಮಹೋತ್ಸವವೂ ಅತ್ಯಂತ ವಿಜೃಂಭಣೆಯಿಂದ ನೇರವೇರಿದ್ದು, ಸುತ್ತಲಿನ ಗಣ್ಯರು, ಜನಸಾಮಾನ್ಯರು ಬಡವರು ಬಹು ಸಂಖ್ಯೆಯಲ್ಲಿ ಆಗಮಿಸಿ ಇವರಿಗೆ ಆಶೀರ್ವಾಧಿಸಿದ್ದರೆಂದು ತಿಳಿದು ಬರುತ್ತದೆ. (೨) ಆ ಸಮಯದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಮತ್ತು ಬಡವರಿಗೂ ಅಪಾರ ಧಾನ -ಧರ್ಮಗಳನ್ನು ನೀಡಲಾಯಿತೆಂದು ತಿಳಿದು ಬರುತ್ತದೆ.

ಅಧಿಕಾರಿಗಳು :

ಮಂಗಸೂಳಿ ಪವಾರ ದೇಸಾಯಿಗಳು ಮರಾಠ ಚಕ್ರಾದಿಪತ್ಯಕ್ಕೆ ನಿಷ್ಠರಾಗಿದ್ದರೆಂದೇ ಹೇಳಬೇಕಾಗುತ್ತದೆ. ಪ್ರತಿ ವರ್ಷ ಅವರಿಗೇ ಕಪ್ಪ ಕಾಣಿಕೆ ಅರ್ಪಿಸುತ್ತಿದ್ದರು. ವತನ ಪ್ರದೇಶದಲ್ಲಿ ಕಂದಾಯ ವಸೂಲಿ ಮಾಡಿ ಕೆಲವು ಭಾಗವನ್ನು ಚಕ್ರಾದಿಪತ್ಯಕ್ಕೆ ನೀಡುತ್ತಿದ್ದರೆಂದು ತೋರುತ್ತದೆ. ಈ ದೇಸಗತಿಗಳ ಆಡಳಿತಾಧಿಕಾರಿಗಳು ಆಯಾ ದೇಸಗತಿಯ ಆಡಳಿತ ಪದ್ದತಿಯ ಮೇಲೆಯೆ ವರ್ಗಿಕರಣಗೊಂಡಿದ್ದನ್ನು ಕಾಣಬಹುದು. 'ದೇಸಗತಿ' ಅಥವಾ 'ಪರಗಣ ವತನ್' ಎಂದು ಕರೆಯಲ್ಪಡುವ ಹಲವು ಗ್ರಾಮಗಳ ಸಮೂಹಪ ಮೇಲ್ವಿಚಾರಣಾ ಆಡಳಿತೆಯ ಹಕ್ಕು ಈ ದೇಸಾಯಿಯವರದೇ ಆಗಿದ್ದಿತು. ಈ ದೇಸಗತದ ಆಡಳಿತೆಯನ್ನು ದೇಶಪಾಂಡೆ, ನಾಡಗೌಡ, ಕುಲಕರ್ಣಿ, ಹಾಗೂ ಇತರೇ ಅಧಿಕಾರಿಗಳ ಸಹಾಯದಿಂದ ನಡೆಸುತ್ತಿದ್ದರು. ದೇಸಾಯಿ, ದೇಶಪಾಂಡೆ, ನಾಡಗೌಡ, ನಾಡಕರ್ಣಿ (ನಾಡಿಗೇರ) ಈ ಮೊದಲಾದ ಅಧಿಕಾರಿಗಳನ್ನು ಮರಾಠಿಯಲ್ಲಿ 'ಚೌಗಲೆ' ಎಂದು ಕರೆಯುತ್ತಿದ್ದರು. ಇವರನ್ನು 'ಡಿಸ್ಟ್ರಿಕ್ಟ ಹೆರಿಡೆಟರಿ ಅಫೀಸರ್ಸ' ಎಂದಾಗಲಿ ಅಥವಾ

ಪರಗಣಾ ಇನಾಂದಾರರೆಂದಾಗಲೀ ಹೆಸರಿಸುತ್ತಿದ್ದರು. ಈ ಅಧಿಕಾರಿಗಳಿಗೆ ನೆರವಾಗಲು ಪಾಟೀಲ, ಕುಲಕರ್ಣಿ, ಚಮ್ಮಾರ, ತಳವಾರ, ಮೊದಲಾದ ಬಾರಾಬಲೂತಿ ಹಕ್ಕು ಹೊಂದಿದ ವತನದಾರರ ನೆರವಿನೊಂದಿಗೆ ದೇಸಗತಿಯ ಎಲ್ಲ ಆಡಳಿತೆಯನ್ನು ನಿರ್ವಹಿಸಲಾಗುತ್ತಿತ್ತು. ಇವರಲ್ಲಿ ಕೆಲವರ ಕರ್ತವ್ಯಗಳನ್ನು ಹೇಳಬೇಕೆಂದರೆ ಗ್ರಾಮಗಳಲ್ಲಿ ಶಾಂತಿ -ಸುವ್ಯೆವಸ್ಥೆ ಮತ್ತು ರಕ್ಷಣೆ ಮಾಡುವ ಕಾರ್ಯವನ್ನು ಪೋಲಿಸ್ ಪಾಟೀಲನು ನಿರ್ವಹಿಸುತ್ತಿದ್ದರು. ಈತನಿಗೆ ಮದ್ಯಯುಗದಲ್ಲಿ ಕೊತ್ವಾಲನೆಂದೂ ಕರೆಯುತ್ತಿದ್ದರೂ ಕಂದಾಯ ವಸೂಲಿ ಗೈಯುವ ಕಾರ್ಯವನ್ನು ಮುಲ್ಕಿಪಾಟೀಲನು ಕುಲಕರ್ಣಿಯು ಜಮೀನುಗಳ ಲೆಕ್ಕ ಪತ್ರ ಮತ್ತು ಕಂದಾಯ ವಸೂಲಿಗೈಯುವ ಲೆಕ್ಕ ಪತ್ರಗಳನ್ನು ನಿರ್ವಹಿಸುವ ಅಧಿಕಾರಿಗಳನ್ನು ಹೊಂದಿದ್ದನು. (ಅನುಬಂಧದಲ್ಲಿ ಪ್ರಮಾಣ ಪತ್ರ ನೋಡಬಹುದು) ವಾಲಿಕಾರನು ರೈತರು ಕೊಡಬೇಕಾದ ತಲಾ - ಫಾರು ತೆರಿಗೆಯ ಪಟ್ಟಿಯನ್ನು ಪಡೆದು ತೆರಿಗೆ ವಸೂಲಿ ಗೈಯುವ ಕಾರ್ಯವನ್ನು ನಿರ್ವಹಿಸುತ್ತಿದ್ದನು.

ಅದರಂತೆ ಮಹಾರ (ಹರಿಜನ) ರು ಊರಿನ ಸ್ವಚ್ಛತೆ ಮತ್ತು ರಕ್ಷಣೆ ಗೈಯಿಯುವ ಕಾರ್ಯ ಮಾಡುತ್ತಿದ್ದರು, ಮಹಾರರಿಗೂ ಮತ್ತು ಈ ಎಲ್ಲ ಮೇಲಿನ ಅಧಿಕಾರಿಗಳೆಲ್ಲ, 'ವತನ್' ನನ್ನು ಬಿಟ್ಟು ಕೊಡಲಾಗಿತ್ತು. ಈ ವತನೀ ಭೂಮಿಗೆ ಅವರು ಪೂರ್ಣ ಪ್ರಮಾಣದ ತೆರಿಗೆಯನ್ನು ತುಂಬಬೇಕಾಗಿರಲಿಲ್ಲ. ಕೇವಲ ಸರ್ಕಾರ ನಿಗದಿಪಡಿಸಿದ 'ಜೂಡಿ' ಎಂಬ ಕಡಿಮೆ ಮೊತ್ತದ ಹಣವನ್ನು ತುಂಬುತ್ತಿದ್ದರು.

ಉತ್ತರ ಕರ್ನಾಟಕದಲ್ಲಿರುವ ಇಂತಹ ಅನೇಕ ದೇಶಗತಿಗಳು ಬಿಜಾಪುರದ ಆದಿಲ್ ಷಾಹಿಗಳ ಕಾಣಿಕೆ ಎಂದು ನಾವು ಈಗಾಗಲೇ ನೋಡಿದ್ದಾಗಿದೆ. ಇವುಗಳೆಲ್ಲ ಆತನ ಅಧೀನದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದವು. ವಿವಿಧ ಕ್ಷೇತ್ರಗಳಲ್ಲಿ ಆದಿಲ್ ಶಾಹಿ ರಾಜ್ಯಕ್ಕೆ ಅಪೂರ್ವ ಸೇವೆ ಸಲ್ಲಿಸಿದಂತಹವರಿಗೆ ಮತ್ತು ನಿಷ್ಠರಿಗೆ ಈ ವತನೀ ಅಧಿಕಾರವನ್ನು ನೀಡಲಾಗಿತ್ತು. ಬಹಮನಿಗಳ 'ತರಫ್' ಎಂಬ ಪ್ರಾಂತವಿಭಾಗಗಳಿದ್ದವು. ಮುಂದೆ ಆದಿಲ್ ಶಾಹಿಗಳ ಕಾಲದಲ್ಲಿ 'ತರಫ್' ಮತ್ತು ತೆರಫ್‌ದಾರ' ಎಂದು ಬದಲಾವಣೆಗೊಂಡು 'ಜಾಗೀರ್' ಮತ್ತು 'ಜಾಗೀರ್‌ದಾರ' ಎಂಬ ಪದ ಪದವಿಗಳು ಬಳಕೆಗೆ ಬಂದವೆಂದು ಹೇಳಬಹುದು. ತುಂಗಭದ್ರಾ ನದಿಯ ದಕ್ಷಿಣ ಭಾಗಗಳು ವಿಜಯನಗರ ಆಳ್ವಿಕೆಗೊಳಪಟ್ಟದ್ದರಿಂದ ಅಲ್ಲಿಯ ಸ್ಥಳಿಯ ಪಾಳೇಯಗಾರರಿಗೆ ಆಡಳಿತ ನಿರ್ವಹಣೆಯನ್ನು ಬಿಟ್ಟುಕೊಟ್ಟು ಅವರು ನಿಗದಿ ಪಡಿಸಿದ ಕಪ್ಪವನ್ನು ಸಾಮ್ರಾಜಕ್ಕೆ ಅರ್ಪಿಸುತ್ತಿದ್ದರು. ತಮ್ಮ ಪ್ರಭುತ್ವಕ್ಕೊಳಪಟ್ಟ ಪ್ರದೇಶಗಳನ್ನು ಹಲವು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಅವುಗಳನ್ನು ಸರಕಾರ, ಪರಗಣ -ಮಂಡಾಗಳೆಂದು ಮುಂತಾಗಿ ವಿಭಾಗಿಸಲಾಗಿತ್ತು. ಪ್ರತಿ ಸರ್ಕಾರದಲ್ಲಿಯೂ ನಾಲ್ಕು ಜನ ಅಧಿಕಾರಿಗಳಿರುತ್ತಿದ್ದರು ಅವರಲ್ಲಿ ಇಬ್ಬರೂ ಹಿಂದು ಅಧಿಕಾರಿಗಳು, ಒಬ್ಬ ಕಂದಾಯ ವಸೂಲಿಗಾರ ಇನ್ನೊಬ್ಬನು ಲೆಕ್ಕ ಪತ್ರಗಳನ್ನು ಇಡುವನು. ಸರಕಾರದ ಮುಖ್ಯಸ್ಥನಿಗೆ ದರಹವಾಲ್ದಾರ್ ಮತ್ತು ಸುಭೇದಾರ್ ಎಂದು ಕರೆಯುತ್ತಿದ್ದರು. ನಾಲ್ಕನೇ ಅಧಿಕಾರಿಯೇ ಖಾಜಿಯಾಗಿದ್ದನು.

ಕೋತ್ವಾಲ್, ದೇಶಮುಖ್, ದೇಸಾಯಿ ಎಂಬ ಅಧಿಕಾರಿಗಳು ಪರಗಣದಲ್ಲಿರುತ್ತಿದ್ದರು. ಇವರಲ್ಲಿ ಸಾಮಾನ್ಯವಾಗಿ ಕಂದಾಯ ವಸೂಲಿಗಾಗಿ ಹಿಂದೂ ಅಧಿಕಾರಿಗಳನ್ನೇ ನೇಮಕ ಮಾಡಲಾಗುತ್ತಿತ್ತು. ಆಯಾ ಪರಗಣದ ಕಂದಾಯ ವ್ಯೆವಸ್ಥೆಯಲ್ಲವೂ ಇವರ ನಿಯಂತ್ರಣದಲ್ಲಿದ್ದವು. (೩)

ಪರಗಣಾವತನವು ಹಲವು ಹಳ್ಳಿಗಳ ಸಮೂಹವಾಗಿದ್ದಿತು. ಅಂದರೆ, ಮಂಗಸೂಳಿಯಲ್ಲಿ ವಾಸಿಸುತ್ತಿದ್ದ ಈ ಪವಾರ ದೇಸಾಯಿಗಳ ಹಿಡಿತದಲ್ಲಿ ಸುಮಾರು ೬೪ ಗ್ರಾಮಗಳೇ ಆಡಳಿತ ವ್ಯೆವಸ್ಥೆಯ ಅತೀ ಚಿಕ್ಕ ಘಟಕಗಳಾಗಿದ್ದವು. ಮಂಗಸೂಳಿಯಿಂದ ಈ ದೇಸಾಯಿಗಳು ಹಲವು ಅಧಿಕಾರಿಗಳ ಮುಖೇನ ಈ ಗ್ರಾಮಗಳ ಆಡಳಿತೆಯನ್ನು ನಿರ್ವಹಿಸುತ್ತಿದ್ದರು. ಸ್ಥಳೀಯವಾಗಿಯೂ ಗ್ರಾಮಗಳ ಪಂಚಾಯತಿಗಳು ಗ್ರಾಮಾಡಳಿತೆಯನ್ನು ನಿರ್ವಹಿಸುತ್ತಿದ್ದವು ಗ್ರಾಮದ ಮುಖ್ಯಸ್ಥನು 'ಗೌಡ' ನಾಗಿರುತ್ತಿದ್ದನು. ಆದರೆ ಅಧಿಕಾರಿಗಳಾರೂ ಈ ಗ್ರಾಮಾಡಳಿತೆಯಲ್ಲಿ ತಲೆಹಾಕುತ್ತಿರಲಿಲ್ಲ. ಗ್ರಾಮಗಳಲ್ಲಿಯ ಕೂಡ ಪಾಟೀಲ, ಪೋಲಿಸ್ ಪಾಟೀಲ ಮೊದಲಾದ ಅಧಿಕಾರಿಗಳು ನ್ಯಾಯ ಮತ್ತು ಕಂದಾಯಗಳ ವ್ಯೆವಹಾರ ನೋಡಿಕೊಳ್ಳುತ್ತಿದ್ದರು. ಇಲ್ಲಿ ಲೆಕ್ಕ -ಪತ್ರಗಳನ್ನು ಕುಲಕರ್ಣಿಯು ನೋಡಿಕೊಳ್ಳುತ್ತಿದ್ದನು. ಇಲ್ಲಿ ಚೌಕಿದಾರರೆಂದು ಕರೆಯುವ ಕಾವಲುಗಾರರೂ ಇದ್ದರು. ಇವರೆಲ್ಲ ತಮ್ಮ ಸೇವೆಯ ಪ್ರತಿಫಲವಾಗಿ ಇನಾಮನ್ನು ಪಡೆಯುತ್ತಿದ್ದರು.

ಗ್ರಾಮಗಳ ಈ ನಾಯಕರು ತಮ್ಮ ಕುಂದು ಕೊರತೆಗಳನ್ನು ನಿಗದಿ ಪಡಿಸಿದ ಸಂದರ್ಭದಲ್ಲಿ ಈ ದೇಸಾಯಿಗಳಿಗೆ ನಿವೇದಿಸಿಕೊಳ್ಳುತ್ತಿದ್ದರು. ಹದಿಮೂರನೇ ಗಾದಿ ಮಾಲಿಕರಾದ ಸಿದ್ದರಾಜ ದೇಸಾಯಿ ೧೪ ನೇ ಗಾದಿ ಮಾಲಿಕರಾದ ಬೋಜರಾಜ ದೇಸಾಯಿಯವರು ಗ್ರಾಮಸ್ಥರ ಬೇಟಿಯನ್ನು ನಿಗದಿಪಡಿಸಿ, ಒಮ್ಮೊಮ್ಮೆ ಸ್ವತ: ತಾವೇ ಗ್ರಾಮಗಳಿಗೆ ಬೇಟ್ಟಿಕೊಟ್ಟು ಸಮಸ್ಯೆಗಳನ್ನು ಪರಿಹರಿಸುತ್ತಿದ್ದರೆಂದು ತಿಳಿದು ಬರುತ್ತದೆ.

ಅದರಂತೆ ಜನಾನುರಾಗಿಯಾದ ದ್ಯೆರ್ಯಶೀಲರಾವ್ ಅವರು ಜನಸಾಮಾನ್ಯರೊಂದಿಗೆ ಬೆರೆತು ಅವರಿಗೆ ಸ್ಪಂದಿಸುತ್ತಿದ್ದರು. ಅವರ ಸಮಕಾಲೀನರ ಅಭಿಪ್ರಾಯವಾಗಿದೆ.

ಸಿಪಾಯಿಗಳು :

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಸರಕಾರದಿಂದಲೇ ನೇಮಿಸಲ್ಪಟ್ಟ ಕೆಲವು ಸಿಪಾಯಿಗಳಿದ್ದರೆಂದು ತಿಳಿದು ಬರುತ್ತದೆ ಇದಕ್ಕೂ ಪೂರ್ವದಲ್ಲಿ ಸೇವಕರು, ಪರಿಚಾರಕರೆಂದು ಕರೆಯುವ ಇವರು ದೇಸಾಯಿಗಳ ಸೇವೆಯಲ್ಲಿ ನಿರತರಾಗಿರಬೇಕೆಂದು ತಿಳಿದು ಬರುತ್ತದೆ. ಸುಮಾರು ೧೮೮೦ -೧೯೦೦ ರ ಸುಮಾರಿಗೆ ನೇಮಕಗೊಂಡ ಮೂರು ಜನ ಅಂತಹ ಸಿಪಾಯಿಗಳು ಈ ದೇಸಾಯಿಗಳ ಸೇವೆಗೆ ನೇಮಕಗೊಂಡಿದ್ದರು. ಅಂತಹವರಿಗೆ ಕ್ರಮ ಸಂಖ್ಯೆಗಳನ್ನು ನೀಡಲಾಗಿತ್ತೆಂಬುದನ್ನು ಅವರಿಗೆ ನೀಡಿದ ಗುರುತುಗಳು ಮತ್ತು ಸಿಪಾಯಿ ಉಡುಪುಗಳ (ಎದೆವಸ್ತ್ರ) ಮೇಲಿಂದ ಅರಿಯಬಹುದು. ಹೀಗೆ ನೇಮಕಗೊಂಡ ಸಿಪಾಯಿಗಳು ಪವಾರ ದೇಸಾಯಿಗಳಲ್ಲಿ

ಎರಡು ಜನರಿದ್ದರೆಂದು ಸ್ಪಷ್ಟವಾಗುತ್ತದೆ. ಇವರು ದೇಸಾಯಿಯವರಿಗೆ ಆಪ್ತರಾಗಿದ್ದು, ಅವರ ಬೇಕು - ಬೇಡಗಳನ್ನು ಬಲ್ಲವರಾಗಿದ್ದರು.

೨. ಸಾಮಾಜಿಕ ಜೀವನ :

ಮಂಗಸೂಳಿ ಪವಾರ ದೇಸಾಯಿಗಳ ಸಾಮಾಜಿಕ ಜೀವನ ಶೈಲಿಯೂ ಕೂಡ ಸರಳ ಸಂಪ್ರದಾಯ ಶೀಲವಾಗಿತ್ತೆಂದು ತಿಳಿದು ಬರುತ್ತದೆ. ಇವರು ಎಂದಿಗೂ ಶ್ರೀಮಂತಿಕೆ -ರಾಜಮನೆತನದ ಅಹಂನಲ್ಲಿ ಬೆಳೆದವರಾಗಿರಲಿಲ್ಲ. ಸರಳವಾಗಿ ಪ್ರತೀ ಜನಸಾಮಾನ್ಯರೊಂದಿಗೆ ಬೇರೆಯುವುದು ಇವರ ವಿಶಿಷ್ಟ ಜೀವನ ಶೈಲಿಯಾಗಿದೆ ಸಾಮಾಜಿಕ ಜೀವನದಲ್ಲಿ ಎಂದು ಮೇಲು -ಕೀಳು ಎಂದು ಭಾವಿಸಿ ವಿವಿಧ ಕೋಮುಗಳ ಮಧ್ಯೆ ಕಂದಕವನ್ನುಂಟುಮಾಡದೇ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಶ್ರಮಿಸಿದವರಾಗಿದ್ದಾರೆ.

ಭಾರತೀಯ ಸಾಮಾಜಿಕ ಜೀವನವು ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ಸಮಾಜವೇ ಆಗಿದೆ. ಅದನ್ನು ಇಲ್ಲಿಯವರೆಗೂ ಕೂಡ ನೋಡಬಹುದಾಗಿದೆ. ಪಿತೃ ಪ್ರಧಾನವಾದ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದು, ಮಹಿಳೆಯರೂ ಕೂಡ ಸಾಮಾಜಿಕ -ಕೌಟುಂಬಿಕ ಜೀವನದಲ್ಲಿ ಪ್ರಧಾನವಾದ ಪಾತ್ರವಹಿಸಿದವರಾಗಿದ್ದಾರೆ. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದದ್ದರಿಂದ ಉತ್ತರಾಧಿಕಾರತ್ವದ ಹಕ್ಕು ಕೂಡ ಮಗನಿಗೆ ದೊರೆಯುತ್ತಿತ್ತು. ಹೆಣ್ಣುಮಕ್ಕಳನ್ನು ಉತ್ತಮ ಮನೆತನಗಳಿಗೆ ವಿವಾಹ ಮಾಡಿಕೊಡುವ ಪದ್ಧತಿಯಿತ್ತು. ಅಂತೆಯೇ ಪವಾರ ದೇಸಾಯಿ ಮನೆತನದ ಹೆಣ್ಣುಮಗಳೊಬ್ಬಳನ್ನು ಮರಾಠ ಅಧಿಪತಿಯಾದ ಛತ್ರಪತಿ ಶಾಹು ಮಹಾರಾಜನಿಗೆ ವಿವಾಹ ಮಾಡಿ ಕೊಡಲಾಗಿತ್ತು ಶಾಹುಗೆ ಹದಿಮೂರು ಜನ ರಾಣಿಯರಿದ್ದರು. ಅವರೆಲ್ಲ ವಿವಿಧ ಮರಾಠ ಮನೆತನಕ್ಕೆ ಸೇರಿದ ಮಹಿಳೆಯರಾಗಿದ್ದರು. ಅದರಂತೆ ಈತನ ಒಂಬತ್ತನೇಯ ರಾಣಿ ಗಂಗಾಬಾಯಿಯು ಅಥಣಿ ಪವಾರ ದೇಸಾಯಿಗಳ ಮಗಳಾಗಿದ್ದಾಳೆ. (೧) ಗಂಗಾಬಾಯಿ ಯಾರ ಮಗಳೆಂಬುದು ಸ್ಪಷ್ಟ ವಾಗಿಲ್ಲ. ಆದರೆ, ಹನ್ನೊಂದನೆ ಗಾದಿ ಮಾಲಿಕರಾದ ಭೋಜರಾಜ ಸಿದ್ಧರಾಜ ಪವಾರ ದೇಸಾಯಿಯರ ಮಗಳೆಂದು ಊಹಿಸಬಹುದಾಗಿದೆ ಕಾಗಲ್, ಬೇಡಗಕರ್ ಘೋರ್ಪಡೆ, ತೋರಗಲ್ಲನ ಶಿಂಧ, ಜಾಂಬೋಡಿ, ಮುರಗುಡ, ಫಾಟಂಕರ್, ನಿಂಬಾಳ್ಕರ, ಗಾಯಕವಾಡ ಹೀಗೆ ಅನೇಕ ಪ್ರಸಿದ್ಧ ರಾಜ ಮನೆತನಗಳೊಂದಿಗೆ ಇವರು ವೈವಾಹಿಕ ಸಂಬಂಧವನ್ನು ಹೊಂದಿದ್ದರು.

ಜನಸಾಮಾನ್ಯರೊಂದಿಗೆ ನಿಕಟ ಸಂಬಂಧ ಹೊಂದಿದ್ದ ಇವರು ಅವರ ಕಷ್ಟ -ಸುಖಗಳಲ್ಲಿ ಭಾಗಿಯಾಗುತ್ತಿದ್ದರಿಂದ ಸಹಜ ವಾಗಿಯೇ ಜನರು ಇವರ ಬೆಂಬಲಕ್ಕೆ ನಿಂತರು. ಹಣದ ಕೊರತೆಯಿಂದಾಗಿ ಬಡ ಕೃಷಿಕರ ಮಕ್ಕಳು ವಿವಾಹಗಳು ನಿಲ್ಲುವ ಸಂದರ್ಭದಲ್ಲಿ ಈ ದೇಸಾಯಿಯರು ಉದಾರವಾಗಿ ಹಣಕಾಸು ನೆರವು ನೀಡಿ ತಾವೇ ನಿಂತು ವಿವಾಹ ಮಾಡಿಸಿಕೊಟ್ಟ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಕೊಡುಗೈ ವೀರರಾಗಿದ್ದ ಇವರು ಎಂದೂ ಸ್ವಾರ್ಥಪರ ಯೋಚನೆಯಲ್ಲಿ ತೊಡಗಿರಲಿಲ್ಲ. ಹನ್ನೊಂದನೇಯ ಗಾದಿಮಾಲಿಕರಾಗಿದ್ದ ಭೋಜರಾಜ ದೇಸಾಯಿಯವರು ಒಮ್ಮೆ ಮಂಗಸೂಳಿಯ ತಮ್ಮ ವತನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರೈತನ ಮಗಳ ವಿವಾಹವನ್ನು ಸ್ವತ:

---

೧). Malgonkar Manohar - Chattrapatis of Kolhapur. Bombay -1971. P-374

ತಮ್ಮ ಖರ್ಚಿನಲ್ಲಿಯೇ ನೇರವೇರಿಸಿದರೆಂದು ವಯೋವೃದ್ಧರು ಇಂದಿಗೂ ಹೇಳುತ್ತಾರೆ. ಇದು ಅವರಲ್ಲಿದ್ದ ಉದಾರ ಗುಣ ಮತ್ತು ಜನರ ಮೇಲಿದ್ದ ಪ್ರೀತಿಯನ್ನು ಬಿಂಬಿಸುತ್ತದೆ. ಅದರಂತೆ ೧೪ ನೇ ಗಾದಿ ಮಾಲಿಕರಾದ ಭೋಜರಾಜ ಪವಾರ ದೇಸಾಯಿಯವರೂ ಕೂಡ ಉದಾರಗುಣಗಳ ಖಣಿಯಾಗಿದ್ದರು. ಇವರು ಕೂಡ ಹಲವು ಬಡವರ ಕುಟುಂಬಗಳ ರಕ್ಷಣೆಗೆ ಉದಾರ ದಾನ ಮಾಡಿದ್ದನ್ನು ಕಾಣಬಹುದು ೧೫ ನೇಯ ಗಾದಿ ಮಾಲಿಕ ಮತ್ತು ದಿವಂಗತ ಸಚಿವರಾಗಿದ್ದ ಧೈರ್ಯಶೀಲರಾವ್ ಅವರೂ ತಮ್ಮ ಪೂರ್ವಜರ ಗುಣಗಳನ್ನೇ ಹೊತ್ತು ಬಂದವರು ಉದಾರ ಮನೋಭಾವದವರಾದ ಧೈರ್ಯಶೀಲರಾವ್ ಅವರು ಸಾಮಾಜಿಕ ಕಳಕಳಿ ಹೊಂದಿದವರು. ಬಡವರು ಇವರಲ್ಲಿ 'ಇಲ್ಲ' ವೆಂದು ಬಂದರೆ, ಎಂದೂ ಬರಿಗೈಯಲ್ಲಿ ಮರಳಿಕಳಿಸಿದವರಲ್ಲ. ೧೯೫೦ ರಲ್ಲಿ ಅಥಣಿಯಲ್ಲಿಯೇ ಹಲವು ಬಡಜನರ ವಿವಾಹದ ಖರ್ಚನ್ನು ಭರಿಸಿದ ಕೀರ್ತಿ ಇವರದು ತಮ್ಮ ವತನ ಪ್ರದೇಶದಲ್ಲಿ ಯಾರೇ ಆಗಲಿ ತಮ್ಮ ಕುಟುಂಬಗಳ ಸಮಾರಂಭಕ್ಕೆ ಆಹ್ವಾನವಿತ್ತರೆ ಯಾವುದೇ ತಾರತಮ್ಯವಿಲ್ಲದೇ ಅವರೊಂದಿಗೆ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಮಂಗಸೂಳಿ ಪವಾರ ದೇಸಾಯಿಗಳನೇಕರು ಮಕ್ಕಳ ಮೇಲೆ ಅಪಾರ ಪ್ರೀತಿಯನ್ನು ಹೊಂದಿದ್ದರಲ್ಲದೇ ಸಮಾಜದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುವ ಬಗೆಯನ್ನು ಭೋಧಿಸುತ್ತಿದ್ದರು. ಪ್ರತಿ ಸಾಯಂಕಾಲ ಕುಟುಂಬದ ಸದಸ್ಯರೊಂದಿಗೆ ಉಭಯ ಕುಶಲೋಪಹರಿಯಲ್ಲಿ ತೊಡಗುತ್ತಿದ್ದರು. ಮಕ್ಕಳ ಶಿಕ್ಷಣ, ಅವರ ಕಾರ್ಯಚಟುವಟಿಕೆಗಳು, ಅವರ ಅಭಿರುಚಿಗಳು ಹೀಗೆ ಅನೇಕ ಅಂಶಗಳ ಕುರಿತು ತಿಳಿದುಕೊಳ್ಳುತ್ತಿದ್ದರು. ಅವರ ದೈಹಿಕ, ಮಾನಸಿಕ, ಶೈಕ್ಷಣಿಕ ಗುಣಮಟ್ಟ ಸುಧಾರಣೆಯಲ್ಲಿಯೂ ಇವರು ಗಮನ ಹರಿಸುತ್ತಿದ್ದರು. ಏಕಪತ್ನಿ ಪದ್ಧತಿಯು ಜನಸಾಮಾನ್ಯರಲ್ಲಿ ಅಸ್ತಿತ್ವದಲ್ಲಿತ್ತೆ ಹೊರತು ಮಂಗಸೂಳಿ ಪವಾರ ದೇಸಾಯಿಗಳು ಒಂದಕ್ಕಿಂತ ಇಬ್ಬರು ಹೆಂಡಿರನ್ನು ಹೊಂದಿದ್ದನ್ನು ಕಾಣುತ್ತೇವೆ. ಆದರೆ, ೧೫ ನೇ ಗಾದಿಮಾಲಿಕರಾದ ಧೈರ್ಯಶೀಲರಾವ್ ಅವರಿಗೆ ಮಾತ್ರ ಒಬ್ಬರೇ ಪತ್ನಿ ಇದ್ದರು. ಅಂದರೆ ಇವರು ರಾಜಮಹಾರಾಜರಂತೆಯೇ ಜೀವನ ನಡೆಸಿದ್ದನ್ನು ತಿಳಿಯಬಹುದು.

ಜಾತಿ ವ್ಯವಸ್ಥೆ :

ಪ್ರಾಚೀನ ವರ್ಣಾಶ್ರಮ ಧರ್ಮವು ಈ ಅವಧಿಗೂ ಮುಂದುವರೆಯಿತ್ತೆಂದು ಹೇಳಬಹುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ ಸಾಮಾಜಿಕ ವ್ಯವಸ್ಥೆಯ ಸ್ತರಗಳಲ್ಲಿ ಜೀವನ ಸಾಗಿಸುತ್ತಿದ್ದರು. ಬ್ರಾಹ್ಮಣವರ್ಗವು ಪುರೋಹಿತರಾಗಿದ್ದು, ಪೂಜೆ, ಯಜ್ಞ, ಯಾಗ, ಹೋಮ -ಹವನಗಳನ್ನು ಮಾಡಿಕೊಂಡಿದ್ದರೆಂದು ತಿಳಿದು ಬರುತ್ತದೆ. ಮಂಗಸೂಳಿ ಪವಾರ ದೇಸಾಯಿಗಳು ಮರಾಠಿಗರಾಗಿದ್ದು, ಕ್ಷತ್ರಿಯ ವರ್ಗಕ್ಕೆ ಸೇರಿದವರು. ರೈತರು, ವ್ಯಾಪಾರಿಗಳು, ಕೃಷಿ -ಕೂಲಿಕಾರರೆಲ್ಲ ವೈಶ್ಯರಾಗಿದ್ದರು. ಶೂದ್ರರು ಈ ಜಾತಿ ವ್ಯವಸ್ಥೆಯ ಕೆಳಸ್ತರದಲ್ಲಿದ್ದು ಗ್ರಾಮದ ಸ್ವಚ್ಛತೆ ಇವರ ಪ್ರಮುಖ ಕಾರ್ಯವಾಗಿತ್ತು. ಊರಲ್ಲಿ ಯಾರಾದರೂ ತೀರಿಕೊಂಡರೆ
ಸತ್ತ ಸುದ್ದಿಯನ್ನು ಮುಟ್ಟಿಸುವುದು, ಸತ್ತ ದನಗಳನ್ನು ಊರ ಹೊರಗೆ ಸಾಗಿಸುವುದು ಉಳಿದ

ಮೂರು ಜಾತಿಗಳ ಸೇವೆ ಮಾಡಿ ಕೊಂಡಿರುವುದು ಮತ್ತು ರೈತರಿಂದ ಕಂದಾಯ ವಸೂಲಿಗಳಂತಹ ಮೊದಲಾದ ಕಾರ್ಯಗಳಲ್ಲಿ ಸಹಕರಿಸುತ್ತಿದ್ದರು. ವೀರಶೈವ ಧರ್ಮದವರು ಬಹುಸಂಖ್ಯೆಯಲ್ಲಿದ್ದು, ಅವರೂ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರೆಲ್ಲ ವತನ ಭೂಮಿಯನ್ನು ಪಡೆದು ಅದರಲ್ಲಿಯೇ ತಮ್ಮ ಜೀವನಸಾಗಿಸುತ್ತಿದ್ದರು. ಈ ಅವಧಿಯಲ್ಲಿ ಜಂಗಮರೂ ಕೂಡ ಪೂಜೆ -ಪುನಸ್ಕಾರಗಳನ್ನು ಮಾಡುತ್ತಿದ್ದು ಅವರೂ ಪುರೋಹಿತಶಾಹಿ ವರ್ಗಕ್ಕೆ ಸೇರಿದ್ದರು, ಅಥಣಿ ಪ್ರದೇಶದ ಹಲವು ಶೈವ ದೇವಾಲಯಗಳ ಉಸ್ತುವಾರಿ ಇವರಿಗೇ ಸೇರಿತ್ತು.

ಈ ಜಾತಿ ವ್ಯವಸ್ಥೆಯಲ್ಲಿಯೇ ಸಮಾಜದಲ್ಲಿ ಅಧಿಕಾರಿ, ಆಡಳಿತ ವರ್ಗವೆಂದೂ ವಿಂಗಡಿಸಬಹುದಾಗಿದೆ. ಈ ಅಧಿಕಾರಿಗಳು ಜಾತಿಯನ್ನಾಧರಿಸಿ ವಿಂಗಡಿಸಲ್ಪಟ್ಟಿದ್ದವೆಂದು ತಿಳಿದು ಬರುತ್ತದೆ. ಬ್ರಾಹ್ಮಣರು ಕುಲಕರ್ಣಿ, ಸೇನುಭೋಗ, ಮತ್ತು ಚಿಕ್ಕಪುಟ್ಟ ವತನದಾರಿ ಹುದ್ದೆಗಳನ್ನು ಪಡೆದುಕೊಂಡಿದ್ದರು. ವೃತ್ತಿಯನ್ನಾಧರಿಸಿಯೂ ಕೂಡ ಈ ಸಾಮಾಜಿಕ ವ್ಯವಸ್ಥೆಯನ್ನು ಕಂಡುಕೊಳ್ಳಬಹುದು,ಅವರು ತಮ್ಮದೇಯಾದ ಕಸುಬಿನಲ್ಲಿ ಜೀವನ ಸಾಗಿಸುತ್ತಿದ್ದರು ಬಡಿಗ, ಕುಂಬಾರ, ಕಮ್ಮಾರ, ಗಾಣಿಗ, ಚರ್ಮಕಾರ, ಮಡಿವಾಳ ಹೀಗೆ ಅನೇಕ ವೃತ್ತಿಗಳನ್ನು ಆಧರಿಸಿ ಸಾಮಾಜಿಕ ಜೀವನ ವ್ಯವಸ್ಥಿತಗೊಂಡಿತ್ತು. ಇವರೂ ಕೂಡ 'ಜೂಡಿ' ಎಂಬ ಭೂಮಿಯನ್ನು ಪಡೆದುಕೊಂಡಿದ್ದರು.

ಮಂಗಸೂಳಿ ದೇಸಾಯಿಗಳು ಕ್ಷತ್ರಿಯರಾಗಿದ್ದರು , ಅಂದರೆ ಮರಾಠರು ಇವರು ಪೂರ್ಣ ಪ್ರಮಾಣದ ಮಾಂಸಾಹಾರಿಗಳಾಗಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಮಾಂಸವನ್ನು ಸೇವಿಸುತ್ತಿದ್ದರು. ಉಳಿದಂತೆ ಇವರು ಶಾಖಾಹಾರಿಗಳೆಂದೇ ಹೇಳಬಹುದು. ತರಕಾರಿ ಪದಾರ್ಥಗಳು, ಹಣ್ಣು ಹಂಪಲಗಳು, ಹೈನು ಪದಾರ್ಥಗಳು, ಅನ್ನ, ರೊಟ್ಟಿ, ಚಪಾತಿ, ಮೊದಲಾದವುಗಳು ಇವರು ಸೇವಿಸುವ ಪ್ರಮುಖ ಆಹಾರ ಪದಾರ್ಥಗಳಾಗಿದ್ದವು. (೨) ಜನಸಾಮಾನ್ಯರ ಆಹಾರವು ಇದೇ ಆಗಿತ್ತೆಂದು ಹೇಳಬಹುದು. ಮುಸ್ಲಿಂರನೇಕರು ಮಂಸಾಹಾರಿಗಳಾಗಿದ್ದರು. ಹಿಂದುಗಳ ಕೆಲವು ಪಂಗಡಗಳೂ ಮಾಂಸವನ್ನು ಸೇವಿಸುತ್ತಿದ್ದರು. ಆದರೆ ವೀರಶೈವರು ಕಟ್ಟಾ ಶಾಖಾಹಾರಿಗಳಾಗಿದ್ದರೆಂದು ತಿಳಿದು ಬರುತ್ತದೆ. ಜಾತ್ರೆ -ಉತ್ಸವಗಳಲ್ಲಿ ದನ ಬಲಿಕೊಟ್ಟ ಪ್ರಾಣಿಗಳನ್ನು ಕೂಡ ಪ್ರಸಾದವೆಂದು ಸ್ವೀಕರಿಸುವ ಪದ್ಧತಿ ಇತ್ತು. ಇದನ್ನು ಮಾಂಸಾಹಾರಿಗಳು ಮಾತ್ರ ಸೇವಿಸುತ್ತಿದ್ದರು. ಪುರೋಹಿತಶಾಹಿ ಮತ್ತು ಇತರರು ಇದನ್ನು ಸೇವಿಸುತ್ತಿರಲಿಲ್ಲ. ಒಟ್ಟಾರೆಯಾಗಿ ಈ ಅವಧಿಯಲ್ಲಿ ಸಸ್ಯಾಹಾರವೇ ಬಹುಜನರ ಆಹಾರ ಪದಾರ್ಥವೆಂದು ತಿಳಿದು ಬರುತ್ತದೆ. ಮಂಗಸೂಳಿ ಪವಾರ ದೇಸಾಯಿಗಳ ಮನೆತನದ ಮುತ್ತು ಅಂದಿನ ಸಮಕಾಲೀನ ಸ್ತ್ರೀಯರ ಬಗ್ಗೆ ವಿವೇಚಿಸಲಾಗಿ ಅವರೆಲ್ಲ ಸುಶಿಕ್ಷಿತರಾಗಿದ್ದರೆಂದು ತಿಳಿದು ಬರುತ್ತದೆ. ದೇಸಾಯಿಗಳು ವಿವಾಹವಾದ ಪತ್ನಿಯರೆಲ್ಲಾ ಮರಾಠ ರಾಜಮನೆತನಕ್ಕೆ ಸೇರಿದವರಾಗಿದ್ದರಿಂದ ಅವರಲ್ಲಿ ಸಹಜವಾಗಿ ಧೈರ್ಯ - ಎದೆಗಾರಿಕೆ ಮತ್ತು ಅಷ್ಟೆ

---

೨) ದಿ. ಶ್ರೀಮಂತ ಧೈರ್ಯಶೀಲರಾವ್ ಪವಾರ ದೇಸಾಯಿಯವರ ಧರ್ಮಪತ್ನಿ ಶ್ರೀಮತಿ ಆಶಾದೇವಿ ಅವರ ಸಂದರ್ಶನದಿಂದ. ದಿ: ೦೭-೦೭-೨೦೦೮

ನಯ -ನಾಜೂಕತೆಗಳನ್ನು ಕಾಣಬಹುದಾಗಿದೆ. ೧೩ನೇ ಗಾದಿ ಮಾಲಿಕನಾದ ಸಿದ್ದರಾಜ ಪವಾರ ದೇಸಾಯಿಯವರ ಹಿರಿಯ ಪತ್ನಿ ಕೃಷ್ಣಾಬಾಯಿಯ ಬೇಡಗಕರ ಘೋರ್ಪಡೆಯ ಮನೆತನದವರಾಗಿದ್ದು ಆಡಳಿತದ ಎಲ್ಲ ಜ್ಞಾನವನ್ನು ಸಂಪಾದಿಸಿಕೊಂಡವರಾಗಿದ್ದರು. ಸಿದ್ದರಾಜ ಅವರು ಪ್ರವಾಸಕ್ಕೆಂದು ತೆರಳಿದಾಗ ಸುಮಾರು ಒಂದು ತಿಂಗಳು ಕಾಲ ದೇಸಗತಿಯ ಆಡಳಿತವನ್ನು ನಡೆಸಿಕೊಂಡು ಬಂದಿದ್ದರು. ಅವರ ಇನ್ನೊಬ್ಬ ಪತ್ನಿ ಗ್ವಾಲಿಯರ ಸಿಂಧಿಯಾ ರಾಜಮನೆತನಕ್ಕೆ ಸೇರಿದವರಾಗಿದ್ದು, ಹವಸಾಬಾಯಿಯೂ ಕೂಡ ಸುಶಿಕ್ಷಿತರೂ ಮತ್ತು ಕಲೆ -ಸಾಹಿತ್ಯಾಸಕ್ತರೂ ಆಗಿದ್ದರೆಂದು ತಿಳಿದು ಬರುತ್ತದೆ. ೧೪ ನೇ ಗಾದಿ ಮಾಲಿಕರಾದ ಭೋಜರಾಜ ದೇಸಾಯಿಯವರ ಪತ್ನಿ ಸುಶೀಲಾಬಾಯಿ ಚಾವರೇಕರ ಭೋಂಸ್ಲೆ ಮನೆತನದವರಾಗಿದ್ದು ಕುಸುರಿ ಕೆಲಸ ಮತ್ತು ಬಣ್ಣದ ಚಿತ್ರ ಬಿಡಿಸುವ ಹವ್ಯಾಸ ಹೊಂದಿದ್ದರು. ೧೫ ನೇ ಗಾದಿ ಮಾಲಿಕರಾದ ಧೈರ್ಯಶೀಲರಾವ್ ಅವರ ಪತ್ನಿ ಆಶಾದೇವಿಯವರೂ ಕೂಡ ಬೇಡಗಕರ ಘೋರ್ಪಡೆ ಮನೆತನದವರಾಗಿದ್ದು, ಸುಶಿಕ್ಷಿತರೂ ಹೌದು. ಕಾಲೇಜು ಶಿಕ್ಷಣ ಪಡೆದ ಇವರು ಕಲೆ, ಸಾಹಿತ್ಯ ಮತ್ತು ಕ್ರೀಡೆಗಳಲ್ಲಿ ಅತಿಯಾದ ಆಸಕ್ತಿ ಹೊಂದಿದವರು. ಈಗಲೂ ಕೂಡ ಸಾಹಿತ್ಯ ಕೃತಿಗಳನ್ನು ಓದುತ್ತಾ ಸಮಯ ಕಳೆಯುತ್ತಿರುತ್ತಾರೆ. ಹಳೆಯ ಸಾಹಿತ್ಯ ಭರಿತ ಸಂಗೀತವೆಂದರೆ ಇವರಿಗೆ ಅತಿಯಾದ ಆಸಕ್ತಿ, ಕ್ರೀಡೆಗಳಲ್ಲಿ ಕ್ರಿಕೆಟ್ ಅಂದರೆ ಇವರಿಗೆ ಪಂಚಪ್ರಾಣ ಬರೋಡಾದ ಗಾಯಕವಾಡ ಮನೆತನದ ಪ್ರಭಾವ (ಮಾಜಿ ಕ್ರಿಕೆಟ್ ಪಟು ಅಂಶುಮನ್ ಗಾಯಕವಾಡ್ ಇದೇ ಮನೆತನಕ್ಕೆ ಸೇರಿದವರು) ಇರುವುದರಿಂದಲೇ ಕ್ರಿಕೆಟ್ ನಡೆಯುತ್ತಿರುವ ಸಂದರ್ಭದಲ್ಲಿ ದಿನವೀಡಿ ನೋಡುತ್ತಾ ಕುಳಿತುಕೊಳ್ಳುತ್ತಾರೆ.

ಆಟ ಮನರಂಜನೆಗಳೂ ಕೂಡ ಪವಾರ ದೇಸಾಯಿಗಳಿಂದ ಪ್ರೋತ್ಸಾಹ ಪಡೆದಿದ್ದವು. ಕುಸ್ತಿ, ಎತ್ತುಗಳ ಮತ್ತು ಎತ್ತಿನ ಬಂಡೆಗಳ ಸ್ಪರ್ಧೆಗಳಾಗಿದ್ದವು. ಇಂದಿನ ಕ್ರಿಕೆಟ್‌ಗೆ ಯಾವ ರಾಜಾಶ್ರಯ ದೊರೆತಿದೆಯೊ ಹಾಗೆಯೇ ಅಂದು ಕುಸ್ತಿಗೆ ಒಳ್ಳೆಯ ಪ್ರೋತ್ಸಾಹ ವಿದ್ದು. ಜನಪ್ರಿಯವಾದ ಕ್ರೀಡೆಯಾಗಿದ್ದಿತು. ಸಿದ್ದರಾಜ ಪವಾರ ದೇಸಾಯಿಯವರು ಸ್ವತ: ಕುಸ್ತಿಪಟುಗಳಾಗಿದ್ದರು, ಅಂದು ಇವರನ್ನು ಮೀರಿಸುವ ಶಕ್ತಿಯಾರಿಗೂ ಇರಲಿಲ್ಲವೆಂದೂ ತಿಳಿದು ಬರುತ್ತದೆ. ಸುತ್ತಲಿನ ದೂರದ ಊರುಗಳಿಂದ ಪೈಹಿಲ್ವಾನರು ಕುಸ್ತಿ ಪಂದ್ಯದಲ್ಲಿ ಭಾಗವಹಿಸುತ್ತಿದ್ದರು. ಅಂದು ಅಥಣಿ ತಾಲೂಕಿನ ಮಂಗಸೂಳಿ, ಅಥಣಿ, ಖಿಳೇಗಾಂವ, ಮದಭಾಂವಿ, ಕೊಕಟನೂರ, ಐಗಳಿ, ಹೀಗೆ ಹಲವಾರು ಗ್ರಾಮಗಳಲ್ಲಿ ಈ ಕುಸ್ತಿ ಪಂದ್ಯಗಳು ಜರುಗುತ್ತಿದ್ದವು. ಜನರೂ ಕೂಡ ಈ ಬಯಲು ಕುಸ್ತಿ ಪಂದ್ಯಗಳನ್ನು ನೋಡಲು ಬಹುಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಕೃಷಿ ಕಾರ್ಯಗಳು ಮುಗಿದ ಮೇಲೆ ರೈತರು ವಿಶ್ರಾಂತಿಯಿಂದಿರುವ ಸಂದರ್ಭಗಳಲ್ಲಿಯೇ ಹಬ್ಬ ಜಾತ್ರೆಗಳು ನಡೆಯುತ್ತಿದ್ದ ಆ ಸಂದರ್ಭಗಳಲ್ಲಿಯೇ ಈ ಪಂದ್ಯಗಳು ನಡೆಯುತ್ತಿದ್ದವು ಮಹಾರಾಷ್ಟ್ರದ ಕೊಲ್ಲಾಪುರ, ಸೋಲ್ಲಾಪುರ, ಮಿರಜ್, ಮೊದಲಾದ ನಗರಗಳಿಂದ ಕುಸ್ತಿಪಟುಗಳು ಈ ಪಂದ್ಯಗಳಲ್ಲಿ ಭಾಗವಹಿಸುತ್ತಿದ್ದರು, ಕುಸ್ತಿ ಪಂದ್ಯಗಳನ್ನು ನೋಡಲು ದೇಸಾಯಿಗಳು ಆಮಂತ್ರಿತರಾಗುತ್ತಿದ್ದರು. ಗೆದ್ದ ಪೈಹಿಲ್ವಾನರಿಗೆ ಬೆಳ್ಳಿ

ಕಡಗ, ಬೆಳ್ಳಿಯ ಗದೆಗಳನ್ನು ಬಹುಮಾನವಾಗಿ ನೀಡಲಾಗುತ್ತಿತ್ತಲ್ಲದೇ, ಸಮಾಧಾನಕರ ಬಹುಮಾನಗಳನ್ನು ನೀಡಿ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಸಿದ್ಧರಾಜ ದೇಸಾಯಿಯವರು ಹೀಗೆ ಒಂದು ಕುಸ್ತಿ ಪಂದ್ಯದಲ್ಲಿ ಕೋಲ್ಹಾಪುರದ ಪ್ರಸಿದ್ಧ ಪೈಹಿಲ್ವಾನನೊಬ್ಬನನ್ನು ಸೋಲಿಸಿ ಜನ ಮೆಚ್ಚುಗೆ ಪಡೆದಿದ್ದರೆಂಬುದನ್ನು ಅಲ್ಲಿಯ ಜನ ಇಂದಿಗೂ ನೆನಪಿನಲ್ಲಿಟ್ಟಿದ್ದಾರೆ. ಧೈರ್ಯಶೀಲರಾವ್ ಅವರೂ ಕೂಡ ಉತ್ತಮ ದೈಹಿಕ ಸಾಮರ್ಥ್ಯವನ್ನು ಹೊಂದಿದ್ದು, ಆದರೆ, ಅವರು ಕುಸ್ತಿಪಟುವಾಗಿಯೇ ಕ್ರೀಡಾ ಪ್ರೇಮಿಗಳಾಗಿದ್ದರು. ಕ್ರೀಡಾಳುಗಳಿಗೆ ಉದಾರ ಭಾವನೆಯಿಂದ ಪ್ರೋತ್ಸಾಹ ನೀಡುತ್ತಿದ್ದರೆಂದು ಅವರ ಕಾರಭಾರಿಯೊಬ್ಬರು ತಿಳಿಸುತ್ತಾರೆ. ಎತ್ತು-ಬಂಡೆಗಳ ಸ್ಪರ್ಧೆಯೂ ನಡೆಯುತ್ತಿದ್ದು ಸ್ಪರ್ಧೆಯಲ್ಲಿ ಗೆದ್ದ ಎತ್ತುಗಳಿಗೆ ವಿಶೇಷ ಬಹುಮಾನ ನೀಡಲಾಗುತ್ತಿತ್ತು. ಕಾರಹುಣ್ಣಿಮೆಯಂದು ಎತ್ತುಗಳ ಓಟವನ್ನು ಏರ್ಪಡಿಸಲಾಗುತ್ತಿತ್ತು. ಅದಕ್ಕೆಂದೇ ಸಾವಿರಾರು ರೂಪಾಯಿಗಳ ಹಣಕೊಟ್ಟು, ಬಲಿಷ್ಠ ಎತ್ತುಗಳನ್ನು ತರುತ್ತಿದ್ದರು. ಈ ಸ್ಪರ್ಧೆ ಆರಂಭವಾದ ಮೇಲೆ ದೇಸಾಯರ ಎತ್ತುಗಳನ್ನು ಬಿಡುತ್ತಿದ್ದರು. ಸುತ್ತಲಿನ ಗ್ರಾಮಗಳ ಎತ್ತುಗಳೂ ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದು. ಈ ಸ್ಪರ್ಧೆಯ ಮೊದಲಿಗೇ ಪವಾರ ದೇಸಾಯಿಯರ ಎತ್ತುಗಳು ಶೃಂಗರಿಸಿಕೊಂಡು ಬಂದು ಜನಸ್ತೋಮದ ಮಧ್ಯ ಓಡಿಸುತ್ತಿದ್ದರು. ಆ ಎತ್ತುಗಳನ್ನು ಹಿಡಿದವರಿಗೂ ಯೋಗ್ಯ ಬಹುಮಾನಗಳನ್ನು ಘೋಷಿಸಲಾಗುತ್ತಿತ್ತು. ಸ್ಪರ್ಧೆಗೆಂದೇ ಇಂತಹ ಬಲಿಷ್ಠ ಎತ್ತುಗಳನ್ನು ತಂದು ಸಾಕುತ್ತಿದ್ದರು. ಅಂದಿನ ಮನರಂಜನೆ ಮುಖ್ಯ ಸಾಧನವೆಂದರೆ ನಾಟಕ, ದೊಡ್ಡಾಟ, ಸಣ್ಣಾಟ, ನಾಟಕಗಳನ್ನು ಜನರು ಆಡುತ್ತಿದ್ದರು.

ಅಥಣಿ ಪ್ರದೇಶವು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವುದರಿಂದ ಸಹಜವಾಗಿಯೇ ಮರಾಠಿ ಭಾಷೆಯ ಪ್ರಧಾನ್ಯತೆಯನ್ನು ಕಾಣಬಹುದು ಪವಾರ ದೇಸಾಯಿಗಳ ಮಾತೃಭಾಷೆ ಮರಾಠಿ ಮನೆಯಲ್ಲಿ ಅವರು ಮರಾಠಿಯನ್ನೇ ಮಾತನಾಡುತ್ತಿದ್ದರು. ಹಾಗೆಂದು ಕನ್ನಡ ಭಾಷೆಯನ್ನು ನಿರ್ಲಕ್ಷಿಸಿರಲ್ಲಿಲ್ಲ. ಕನ್ನಡ ಭಾಷೆ - ಸಾಹಿತ್ಯದಲ್ಲಿ ಇವರಿಗೆ ಅಪಾರ ಗೌರವಿತ್ತು. ಅಂತೆಯೇ ಧೈರ್ಯಶೀಲರಾವ್ ಅವರು ಮಹಾಜನ್ ವರದಿಯನ್ನು ಪ್ರೋತ್ಸಾಹಿಸಿದರು. ಇವರ ಕಾಲದ ಕನ್ನಡ ಭಾಷೆಯಲ್ಲಿ ಮರಾಠಿ ಪ್ರಭಾವವನ್ನು ಕಾಣಬಹುದು, ಜನ ಸಾಮಾನ್ಯರ ಭಾಷೆಯೂ ಕನ್ನಡವಾಗಿದ್ದರೂ, ಮರಾಠಿಯನ್ನು ಮಾತನಾಡಲು ಮತ್ತು ತಿಳಿದುಕೊಳ್ಳುವವರಾಗಿದ್ದರು. ಇವರ ಅನೇಕ ಕಾಗದ ಪತ್ರಗಳು ಕನ್ನಡ ಮರಾಠಿ ಮತ್ತು ಇಂಗ್ಲೀಷ ಭಾಷೆಯಲ್ಲಿವೆ. ಹೊಲ-ಮನೆಗಳ ಬಾಡಿಗೆ ಪತ್ರ, ಸಾಲಪತ್ರಗಳು, ಕನ್ನಡದಲ್ಲಿಯೂ, ಇನ್ನು ಕೆಲವು ಮರಾಠಿಯಲ್ಲಿಯೂ ಇವೆ. ಬ್ರಿಟೀಷ ಅಧಿಕಾರದಲ್ಲಿ ಮಾತ್ರ ಹೊಲ -ಮನೆಗಳ ದಾಖಲೆ ಪತ್ರಗಳು ಇಂಗ್ಲೀಷ ಭಾಷೆಯಲ್ಲಿರುವುದನ್ನು ಕಾಣಬಹುದು. ಆಗ ಇಂಗ್ಲೀಷ ಭಾಷೆ ಪ್ರಾಧಾನ್ಯತೆ ಪಡೆದುಕೊಂಡಿತ್ತು ಹೀಗೆ ಕನ್ನಡ , ಮರಾಠಿ ಭಾಷೆಗಳು ಜನಸಾಮಾನ್ಯರ ಆಡುಭಾಷೆಗಳಾಗಿದ್ದವು.

ಸಾಕು ಪ್ರಾಣಿಗಳಲ್ಲಿ ಮುಖ್ಯವಾಗಿ ಎತ್ತುಗಳು, ಆಕಳು, ಎಮ್ಮೆ, ಕುರಿ, ಆಡು, ಕೋಳಿ, ನಾಯಿ, ಕುದುರೆ, ಕತ್ತೆ ಮೊದಲಾದವುಗಳು ಈ ಕಾಲದ ಮುಖ್ಯ ಸಾಕು ಪ್ರಾಣಿಗಳಾಗಿದ್ದವು. ಕೃಷಿ

ಕಾರ್ಯಕ್ಕಾಗಿ ಎತ್ತುಗಳನ್ನು ಬಹುಸಂಖ್ಯೆಯಲ್ಲಿ ಉಪಯೋಗಿಸುತ್ತಿದ್ದರು.

ಈಗಿನಂತೆ ಆಗ ಯಂತ್ರಗಳು ಕೃಷಿಕಾರ್ಯದಲ್ಲಿ ಬಳಕೆಯಾಗುತ್ತಿರಲಿಲ್ಲವಾದ್ದರಿಂದ ಎತ್ತುಗಳು, ಬಂಡಿಗಾಗಿ ಮತ್ತು ಕೃಷಿ ಕಾರ್ಯಕ್ಕಾಗಿ ಉಪಯೋಗಿಸಲ್ಪಡುತ್ತಿದ್ದವು. ಕುರಿ -ಆಡುಗಳು ಕೂಡ ಹೈನುಗಾರಿಕೆಯ ಪ್ರಾಣಿಗಳಾಗಿದ್ದರೂ, ಅವುಗಳನ್ನು ಮಾಂಸಕ್ಕಾಗಿ ಉಪಯೋಗಿಸುತ್ತಿದ್ದರು. ಪವಾರ ದೇಸಾಯಿಗಳು ಒಂದು ಬಲಿಷ್ಠವಾದ ಕುದುರೆಯನ್ನು ಹೊಂದಿದ್ದು ಅದನ್ನೇರಿ ವಿಹಾರಕ್ಕೆ ಅಥವಾ ಗ್ರಾಮಗಳಿಗೆ ಬೇಟಿ ನೀಡುತ್ತಿದ್ದರೆಂದು ತೋರುತ್ತದೆ. ತಮ್ಮ ಕುದುರೆಯ ಉಸ್ತುವಾರಿ ನೋಡಿಕೊಳ್ಳಲೆಂದೇ ಸೇವಕರನ್ನು ನೇಮಿಸಿಕೊಂಡಿದ್ದು ಇದೆ. ಅವರಿಗೆ 'ಜೂಡಿ' ಎಂಬ ಭೂಮಿಯನ್ನು ಉಂಬಳಿಹಾಕಿ ಕೊಡಲಾಗುತ್ತಿತ್ತು.

ಉಡುಗೆ ಆಭರಣಗಳಲ್ಲಿಯೂ ಅಂತಹ ಹೇಳಿಕೊಳ್ಳುವ ವ್ಯತ್ಯಾಸ ಕಾಣಲಾರವು ಜನ ಸಾಮಾನ್ಯರು ಸಾಧಾರಣ ಉಡುಪುಗಳನ್ನು ಧರಿಸುತ್ತಿದ್ದರು. ಧೋತಿ, ಜಬ್ಬಾ ಮತ್ತು ತಲೆಯ ಮೇಲೆ ಪೇಟಾ (ರುಮಾಲು) ಅಥವಾ ಟೋಪಿಗಳನ್ನು ಧರಿಸುತ್ತಿದ್ದರು. ಸಾಮಾನ್ಯ ಸ್ತ್ರೀಯರು ಸಾಧಾರಣ ಮಟ್ಟದ ಸೀರೆ -ಕುಪ್ಪಸಗಳನ್ನು ಧರಿಸುತ್ತಿದ್ದರು. ಹಬ್ಬ -ಜಾತ್ರೆ-ಉತ್ಸವಾದಿಗಳಂದು ಹೊಸ ಬಟ್ಟೆಗಳನ್ನು ಧರಿಸಿ ಹಬ್ಬಗಳನ್ನು ಆಚರಿಸುತ್ತಿದ್ದರು. ದೇಸಾಯಿಯರ ಮನೆತನಗಳಲ್ಲಿ ಬೆಲೆಬಾಳುವ ಬಟ್ಟೆಗಳನ್ನೇ ಧರಿಸುತ್ತಿದ್ದರು. ರೇಷ್ಮೆ ಬಟ್ಟೆಗಳು, ರೇಷ್ಮೆ ಪೇಟಾ, ವಸ್ತ್ರಗಳನ್ನು ಧರಿಸುತ್ತಿದ್ದರಲ್ಲದೇ ಗಾದಿ ಮಾಲಿಕರು ಸಾಂಪ್ರದಾಯಿಕವಾಗಿ ಬಂದ ಕೆಂಪು ರೇಷ್ಮೆಯ ಪೇಟದಂತೆ ಕಾಣುವ ಟೊಪ್ಪಿಗೆ, ಮೈತುಂಬಾ ರಾಜ ಪೋಷಾಕುಗಳನ್ನು ಧರಿಸುತ್ತಿದ್ದರು. ಭೋಜರಾಜ ಪವಾರ ದೇಸಾಯಿಯವರ ಛಾಯಾ ಚಿತ್ರದಲ್ಲಿ ಇದನ್ನು ಕಾಣಬಹುದು ಸಾಮಾನ್ಯವಾಗಿ ರೇಷ್ಮೆಯ ಉದ್ದನೆಯ ನಿಲುವಂಗಿ, ಪೈಜಾಮ ಕೈಯಲ್ಲಿ ಅಯುಧಯುಕ್ತ ದಂಡ ಇತ್ಯಾದಿ ದೇಸಾಯಿಯರ ಉಡುಗೆಗಳಾಗಿದ್ದವು.

ಆಭರಣಗಳ ಕುರಿತಂತೆ ಹೇಳಬೇಕೆಂದರೆ ಇವರು ರಾಜರು ಧರಿಸುತ್ತಿದ್ದಂತೆ ಮೈತುಂಬಾ ಚಿನ್ನದ ಆಭರಣಗಳನ್ನು ಧರಿಸುತ್ತಿದ್ದರು. ಸಾಂಪ್ರದಾಯಿಕವಾಗಿ ಕೈಯಲ್ಲಿ ಉಂಗುರ, ಚಿನ್ನದ ಜೈನು, ನಡು ಪಟ್ಟಿ, ಕಾಲಲ್ಲಿ ಚಿನ್ನದ ಕಡಗ, ಕೈಯಲ್ಲಿ ಕಡಗ ಮೊದಲಾದ ಆಭರಣಗಳನ್ನು ದೇಸಾಯಿಯರು ಧರಿಸುತ್ತಿದ್ದರು (೩). ಕಾಲ್ಗಡಗವನ್ನು ಪಟ್ಟ ಮಹೋತ್ಸವದಂದು ಧರಿಸಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ. ಸ್ತ್ರೀಯರೂ ಕೂಡ ಆಭರಣ ಪ್ರಿಯರಾಗಿದ್ದು, ಮರಾಠಾ ಸಂಪ್ರದಾಯದಂತೆ ಮಣ್ಣಿನಲ್ಲಿ ಕುಸುರಿ ಕೆಲಸದಿಂದ ಮಾಡಿದ ರಿಂಗು, ನೆಕ್ಲೆಸ್, ಬಟ್ಟೆಗಳು, ಚಿನ್ನದ ಸರಗಳು, ಉಂಗುರ, ತಲೆಯಲ್ಲಿ ಚಿನ್ನದ ಹೂವುಗಳು, ಕಿವಿಯೋಲೆ, ಮತ್ತು ಪಟ್ಟರಾಣಿ (ಹಿರಿಯ ಪತ್ನಿ) ಕಾಲಲ್ಲಿ ಬಂಗಾರದ ಕಡಗಗಳನ್ನು ಧರಿಸುತ್ತಿದ್ದಳೆಂದು ತಿಳಿದು ಬರುತ್ತದೆ. ಸೊಂಟ ಪಟ್ಟಿ, ಕಾಲ್ಗೆಜ್ಜೆ, ತೋಳ್ಬಂದಿಗಳನ್ನು

---

೩) ಈ ಮಾಹಿತಿಯನ್ನು ದೇಸಾಯಿ ಮನೆತನದ ಸ್ತ್ರೀಯರು ಕೊಟ್ಟ ವಿವರಣೆಯ ಮೇಲೆ ಸಂಗ್ರಹಿಸಲಾಗಿದೆ. ಮತ್ತು ಕೆಲವು ಹಳೆಯ ಆಭರಣಗಳನ್ನು ಅವರು ತೋರಿಸಿದರು. ದಿ:೧೧/೦೮/೨೦೦೮.

ದೇಸಾಯಿ ಮನೆತನದ ಸ್ತ್ರೀಯರು ಧರಿಸುತ್ತಿದ್ದರು. ಅದರಂತೆಯೇ ಜನಸಾಮಾನ್ಯರ ಆಭರಣಗಳು ಸಾಧಾರಣವಾಗಿದ್ದು ಚಿನ್ನ -ಬೆಳ್ಳಿಯಿಂದ ಮಾಡಿದ ಆಭರಣಗಳು ಅಂದರೆ ಸರ, ಮೂಗಿನ ನತ್ತು, ಕಿವಿಯೋಲೆ, ಬಳೆ, ಗೆಜ್ಜೆ ಮೊದಲಾದವುಗಳು ಅವರ ಆಭರಣಗಳಾಗಿದ್ದವು.

೩. ಆರ್ಥಿಕ ಸ್ಥಿತಿ :

(೧) ಕೃಷಿ ಮತ್ತು ನೀರಾವರಿ ವೈವಸ್ಥೆ :

ಮಂಗಸೂಳಿ ಪವಾರ ದೇಸಗತಿಯ ಆರ್ಥಿಕ ಸ್ಥಿತಿಯು ಸಮೃದ್ಧವಾಗಿತ್ತೆಂದು ತಿಳಿದು ಬರುತ್ತದೆ. ಕೃಷಿಯೇ ಆದಾಯದ ಮೂಲವಾಗಿತ್ತು. ಈ ದೇಸಗತಿಯ ಒಡೆತನದಲ್ಲಿ ಸುಮಾರು ೧೭೦೦೦ ಎಕರೆ ಜಮೀನು ೬೪ ಗ್ರಾಮಗಳನ್ನೊಳಗೊಂಡಿತ್ತು. ದೇಸಗತಿಯ ಉಗಮದ ಉದ್ದೇಶವು ಕಂದಾಯ ವಸೂಲಿಯೇ ಆಗಿದ್ದರಿಂದ ರಾಜ್ಯ ಬೊಕ್ಕಸಕ್ಕೆ ಇದರಿಂದ ವಿಫುಲವಾದ ಆದಾಯ ವಿದ್ದಿತು. ಈ ಅವಧಿಯಲ್ಲಿ ಕೃಷಿಗೊಳಪಟ್ಟ ಭೂಮಿಯು ಕಡಿಮೆಯೇ ಎಂದು ಹೇಳಬಹುದು. ಬಂಜರು ಭೂಮಿ, ಅರಣ್ಯ ಪ್ರದೇಶಗಳನ್ನು ಕೃಷಿಕರಿಗೆ, ಬಾರಾಬಲೂತಿ ದಾರರಿಗೆ 'ಜೂಡಿ' ಎಂದು ಉಂಬಳಿ ಬಿಡುತ್ತಿದ್ದರಿಂದಲೇ ಅವರು ಅದನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿದರು. ಈ ಕಾರಣದಿಂದಾಗಿಯೇ ಬಂಜರು ಪ್ರದೇಶವು ಕೃಷಿ ಜಮೀನಾಗಿ ಪರಿವರ್ತನೆಗೊಂಡಿತು. ಆರಂಭದಲ್ಲಿ ಮಳೆಯನ್ನಾಧರಿಸಿಯೇ ಕೃಷಿ ಸಾಗುವಳಿ ನಡೆಯುತ್ತಿದ್ದು, ವರ್ಷಕ್ಕೆ ಕೇವಲ ಒಂದು ಬೆಳೆಯನ್ನಷ್ಟೇ ಬೆಳೆಯಲಾಗುತ್ತಿತ್ತು. ಆದರೆ ನೀರಾವರಿಯ ವ್ಯವಸ್ಥೆ ಜಾರಿಗೊಂಡು ಅಥಣಿಯ ಬಹುಭಾಗವು ನೀರಾವರಿಗೊಳಪಡಲು ಕಾರಣೀಭೂತರಾದವರು ಧೈರ್ಯಶೀಲರಾವ್ ಪವಾರ ದೇಸಾಯಿಯವರು. ಶಾಸಕ -ಸಚಿವರಾಗಿ ಅಥಣಿಯ ನೀರಾವರಿ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಿದರು. ಇವರ ಪರಿಶ್ರಮದ ಫಲವಾಗಿ ತಾಲೂಕಿನ ಅನೇಕ ಗ್ರಾಮಗಳಲ್ಲಿ ಕೆರೆಗಳನ್ನು ನಿರ್ಮಿಸಿ, ಬ್ಯಾರೇಜ್‌ಗಳನ್ನು ನಿರ್ಮಿಸಿ ತಮ್ಮ ಪ್ರದೇಶ ಹಚ್ಚ ಹಸಿರಾಗುವಂತೆ ಮಾಡುವಲ್ಲಿ ಇವರ ಶ್ರಮ ಅಸಾಧರಣವಾದದ್ದು, ಅಥಣಿಯ ಪೂರ್ವಕ್ಕಿರುವ ಕೋಹಳ್ಳಿಯಲ್ಲಿ ಕರೆಯೊಂದನ್ನು ನಿರ್ಮಿಸಲು ಶ್ರಮಿಸಿದರು. ಅದು ಬೆಳಗಾಂವ ಜಿಲ್ಲೆಯಲ್ಲಿಯೇ ಅತೀ ದೊಡ್ಡದಾದ ಕೆರೆಯಾಗಿದೆ. ಇದರಿಂದ ಸುಮಾರು ಒಂದು ಸಾವಿರ ಎಕರೆಗಿಂತಲೂ ಅಧಿಕ ಭೂಮಿ ನೀರಾವರಿಗೊಳಪಟ್ಟಿತು. ಯಕ್ಕಂಚಿ, ಬಡಚಿ ಗ್ರಾಮಗಳ ಸಮೀಪದಲ್ಲಿಯೂ ಕೆರೆಗಳನ್ನು ನಿರ್ಮಿಸಿದ್ದಾರೆ. ಇದರಿಂದ ಅಲ್ಲಿಯ ರೈತರಿಗೆ ನೀರಾವರಿ ಅಳವಡಿಸಿಕೊಳ್ಳಲು ಅನುಕೂಲವಾಯಿತು. ತಮ್ಮ ಮೂಲ ನೆಲೆಯಾದ ಮಂಗಸೂಳಿಯಲ್ಲಿಯೇ ಸುಮಾರು ಎರಡು ಕೆರೆಗಳನ್ನು ನಿರ್ಮಿಸಿ ನೀರಾವರಿ ಅನುಕೂಲ ಕಲ್ಪಿಸಿದರು. ಮದಭಾಂವಿಯಲ್ಲಿಯೂ ಕೆರೆ ನಿರ್ಮಾಣಕ್ಕೆ ಅಸ್ತಿಭಾರ ಹಾಕಿದರು. ಇದು ೧೯೭೫ ರಲ್ಲಿ ಕಾರ್ಯಗತ ಗೊಂಡಿತು. ಇದಕ್ಕೆ ತಗುಲಿದ ವೆಚ್ಚ ೩೫.೭೮ ಲಕ್ಷ ರೂಗಳಾಗಿದ್ದು, ಉದ್ದ ೧.೬೨ ಕಿ.ಮೀ ಇದೆ. ಅದರಂತೆ ಅರಟಾಳ, ಚಮಕೇರಿ, ಅಡಹಳ್ಳಿ, ಕೊಕಟನೂರ ಹೀಗೆ ಮೊದಲಾದ ಗ್ರಾಮಗಳಲ್ಲಿ ಹತ್ತು ಹಲವು ಕೆರೆಗಳನ್ನು ನಿರ್ಮಿಸಿದರು. ಇವು ಕೆರೆಗಳೆಂದರೆ ಕೇವಲ ಚಿಕ್ಕ ಗಾತ್ರದವುಗಳಾಗಿರಲಿಲ್ಲ. ಮಳೆಯ ನೀರನ್ನು ಸಂಗ್ರಹಿಸಿ ವರ್ಷವಿಡೀ ನೀರಾವರಿ ಕೈಗೊಳ್ಳುವಷ್ಟು ನೀರು ಇವುಗಳಲ್ಲಿ ಶೇಖರಣೆಯಾಗುವಷ್ಟು ದೊಡ್ಡದಾಗಿದ್ದವು. ನೀರಾವರಿ ವ್ಯವಸ್ಥೆಗೆಂದೇ ಮತ್ತೊಂದು ಸಾಧನೆ ಎಂದರೆ ಹಲ್ಯಾಳ -ದರೂರ ಗ್ರಾಮಗಳ ಮಧ್ಯೆ ಕೃಷ್ಣಾ ನದಿಗೆ ದೊಡ್ಡ ಬ್ಯಾರೇಜ್‌ಮೊಂದನ್ನು ನಿರ್ಮಿಸಿದ್ದು ಅನಂತಪೂರ ಮತ್ತು

ಖಿಳೇಗಾಂವ ನಡುವಿನ ಸೇತುವೆ ನಿರ್ಮಾಣದ ಕೀರ್ತಿ ಧೈರ್ಯಶೀಲರಾವ್ ಅವರದು ಹೀಗೆ ಇವರು ನಿರ್ಮಾಣ ಮಾಡಿದ ಈ ಕಾರ್ಯಗಳು ಅವರು ರೈತರ ಮೇಲಿಟ್ಟಿದ್ದ ಅಭಿಮಾನವನ್ನು ತೋರಿಸುತ್ತಿದೆಯಲ್ಲದೇ ಇವರಿಂದ ಅಥಣಿ ಪ್ರದೇಶವು ೧/೪ ದಷ್ಟು ಭಾಗ ನಿರಾತಂಕವಾಗಿ ನೀರಾವರಿಗೊಳಪಟ್ಟು ರೈತರ ಆತ್ಮ ವಿಶ್ವಾಸವನ್ನು ಹೆಚ್ಚಿಸಿತು ಎಂದು ಅವರ ಆಪ್ತರೊಬ್ಬರು ಅಭಿಪ್ರಾಯಪಡುತ್ತಾರೆ. (೧)

ಇದಕ್ಕೂ ಪೂರ್ವದಲ್ಲಿ ಕೆಲವು ಭಾಗದಷ್ಟು ಭೂಮಿ ಮಾತ್ರ ಏತ ನೀರಾವರಿಯನ್ನಲಂಭಿಸಿತ್ತು. ಭಾವಿ, ಕೆರೆ -ಕಾಲುವೆಗಳಿಂದ ಮಾತ್ರ ಸ್ವಲ್ಪಭಾಗವು ನೀರಾವರಿಗೊಳಪಟ್ಟು ವರ್ಷಕ್ಕೆ ಎರಡು ಬೆಳೆಗಳನ್ನಾದರೂ ಬೆಳೆಯಲಾಗುತ್ತಿತ್ತು. ಒಂದೊಂದು/ಬರಗಾಲ ತಲೆದೋರಿದಾಗ ಬರುವ ಬೆಳೆಗಳೂ ಕೈಕೊಡುತ್ತಿದ್ದವು. ಹೀಗೆ ಒಮ್ಮೆ ಭೀಕರ ಬರಗಾಲ ತೋರಿದಾಗ ರೈತರು ಕಂದಾಯ ಕೊಡಲು ಅಸಮರ್ಥರಾಗಿದ್ದರು. ಸಿದ್ದರಾಜ ದೇಸಾಯಿಯವರು ರೈತರಿಂದ ಅನ್ಯಾಯವಾಗಿ ಯಾವುದೇ ತೆರನಾದ ಕಂದಾಯವನ್ನು ಒತ್ತಾಯ ಪೂರ್ವಕವಾಗಿ ವಸೂಲಿಮಾಡಲಿಲ್ಲವೆಂದು ತಿಳಿದುಬರುತ್ತದೆ. ಹೀಗೆ ರೈತರೇ ತಮ್ಮ ಉಸಿರು ಎಂದು ತಿಳಿದುಕೊಂಡಿದ್ದ ಮಂಗಸೂಳಿ ದೇಸಾಯಿಯವರು ರೈತರ ಬಗ್ಗೆ ಕಾಳಜಿಯನ್ನು ಹೊಂದಿದ್ದರು.

ಈ ಅವಧಿಯಲ್ಲಿ ಒಣ ಬೇಸಾಯ ಮತ್ತು ನೀರಾವರಿ ಪದ್ದತಿ ಇರುವುದರಿಂದ ಹಲವು ಬೆಳೆಗಳನ್ನು ಅಂದರೆ ಆಹಾರ ಧಾನ್ಯಗಳು ಮತ್ತು ವಾಣ್ಯಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಜೋಳ, ಬಿಳಿಜೋಳ, ಗೋದಿ, ಶೇಂಗಾ, ಕುಶಿಬಿ, ಅಗಸಿ, ಹುರುಳಿ ಗೆಲುವಿನ ಜೋಳ, ಹತ್ತಿ ಮೊದಲಾದ ಹತ್ತು -ಹಲವು ಬೆಳೆಗಳನ್ನು ಬೆಳೆಯಲಾಗುತ್ತಿತ್ತು; ೧೯೪೪ ರಲ್ಲಿ ತಾತ್ಯಾ ಕೇದಾರಿ ಎಂಬುವನು ೨೮-೧ ಭೂಮಿಯನ್ನು ಉಳುಮೆ ಮಾಡುತ್ತಿದ್ದು ಅದರಲ್ಲಿ ಜೋಳವನ್ನು ಬೆಳೆದು ಕಂದಾಯ ಅರ್ಪಿಸುತ್ತಿದ್ದನೆಂದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. (೨) ಅದರಂತೆ ಆಯಾ ಕ್ಷೇತ್ರಗಳ ಸರ್ವೆನಂಬರುಗಳನ್ನೊಳಗೊಂಡ ಭೂಮಿಯನ್ನು ಲಾವಣಿಗೆಂದು, ಬಾಡಿಗೆ ಮತ್ತು ಗೇಣಿಯಾಗಿ ನೀಡಿದ ವಿವರಗಳನ್ನು ನೋಡಬಹುದಾಗಿದೆ.

ಆದರೇ ದೇಸಾಯಿಗಳ ಸೋದರ ಪಡೆದಂತಹ (ಬಿರಾದಾರ) ಟೋಪಿಗೆ ಭೂಮಿಯನ್ನು ಅವರೇ ಅನುಭೋಗಿಸುತ್ತಿದ್ದರು. ಅದರಿಂದ ಗಾದಿಮಾಲಿಕರಿಗೆ ಯಾವುದೇ ರೀತಿಯಾದ ಕಂದಾಯ ಅನುಭೋಗಿಸುತ್ತಿದ್ದರು. ಆದರಿಂದ ಗಾದಿಮಾಲಿಕರಿಗೆ ಯಾವುದೇ ರೀತಿಯಾದ ಕಂದಾಯ ವಾಗಲೀ, ಬಾಡಿಗೆ ಯಾಗಲೀ ನೀಡುತ್ತಿರಲಿಲ್ಲ, ಅಂದಿನ ನಿಯಮದ ಪ್ರಕಾರ ಗಾದಿಮಾಲಿಕನು ಪೋಟಿಗೆಯನ್ನು

---

(೧) ಧೈರ್ಯಶೀಲರಾವ್ ಅವರ ಸ್ನೇಹಿತರಾದ ಶ್ರೀಯುತ ಸುಣದೋಳ್ಳಿ ಅವರು ಹೇಳುತ್ತಾರೆ.

(೨) ಹಲವು ರೈತರು ದೇಸಾಯಿಗಳಿಂದ ಭೂಮಿಯನ್ನು ಪಡೆದು ಬೇಸಾಯ ಮಾಡುತ್ತಿದ್ದರು ಆ ಕುರಿತು ಸರ್ವೆ ನಂಬರ, ಕ್ಷೇತ್ರ ಬೆಳೆಯುವ ಬೆಳೆಗಳ ಕುರಿತು ತಿಳಿಯಲು ಅನುಬಂಧದ ದಾಖಲೆಗಳು ಸಹಕಾರಿಯಾಗಿವೆ.

ತನ್ನ ತಮ್ಮಂದಿರು, ಮಲಸೋದರರು, ಮತ್ತು ಅವರ ಮುಂದಿನ ಮೂರು ಪೀಳಿಗೆಗಳವರೆಗೂ ಕೊಡಬೇಕಿತ್ತು. ಒಂದು ವೇಳೆ ಪೋಟಿಗೆ ಭೂಮಿಯನ್ನು ಮೂರು ಪೀಳಿಗೆಗಳವರೆಗೂ ಕೊಡಬೇಕಿತ್ತು. ಒಂದು ವೇಳೆ ಪೋಟಿಗೆ ಭೂಮಿಯನ್ನು ಮೂರು ಪೀಳಿಗೆಗಳಿಗಿಂತ ಹೆಚ್ಚು ಕೊಟ್ಟಿದ್ದಾರೆ. ಪ್ರತಿಯೊಬ್ಬ ಗಾದಿ ಮಾಲಿಕನಿಗೆ ಅತ್ಯಲ್ಪ ಭೂಮಿ ಮಾತ್ರ ಉಳಿಯುತ್ತಿತ್ತು. ಆದರೆ ತಲೆಮಾರಿಗೊಂದರಂತೆ ಭೂಮಿ ಕೊಡುವಂತೆ ನ್ಯಾಯಾಲಯಕ್ಕೆ ಮೊರೆ ಹೋದ ಉದಾಹರಣೆಗಳಿಲ್ಲ ವೆಂದೇ ಹೇಳಬೇಕು. ಏಕೆಂದರೆ ಆ ರೀತಿಯಾದ ಕಾನೂನು ಕೂಡ ಇಲ್ಲ. ಆದ್ದರಿಂದ ಅಂತಹ ಘಟನೆಗಳು ಈ ಮನೆತನದಲ್ಲಿ ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಹೀಗೆ ಪೋಟಿಗೆ ಭೂಮಿಯ ಕುರಿತಾಗಿಯೇ 'ಲಾ ರಿಪೋರ್ಟ' ನಲ್ಲಿ ಸ್ಪಷ್ಟವಾದ ನಿಯಮಾವಳಿಗಳಿವೆಯಾದ್ದರಿಂದ ಪ್ರತೀ ಬೀರಾದಾರನಿಗೂ ಪೋಟಿಗೆ ಭೂಮಿಯನ್ನು ಕೊಡಲು ಸಾಧ್ಯವಿರಲಿಲ್ಲ (೩) ಅಂದರೆ ಪೋಟಿಗೆಯನ್ನು ಪಡೆಯಯುವವರು ಗಾದಿ ಮಾಲಿಕನ ಹೊರತು ಅದರಲ್ಲಿ ತಮ್ಮ ಅಧಿಕಾರ ವಿರುವುದಿಲ್ಲ ವೆಂದೇ ಭಾವಿಸುತ್ತಿದ್ದರು. ಆದರೆ ತಮಗೆ ಹಿಸ್ಸೆ ಬೇಕೆಂದು ಬಯಸಿ ಈ ಅವಧಿಗಾಗಲೇ ಅನೇಕ ದೇಸಗತಿ ಮನೆತನದವರು ನ್ಯಾಯಾಲಯಕ್ಕೆ ದಾವೆ ಮಾಡಿದ್ದರು. ಆದರೆ ಅವರ ಮನವಿಯನ್ನು ನ್ಯಾಯಾಲಯ ಪುರಷ್ಕರಿಸಲಿಲ್ಲ. ಈ ಎಲ್ಲಾ ಕಾರಣಗಳಿಂದಲೂ ಅವರು ನ್ಯಾಯಾಲಯದ ಕಟ್ಟೆ ಹತ್ತಲಿಲ್ಲ. ಒಂದು ವೇಳೆ ದೇಸಾಯಿಯರ ಸೋದರರು ಪೋಟಿಗೆ ಪಡೆಯಲು ನಿರಾಕರಿಸಿದ್ದರೂ ಕೂಡ ಅವರಿಗೆ ಹಿಸ್ಸೆಯೆಂದೂ ಸಿಗುತ್ತಿರಲಿಲ್ಲ. ಆದ್ದರಿಂದ ಅವರು ಕೊನೆಗೆ ಪೋಟಿಗೆಯನ್ನಾದರೂ ಪಡೆದು ಸಂತೃಪ್ತಿ ಹೊಂದುತ್ತಿದ್ದರು ಆ ರೀತಿ ಪೋಟಿಗೆ ಪಡೆದವರು ಸಾಮಾನ್ಯವಾಗಿ ಮಾಲಿಕನ ಜೊತೆಗೆ ಇರದೇ ತಾವೇ ಪ್ರತ್ಯೇಕವಾದ ಮನೆ ಮಾಡಿಕೊಂಡು ವಾಸಿಸುತ್ತಿದ್ದರು. ಆದರೆ ಮದುವೆ ಯಾಗುವವರೆಗೂ ಅವನ ಮನೆಯಲ್ಲಿಯೇ ಇರಬಹುದಿತ್ತು ಕೆಲವು ವೇಳೆ ಗಾದಿ ಮಾಲಿಕರೇ ಅವರ ವಿವಾಹವನ್ನು ನೆರವೇರಿಸಿ ಅವರಿಗೆ ಬೇರೆ ಮದುವೆ ಮಾಡಿಕೊಡುತ್ತಿದ್ದರು. ಹೀಗೆ ಪೋಟಿಗೆ ಪಡೆದವರು ಭೂಮಿಗೆ ಮಾತ್ರ ಹಕ್ಕುದಾರರೇ ಹೊರತು ಅದರ ಮಾಲಿಕರಲ್ಲವೆಂದು ತಿಳಿಯಬೇಕಿತ್ತು ಹೀಗೆ ಮಂಗಸೂಳಿ ಪವಾರ ದೇಸಾಯಿಗಳಲ್ಲಾದ ಇಂತಹ ಅನೇಕ ಉದಾಹರಣೆಗಳನ್ನು ನೀಡಬಹುದು ೧೯೫೦ ರಲ್ಲಿ ಶ್ರೀ ಮೋರಾರ್ಜಿ ದೇಸಾಯಿಯವರ ಮುಂಬಯಿ ಮುಖ್ಯ ಮಂತ್ರಿಯಾದಾಗ ಪರಗಣ ಮತ್ತು ಕುಲಕರ್ಣಿ ಪದ್ದತಿ ರದ್ದತಿಯ ಶಾಸನವನ್ನು ಹೊರಡಿಸಿದ ಮೇಲಂತು ಜೇಷ್ಠ ಪುತ್ರಾಧಿಕಾರ ರದ್ದಾಗಿ ಆಸ್ತಿಯೆಲ್ಲಾ ಎಲ್ಲ ಮಕ್ಕಳಲ್ಲಿ ಹಂಚಿ ಹೋಗುತ್ತದೆ ಇದರಿಂದ ಪೋಟಿಗೆ ಮತ್ತು ವತನ ಪದ್ದತಿ ನಾಶವಾಗುತ್ತದೆ. (೪).

---

(೩) Indian law report culcuttk No. XXXIX, PP. 256-259

(೪) Taluka Office Records, Athani Maharastra State Gazetteer, Part-II PP-568 - 79

(೨) ಲೆಕ್ಕ ಪತ್ರ ವಿಭಾಗ :

ಮಂಗಸೂಳಿ ಪವಾರ ದೇಸಾಯಿಯವರ ಅರ್ಥವ್ಯವಸ್ಥೆಯಲ್ಲಿ ಒಂದು ವ್ಯವಸ್ಥಿತಿ ಲೆಕ್ಕ ಪತ್ರ ವಿಡುವ ಪದ್ಧತಿಯನ್ನು ಕಾಣಬಹುದು . ಇದು ಮರಾಠಾ ಪೇಶ್ವೆಗಳ ಪ್ರಭಾವವೆಂದರೂ ಸರಿಯೇ. ೧೩ ನೇ ಗಾದಿ ಮಾಲಿಕರಾದ ಸಿದ್ದರಾಜ ದೇಸಾಯಿಯವರು ಇಂತಹ ವ್ಯವಸ್ಥೆಗೆ ಒತ್ತು ನೀಡಿದ್ದರು. ಈ ವ್ಯವಸ್ಥೆ ೧೯೧೮ ರಲ್ಲಿಯೇ ಅಸ್ತಿತ್ವದಲ್ಲಿದ್ದರೂ ಕೂಡ ಅದರಲ್ಲಿ ಅವ್ಯವಸ್ಥೆ ಇತ್ತು ಎನ್ನುವುದಕ್ಕಿಂತ ಅದರ ದುರುಪಯೋಗವಾಯಿತೆಂದೇ ಹೇಳಬಹುದು. ಏಕೆಂದರೆ ಕೃಷಿ ಭೂಮಿಯನ್ನು ಲಾವಣಿ ಎಂದಾಗಲೀ ಅಥವಾ ಬಾಡಿಗೆ ಎಂದಾಗಲೀ ಪಡೆದ ರೈತರು ಕೆಲವು ಸಾರಿ ಮೋಸ ಮಾಡುತ್ತಿದ್ದರು ಬಾಡಿಗೆ ಕೊಡದೇ ಇದ್ದರೂ ಕೂಡ ಕೊಟ್ಟೆವೆಂದು ಹೇಳುತ್ತಿದ್ದರು ಇದರಿಂದ ಅರ್ಥ ವ್ಯವಸ್ಥೆಯೂ ದುಸ್ಥಿತಿಗೆ ತಲುಪವ ಲಕ್ಷಣಗಳು ಮೂಡಿಬಂದವು. ಇದನ್ನು ಹೋಗಲಾಡಿಸಲು ಕಾರಕೂನನಿಗೆ ಸಲಹೆ ಮಾಡಿದರೂ ಕೂಡ ಅದು ಅಷ್ಟು ಪರಿಣಾಮಕಾರಿಯಾಗಲೇ ಇಲ್ಲ. ಏಕೆಂದರೆ ದೇಸಾಯಿಯವರು ಕೂಡ ರೈತರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಾದರು. ಕಾರಣ ಅವರು ಮೃದು ಸ್ವಭಾವದವರಿದ್ದು ರೈತರ ಮೇಲೆ ಅಪಾರ ಪ್ರೀತಿ ವಿಶ್ವಾಸ ವಿರಿಸಿಕೊಂಡಿದ್ದರು. ಅದಕ್ಕೆ ಧಕ್ಕೆ ಬರಬಾರದೆಂದೊ ಏನೋ ಅವರು ಗೊತ್ತಿದ್ದೂ ಸುಮ್ಮನಿರುತ್ತಿದ್ದರು. ಮುಂದೆ ೧೪ ನೇ ಗಾದಿ ಮಾಲಿಕರಾದ ಭೋಜರಾಜ ದೇಸಾಯಿಯವರು ಅಂತಹ ಅವಘಡಗಳಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಲೆಕ್ಕ ಪತ್ರಗಳನ್ನಿಡಲು ಆರಂಭಿಸಿದರು. ಪ್ರತಿ ಹೊಲದ ಹೆಸರು. ಊರಿನ ಹೆಸರು , ಅದರ ಸರ್ವೆ ನಂಬರು, ಭೂಮಿಯ ವಿಸ್ತೀರ್ಣ, ಅದರ ಸ್ವರೂಪ , ಮೊದಲಾದ ಮಹತ್ವದ ಅಂಶಗಳನ್ನು ದಾಖಲಿಸುತ್ತಿದ್ದರಲ್ಲದೇ. ಯಾವ ಗ್ರಾಮದ. ಯಾವ ಹೊಲವನ್ನು ಯಾರ ಹೆಸರಿಗೆ ಅಂದರೆ ಯಾವ ರೈತನಿಗೆ ನೀಡಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸುತ್ತಿದ್ದರು. ೧೯೪೨ ರಲ್ಲಾಗಲೇ ಇದನ್ನು ವ್ಯವಸ್ಥಿತವಾಗಿ ಜಾರಿಗೆ ತಂದರಲ್ಲದೇ ಹೊಲಗಳ ಉತಾರಗಳನ್ನು ಕೂಡ ಕಾಯ್ದಿರಿಸಿದರು. ಯಾವ ರೈತ , ಯಾವ ಜಮೀನಿನಲ್ಲಿ , ಎಷ್ಟು ಎಕರೆ ಮತ್ತು ಯಾವ ಯಾವ ಬೆಳೆಗಳನ್ನು ಬೆಳೆದನೆಂಬುದನ್ನು ಕೂಡ ನಮೂದಿಸುತ್ತಿದ್ದರಲ್ಲದೇ ವಾರ್ಷಿಕ ಖರ್ಚು-ವೆಚ್ಚಗಳ ಕುರಿತಾಗಿಯೂ ಆಯ-ವ್ಯಯ (Budget) ವನ್ನು ರೂಪಿಸಿದರು. ೧೯೪೪ ರ ಸುಮಾರಿಗೆ ವಾರ್ಷಿಕವಾಗಿ ಎಷ್ಟು ಆದಾಯ ಬಂದಿತು ಮತ್ತು ಎಷ್ಟು ಖರ್ಚಾಯಿತೆಂದು ಸ್ಪಷ್ಟವಾಗಿ ಉಲ್ಲೇಖಿಸುವ ಪದ್ಧತಿ ಜಾರಿಗೊಳಿಸಿದ್ದರಿಂದ ಯಾವ ರೈತನಾಗಲೀ ಈ ರೀತಿ ಮೋಸ ಮಾಡಲು ಆಸ್ಪದ ನೀಡಲಿಲ್ಲ ಹೀಗಿದ್ದಾಗ್ಯೂ ಕೂಡ ಹಲವಾರು ರೈತರು ಮುಂಬಯಿ ಹೈಕೋರ್ಟನಲ್ಲಿ ದಾವೆ ಹೂಡಿದ್ದನ್ನು ನೋಡಬಹುದು. (೫) ಏಕೆಂದರೆ ವಾರ್ಷಿಕವಾಗಿ ಕೊಡುವ ಲಾವಣೆಗೆ ಸಂಬಂಧಿಸಿದಂತೆ ಇದೇ ರೀತಿಯ ವಿವಾದ ದಿಂದಾಗಿ ಹಲವಾರು ರೈತರ ವಿರುದ್ಧವಾಗಿ ಕೂಡ ನ್ಯಾಯಾಲಯಗಳ ಮೊರೆ ಹೋಗಬೇಕಾಯಿತು. ಇದರರ್ಥ ಬೋಜರಾಜ ಅವರಿಗೆ ರೈತರ

(೫) Bombay Law Bulletion appeal No. 433 of 1940; 445 of 1943.

ಬಗ್ಗೆ ಕಳಕಳಿ ಇರಲಿಲ್ಲ ವೆಂದರ್ಥವಲ್ಲ. ಆದರೆ ಮೋಸ ವಂಚನೆಗಳಿಗೆ ಅವರು ಆಸ್ಪದ ನೀಡುತ್ತಿರಲಿಲ್ಲವೆಂದೇ ಹೇಳಬಹುದು. ಆದರೂ, ಕೊಡಲು ತಾವು ಅಸಮರ್ಥರಾಗಿದ್ದೇವೆ. ತಮ್ಮಲ್ಲಿ ಆ ಶಕ್ತಿ ಇಲ್ಲ. ಸಂಪೂರ್ಣ ಬರಗಾಲ ಇಲ್ಲವೇ ಅತೀವೃಷ್ಟಿಯಾಗಿದೆ "ಎಂದು ಹೇಳಿದ ರೈತರನ್ನಂತೂ ಒಂದು ಪೈಸೆಯನ್ನು ಕೇಳುತ್ತಿರಲಿಲ್ಲ ಅಂತಹ ಉದಾಹರಣೆಗಳೂ ಕೂಡ ಸಾಕಷ್ಟು ಸಿಗುತ್ತವೆಂದು ತಿಳಿಯುತ್ತದೆ. (೬) ತಮ್ಮ ವಾಡೆ - ಜಮೀನುಗಳಲ್ಲಿ ಕೆಲಸ ಮಾಡುವ ಆಳುಗಳಿಗೂ ಕೂಡ ಕಟ್ಟುನಿಟ್ಟಿನ ಕ್ರಮಗಳನ್ನು ವಿಧಿಸುತ್ತಿದ್ದರು. ಅವರಲ್ಲಿಯೂ ಶಿಸ್ತು ನಿಯಮ ಪಾಲನೆಗೆ ಮಾತ್ರ ಪ್ರೋತ್ಸಾಹ ನೀಡುತ್ತಿದ್ದರು. ಯಾವುದೇ ಕಾರಣಕ್ಕೂ ಅವರು ಅವಿಧೇಯರಾಗಿ ನಡೆಯುವಂತೆಯೂ ಅಥವಾ ಕೆಲಸಕ್ಕೆ ತಡವಾಗಿ ಬರುವುದಾಗಲೀ ಅಥವಾ ಬೇಗ ಹೋಗುವುದಾಗಲೀ ಮಾಡಲು ಅವಕಾಶ ನೀಡುತ್ತಿರಲಿಲ್ಲ ಭೋಜರಾಜ ಅವರು ಪ್ರತಿವಾರ ತಿಂಗಳುಗಳ ಲೆಕ್ಕದಲ್ಲಿ ಪ್ರತಿ ಆಳಿನ ಹೆಸರು ವಾರ ಆತನು ಕೆಲಸಕ್ಕೆ ಬಂದ ವಿವರಗಳನ್ನು ಕ್ರಮಬದ್ಧವಾಗಿ ಬರೆದಿಡಲು ಹಾಜರಿ ಪುಸ್ತಕ ಆರಂಭಿಸಿದರು (೭) ಯಾವುದೇ ಆಳು ಗೈರುಹಾಜರಾದರೆ ಅತನ ಹೆಸರಿನ ಮುಂದೆ ಮತ್ತು ವಾರ ದಿನ ಸಮೇತವಾಗಿ ಒಂದು ಗೆರೆಯನ್ನು ಎಳೆಯಲಾಗುತ್ತಿತ್ತು ಆತನು ಹಾಜರಾದರೆ ಮುಂದೆ ಒಂದು (?) ಎಂಬ ಅಂಕಿಯನ್ನು ಬರೆದು ಆ ವಾರ ಎಷ್ಟು ದಿನ ದುಡಿದಿದ್ದಾನೆ ಎಂದು ಒಟ್ಟಾರೆ ಲೆಕ್ಕ ಬರೆದು ಆ ಪ್ರಕಾರವಾಗಿಯೇ ಕೂಲಿಯನ್ನು ನೀಡುತ್ತಿದ್ದರು. ಕೂಲಿ ನೀಡುವಾಗ ಪ್ರತಿಯೊಬ್ಬ ಆಳಿನ ಹೆಸರಿನ ಮುಂದೆ ಸಹಿ ಮಾಡಿಸಿಕೊಳ್ಳಲಾಗುತ್ತಿತ್ತು ಇದು ೧೫ ನೇ ಗಾಡಿ ಮಾಲಿಕರಾದ ಧೈರ್ಯಶೀಲರಾವರ ಅವರ ಕಾಲದಲ್ಲಿ ಅಚ್ಚುಕಟ್ಟಾಗಿ ಜಾರಿಗೊಂಡಿತು. (೮)

ಕೆಲಸಕ್ಕೆ ಬರುವ ಆಳುಗಳಿಗೆ ಒಂದು ಶಿಸ್ತಿನ ಕ್ರಮವನ್ನು ವಿಧಿಸಲಾಗಿತ್ತು ಅವರು ಯಾವುದೇ ಕಳುವು ಮಾಡುವುದಾಗಲೀ ಅಥವಾ ಸುಳ್ಳು ಹೇಳುವುದನ್ನಾಗಲೀ ಬೋಜರಾಜರು ಸಹಿಸುತ್ತಿರಲಿಲ್ಲ. ಒಂದು ವೇಳೆ ಅವರಿಗೆ ಅನಾರೋಗ್ಯ ಕಾಡಿದರೆ ಅವರನ್ನು ಸ್ವತಃ ವೈದ್ಯರಿಂದ ಪರೀಕ್ಷೆಗೊಳಪಡಿಸುತ್ತಿದ್ದರು. ಅವರ ಆರೋಗ್ಯದ ಖರ್ಚನ್ನು ಕೂಡ ಅವರೇ ಭರಿಸುತ್ತಿದ್ದುದನ್ನು ನೋಡಿದರೆ ಕೂಲಿಗಳ ಮೇಲೂ ಕೂಡ ಅವರು ಎಂತಹ ಕಾಳಜಿ ವಹಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಅವರಿಗೆನಾದರೂ ತೊಂದರೆಯಾದರೂ ಕೂಡ ಅವರನ್ನು ಮತ್ತೇ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಿರಲಿಲ್ಲ. ಜೊತೆಗೆ ಅವರ ಸಂಬಳವನ್ನು ಧಾರಾಳವಾಗಿಯೇ ನೀಡುತ್ತಿದ್ದರು. ಯಾವುದೇ ಕಾರಣಕ್ಕೂ ಕೂಲಿಗಳಿಗೆ ಸಂಬಳವನ್ನು ಮಾತ್ರ ತಡೆಹಿಡಿಯುತ್ತಿರಲಿಲ್ಲ.

ವಾಡೆಯಲ್ಲಿದ್ದ ಪ್ರತಿಯೊಂದು ಸಾಮಾನು ಅಂದರೆ ಕೃಷಿಗೆ ಸಂಬಂಧಿಸಿದ ಸಲಕರಣೆಗಳು

---

(೬) ದೇಸಾಯಿಯರ ಕಾರಭಾರಿ

(೭) ಮರಾಠಿ ದಾಖಲೆಯನ್ನಾಧರಿಸಿ ಅದನ್ನು ಅನುಬಂಧದಲ್ಲಿ ನೀಡಲಾಗಿದೆ.

(೮) ಇಂತಹ ಹಲವು ದಾಖಲೆಗಳನ್ನು ಅನುಬಂಧದಲ್ಲಿ ಆಧಾರವಾಗಿ ನೀಡಲಾಗಿದೆ, ಹಾಜರಿ ಪುಸ್ತಕಗಳು ಸಾಕಷ್ಟು ದೊರೆತಿದ್ದು ಅವುಗಳ ಪ್ರತಿಗಳನ್ನು ಅನುಬಂಧದಲ್ಲಿ ಉಲ್ಲೇಖಿಸಲಾಗಿದೆ.

ಅಡಿಗೆ, ಬೆಳ್ಳಿ - ಬಂಗಾರದ ಸಾಮಾನುಗಳು ವಸ್ತ್ರ ವೈಖರಿಗಳನ್ನೆಲ್ಲ ಕುರಿತಂತೆ ಲೆಕ್ಕ ಪತ್ರಗಳನ್ನಿಡುತ್ತಿದ್ದರೆ, ಅದಕ್ಕೋಸ್ಕರವೇ ಒಬ್ಬನನ್ನು ನೇಮಿಸಿಕೊಂಡಿದ್ದರು. ಆತನು ಪ್ರತೀ ಸಾಮಾನುಗಳ ಕುರಿತಂತೆ ಕಾಲಕಾಲಕ್ಕೆ ಸರಿಯಾದ ಪತ್ರಗಳನ್ನಿಡಬೇಕಿತ್ತು. ಯಾವುದೇ ಒಂದು ಸಾಮಾನು ಅಲ್ಲಿಂದ ಕದಲಿದರೆ ಅದನ್ನು ತಕ್ಷಣವೇ ಗ್ರಹಿಸುತ್ತಿದ್ದ ಭೋಜರಾಜರು ಆ ಕುರಿತು ಕೇಳಿಯೇ ಬಿಡುತ್ತಿದ್ದರು. ಅಂತಹ ಬುದ್ಧಿಶಕ್ತಿ ಅವರಲ್ಲಿತ್ತು. ಈ ಕಾರಣದಿಂದಲೇ ವಾಡೆಯಲ್ಲಿ ಯಾವುದೇ ರೀತಿಯ ಅವಘಡಗಳಾಗುತ್ತಿರಲಿಲ್ಲ. ಆ ಕಾರಣಕ್ಕಾಗಿಯೇ ಲೆಕ್ಕ - ಪತ್ರಗಳನ್ನು ಇಡುವ ಪದ್ಧತಿಯನ್ನು ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದರೆಂದು ತಿಳಿಯುತ್ತದೆ. ಹೀಗೆಯೇ ೧೯೩೫ ರಲ್ಲಿ ಮಂಗಸೂಳಿ ವಾಡೆಯಲ್ಲಿನ ಎಲ್ಲ ಸಾಮಾನುಗಳನ್ನು ಒಂದೆಡೆ ಇಡಿಸಿ ಅವುಗಳ ವರ್ಗೀಕೃತ ಪಟ್ಟಿಯನ್ನು ಮಾಡಲಾಯಿತು ಮತ್ತು ಅವುಗಳನ್ನು ಕಾಯ್ದಿರಿಸಿದ ಸ್ಥಳಗಳಲ್ಲಿಯೇ ಇಡಬೇಕಿತ್ತು. ಅವುಗಳಿಗೆ ಸಂಖ್ಯೆಗಳನ್ನು ನೀಡಿ ಪುಸ್ತಕದಲ್ಲಿ ನಮೂದಿಸಲಾಯಿತು. ಎಲ್ಲಾ ಸಾಮಾನುಗಳನ್ನು ಒಂದೆಡೆ ಇಡಿಸಿ ಅವುಗಳ ವರ್ಗೀಕೃತ ಪಟ್ಟಿಯನ್ನು ಮಾಡಲಾಯಿತು ಮತ್ತು ಅವುಗಳನ್ನು ಕಾಯ್ದಿರಿಸಿದ ಸ್ಥಳಗಳಲ್ಲಿಯೇ ಇಡಬೇಕಿತ್ತು ಅವುಗಳಿಗೆ ಸಂಖ್ಯೆಗಳನ್ನು ನೀಡಿ ಪುಸ್ತಕದಲ್ಲಿ ನಮೂದಿಸಲಾಯಿತು. ಯಾರು ಯಾವ ಸಾಮಾನುಗಳನ್ನು ಒಯ್ಯುತ್ತಾರೋ ಆಗ ಸಹಿ ಮಾಡಿ ಒಯ್ಯಬೇಕು ಮತ್ತು ತಿರುಗಿ ಅದು ಇದ್ದ ಸ್ಥಳದಲ್ಲಿಯೇ ಇಟ್ಟು ಮತ್ತೇ ಹಾಗೆ ಸಹಿ ಮಾಡಬೇಕಿತ್ತು ಪ್ರತಿ ವರ್ಷ ಅವುಗಳ ಎಣಿಕೆ ಮಾಡಲಾಗುತ್ತಿತ್ತು. ಭೋಜರಾಜರ ಈ ಕೌಶಲ್ಯ ಮತ್ತು ವ್ಯವಹಾರ ಚತುರತೆಯಿಂದಲೇ ಈ ದೇಸಗತಿಯ ಆದಾಯ ಹೆಚ್ಚಿತಲ್ಲದೇ ಬ್ರಿಟಿಷರು ಇವರನ್ನು 'ಸರ್ದಾರ್ ಆಫ್ ಡೆಕ್ಕನ್' ಎಂಬ ಬಿರುದನ್ನು ನೀಡಿದ್ದರು.

ದೈನಂದಿನ ಲೆಕ್ಕಪತ್ರದಲ್ಲಿಯೂ ಇಲ್ಲಿ ವ್ಯವಸ್ಥಿತತೆಯನ್ನು ಕಾಣುತ್ತೇವೆ. ಪ್ರತಿ ದಿನ ಲೆಕ್ಕವನ್ನು ಆ ದಿನವೇ ಮಾಡಬೇಕೆಂದು ಕಾರಕೂನರಿಗೆ ಆದೇಶಿಸಲಾಗಿತ್ತು. ಕಾರಕೂನನು ಬರೆದ ಲೆಕ್ಕವನ್ನು ಪರಿಶೀಲಿಸಿ ಅದನ್ನು ಧೃಡಪಡಿಸಿ ಅದಕ್ಕೆ ರುಜು ಹಾಕುತ್ತಿದ್ದರು. ಅದರಂತೆ ಉಗ್ರಾಣಗಳಲ್ಲಿ ಸಂಗ್ರಹಿಸಿಟ್ಟಿರುವ ಧಾನ್ಯಗಳ ಕುರಿತಾಗಿಯೂ ಲೆಕ್ಕಪತ್ರಗಳನ್ನು ಇಡಲಾಗುತ್ತಿತ್ತು. ಈ ಪೂರ್ವದಲ್ಲಿ ಉಗ್ರಾಣದಲ್ಲಿದ್ದ ಧಾನ್ಯಸಂಗ್ರಹವೆಷ್ಟು, ವ್ಯಯವಾದ ಧಾನ್ಯವೆಷ್ಟು ಮತ್ತು ಯಾರಿಗೆ ಎಷ್ಟು ನೀಡಲಾಯಿತೆಂದು ಕೂಡಾ ಕಾರಕೂನನು ಲೆಕ್ಕವನ್ನು ಇಡಬೇಕಿತ್ತು. ಇದರೊಂದಿಗೆ ಮೇವಿನ ಕುರಿತಾಗಿಯೂ ಲೆಕ್ಕವನ್ನು ಇಡುತ್ತಿದ್ದರು. ದನ, ಮೇವು, ಆಹಾರ ಧಾನ್ಯಗಳು ಮೊದಲಾದವುಗಳನ್ನು ನೋಡಿಕೊಳ್ಳಲು ಕೊತ್ವಾಲರನ್ನು ನೇಮಿಸಿದ್ದರು. (೯). ಇವುಗಳು ಒಂದು ವೇಳೆ ಏನಾದರೂ ನಷ್ಟವಾದರೂ ಸ್ವತ: ಆತನೇ ದಂಡ ಭರಿಸಬೇಕಿತ್ತು. ಇದು ಆತನೆಂದೂ ನಿರ್ಲಕ್ಷ್ಯ ತೋರದಿರಲೆಂದೇ ಎಂಬುದಾಗಿತ್ತು.

೧೯೫೦ ರಲ್ಲಿ ಭೋಜರಾಜ ಅವರು ಮರಣ (೧೦) ಹೊಂದಿದ ಮೇಲೆ ಧೈರ್ಯಶೀಲರಾವ್

---

(೯) ಹಳಕಟ್ಟಿ ಫ. ಗು. (ಸಂ) ಶಿವಾನುಭವ ನಂ. ೨೦. ಪು. ೩೦-೩೨

ಅವರು ತಂದೆಯ ಈ ಎಲ್ಲ ಅಚ್ಚುಕಟ್ಟತೆಯನ್ನು ಮುಂದುವರೆಸಿಕೊಂಡು ಬಂದರು ತಂದೆಯ ಕಾಲದಲ್ಲಿಯೇ ಈ ವ್ಯವಸ್ಥೆಯ ಅರಿವಿದ್ದ ಧೈರ್ಯಶೀಲ್‌ರಾವ ಅವರದು ತಂದೆಯಂತೆ ಬಿಗಿ -ಭದ್ರತೆಯನ್ನು ಪಾಲಿಸಲು ಮಹತ್ವತೆಯನ್ನು ನೀಡಲಿಲ್ಲ ಇವರು ಉದಾರವಾದಿಗಳಾಗಿದ್ದರಿಂದ ಯಾರ ತಪ್ಪನ್ನು ದೊಡ್ಡದಾಗಿ ಪರಿಗಣಿಸುತ್ತಿರಲಿಲ್ಲ, ತಮ್ಮ ಮನಬಂದಂತೆ ದಾನ-ಧರ್ಮ ಕಾರ್ಯಗಳನ್ನೇ ನಿರ್ವಹಿಸಿಕೊಂಡು ಬಂದರು. ಆದರೂ ಸಂಪ್ರದಾಯದಂತೆ ನಡೆದುಕೊಂಡು ಬಂದ ಲೆಕ್ಕಪತ್ರವನ್ನು ಗಮನಿಸಿ ಆ ಕುರಿತು ತಮ್ಮ ಕಾರಕೂನರೊಂದಿಗೆ ಚರ್ಚಿಸುತ್ತಿದ್ದರು. ಯಾರಿಗಾಗಲಿ ಕಾಣಿಕೆ ನೀಡಲಿ, ದಾನ ನೀಡಲಿ, ಆ ಬಗ್ಗೆ ದಾಖಲೆಯನ್ನು ಇಡುವುದು ವಾಡಿಕೆ ಯಾಗಿತ್ತು. ತಾವು ರೈತರಾದ್ದರಿಂದಲೇ ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ ಇವರು ಮೊದ ಮೊದಲು ನಿರ್ಲಕ್ಷ್ಯ ಭಾವನೆ ತೆಳೆದು ಯಾವುದೇ ಲೆಕ್ಕ ಪತ್ರಗಳಿಲ್ಲದೇ ಮನೆ ಭೂಮಿಯನ್ನು ಬಾಡಿಗೆಗೆ ನೀಡುತ್ತಿದ್ದರು. ಆದರೆ ರೈತರು ಮೋಸ ಮಾಡುವದನ್ನರಿತ ಇವರು ನಂತರ ಲೆಕ್ಕ ಪತ್ರ ಮುಂಖಾಂತವೇ ವ್ಯವಹಾರಗಳನ್ನು ಪ್ರಾರಂಭಿಸಿದರು. ಇವರು ವ್ಯವಹಾರ ಚತುರರಾಗಿದ್ದಾಗ್ಯೂ ಕೂಡಾ ಪ್ರತಿ ವಿಷಯವನ್ನು ವ್ಯಾಪಾರಿ ದೃಷ್ಠಿಕೋನದಲ್ಲಿ ಅಳೆಯುತ್ತಿರಲಿಲ್ಲ. ತಂದೆಗಿಂತಲೂ ಇವರು ಕೊಡುಗೈ ವೀರರೆಂದೆ ಹೇಳಬಹುದು. ಇವರು ಕೂಡಾ ಧನ- ಧಾನ್ಯಗಳು, ಜಮೀನು, ಕೂಲಿಗಳೂ, ರೈತರಿಗೆ ನೀಡಿದ ಮನೆ ಬಾಡಿಗೆ, ಜಮೀನು ಬಾಡಿಗೆ, ಅವರಿಂದ ಪಡೆದ ಧಾನ್ಯ ಅಥವಾ ಹಣ ಯಾವ ಜಮೀನಿನಲ್ಲಿ ಯಾವ ಬೇಳೆಯನ್ನು ಎಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು ಎಂದು ಕ್ರಮಬದ್ಧವಾದ ಲೆಕ್ಕ ಪತ್ರವನ್ನಿಡುತ್ತಿದ್ದರು.

ಧೈರ್ಯಶೀಲರಾವ್ ಅವರ ಕಾಲದ ಇಂತಹ ಲೆಕ್ಕ ಪತ್ರಗಳನ್ನು ಈ ಕೆಳಗಿನಂತೆ ವಿವರಿಸಬಹುದು :

೧)	ತಂಗಡಿ ಕುರಣದ ಜೋಳ	-	೫೩ ಚೀಲ
೨)	ರಾಮು ಸಾಳುಂಕೆ -ನಮ್ಮ ಪಾಲಿನ ಜೋಳ-		೨೧ ಚೀಲ - ೩ ಬುಟ್ಟಿ
೩)	ಮುರಗುಂಡಿ ಸ್ವಂತ ಕಮತದ ಜೋಳ ಪಂಡಿತ ಗುಡಜೀ ದಂಡಿಯ	-	೨೮ ಚೀಲ
೪)	ತಂಗಡಿ ಕಮತದ ಜೋಳ	-	೧೩ ಚೀಲ - ೨ ಬುಟ್ಟಿ
೫)	ಮುರಗುಂಡಿ ಕಮತದ ಜೋಳ ಜೈಧರ ಹತ್ತಿ ನೆಲದಲ್ಲಿ ೧೦-೦೪-೧೯೭೫	-	೧೮ ಚೀಲ - ೩ ಬುಟ್ಟಿ

ಒಟ್ಟು - ೧೩೩ ಚೀಲ =೭ ಬುಟ್ಟಿ (೧೧)

ಇದು ದೇಸಾಯಿ ಮನೆತನದವರ ಅಚ್ಚುಕಟ್ಟತೆಯನ್ನು ತಿಳಿಸುತ್ತದೆ ಅಲ್ಲದೇ ಅತಿ ಚಿಕ್ಕ

---

(೧೦) ಭೋಜರಾಜರ ಮರಣ ಪ್ರಮಾಣ ಪತ್ರವನ್ನು ಅನುಬಂಧದಲ್ಲಿ ನೋಡಬಹುದು.

ಅಂಶವನ್ನು ಕಡೆಗಣಿಸದೇ ಅದನ್ನು ಲೆಕ್ಕ ಇಡುವ ವಾಡಿಕೆ ಮೊದಲಿನಿಂದಲೂ ಬೆಳೆದು ಬಂದಿತ್ತು ಇಂತಹ ವೈವಸ್ಥೆ ಸಮಕಾಲಿನ ದೇಸಗತಿ ಮನೆತನಗಳಲ್ಲಿ ಅಪರೂಪವೆಂದೇ ಹೇಳಬಹುದು. ಹೀಗೆ ದಿನಾಂಕಗಳ ಸಮೇತ ಯಾವ ದಿನ, ಯಾವ ವೈಕ್ತಿಯ ಮೂಲಕ, ಎಲ್ಲಿಗೆ, ಎಷ್ಟು ಕಳುಹಿಸಲಾಯಿತೆಂದು ಸ್ಪಷ್ಟವಾಗಿ ನಮೂದಿಸಲಾಗುತ್ತಿತ್ತು. ಎಲ್ಲಿಯಾದರೂ ಹೆಚ್ಚು ಕಡಿಮೆ ಯಾದರೆ ಅಲ್ಲಿ ಪ್ರಶ್ನಾರ್ಥಕ ಚಿಹ್ನೆ ಇಟ್ಟು ಕಾರಕೂನರಿಗೆ ವಿವರಣೆ ಕೇಳಲಾಗುತ್ತಿತ್ತು. ಯಾವ ಹೊಲದಿಂದ ಎಷ್ಟು ಬಂತು, ಎಷ್ಟು ಖರ್ಚಾಯಿತೆಂದು, ನಮೂದಿಸುವ ಪದ್ದತಿಯಿಂದ ಯಾರಿಗೂ ಮೋಸ ಮಾಡುವುದು ಸ್ವಲ್ಪ ಕಷ್ಟವೇ ಆಗಿತ್ತು. ಇದರಿಂದ ಆರ್ಥಿಕ ಸಮೃದ್ಧಿಗೂ ಕಾರಣವಾಯಿತು ಅದರಂತೆ ಗೋಧಿ ಮತ್ತು ಗೋದಿ ಹುಲ್ಲಿನ ಲೆಕ್ಕ ಪತ್ರವನ್ನು ಈ ರೀತಿ ನೋಡಬಹುದು.

೪೯೦೦ ಗೋದಿ ಹುಲ್ಲು ಆಗಿರುತ್ತದೆ.

(ಬಹಳವಾಗಿ ಇದು ಪೆಂಡಿಗಳ ಅಥವಾ ಕಟ್ಟುಗಳ- - ಲೆಕ್ಕ ಇರಬೇಕು)

೪ ಚೀಲ ಕಡ್ಲಿ ಆಗಿರುತ್ತದೆ ೧ ಚೀಲ ಕೃಷ್ಣನಿಗೆ

.... ಸಾಹೇಬರಿಗೆ

ಗೋದಿ

ಸಾಹೇಬರಿಗೆ			ಕೃಷ್ಣನಿಗೆ
೨೮ ಬುಟ್ಟಿ	೧೬	ಪಾಯಲ್ಲಿ	೪ ಬುಟ್ಟಿ
-	೧೦	ಪಾಯಲಿ ರಾಶಿ ಭಾನಕ್ಕೆ	
	೨೮	ಬುಟ್ಟಿ ೬ ಪಾಯಲಿ	

ಇದರಲ್ಲಿ ದೇಸಾಯಿಯರ ಪಾಲನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ :

ಸಾಹೇಬರದು

೪ ಚೀಲ ಹೊಲ ಗೋದಿ ಆಗಿರುತ್ತದೆ (ಮಾರಿರುತ್ತದೆ ೨೩/೦೮/೭೫)

೭ ಪೈಲಿ ಬೀಜವನ್ನು ಕಲ್ಲಪ್ಪ ಸಾವಕಾರ ನಮ್ಮ ತಿರುಗಿ ಕೊಟ್ಟಿರುತ್ತದೆ.

೧/೨ ಚೀಲ (ಯೂರಿಯಾ ಚೀಲ) ದಸಗೀರ ಕಡಾಂವಿ ಈತನ ಕಡೆಯಲ್ಲಿ ಹೊಲ ಗೋದಿಯನ್ನು ಬೀಜಕ್ಕೆ ಇಟ್ಟಿರುತ್ತದೆ.

೫ ಚೀಲ ಸಾಹೇಬರದು ಕುಸಿಬಿ ಆಗಿರುತ್ತದೆ.

೧/೨ ಚೀಲ ಕುಸಿಬಿ ಬೀಜಕ್ಕೆ ಇಟ್ಟಿರುತ್ತದೆ.

೬ ಚೀಲ ಕುಸಿಬಿ ಮಾರಿರುತ್ತದೆ. ೧೧/೦೪/೭೫ (ವಾಡೆಗೆ ಕಳಿಸಿದ್ದು)

೧ ಸಿಮೆಂಟ ಚೀಲ ಕಡ್ಲಿಯನ್ನು ಅಥಣಿ ವಾಡೆಗೆ ಕಳಿಸಿರುತ್ತದೆ.

---

(೧೧) ಮುರಗುಂಡಿ ಮತ್ತು ತಂಗಡಿಯ ಜಮೀನಿನ ಜೋಳದ ಲೆಕ್ಕ ಪತ್ರ

ಇದರಂತೆಯೇ ಹಲವಾರು ಲೆಕ್ಕ ಪತ್ರಗಳ ಕಡತಗಳನ್ನು ಉದಾಹರಿಸಬಹುದಾಗಿದೆ. ಅವರ ಜಮೀನು ೧೭೦೦೦ ಎಕರೆಗಳಷ್ಟು ಇದ್ದುದರಿಂದ ಕೇವಲ ನೆನಪಿನಲ್ಲಿಟ್ಟು ಕೊಳ್ಳುವುದು ಅಷ್ಟು ಸುಲಭವಲ್ಲ, ಆದ್ದರಿಂದಲೇ ಪ್ರತಿ ವ್ಯವಹಾರಗಳನ್ನು ಈ ರೀತಿ ಲೆಕ್ಕ ಪತ್ರಗಳ ಮೂಲಕ ಬರೆದಿಡಲಾಗುತ್ತಿತ್ತು. ಆಯಾ ವರ್ಷದ ಆದಾಯ - ವೆಚ್ಚಗಳ ಕುರಿತು ಪೂರ್ವ ನಿರ್ಧರಿತವಾಗಿಯೇ ಆಯವ್ಯಯವನ್ನು ರೂಪಿಸಿ ಅದರಂತೆ ಖರ್ಚು ವೆಚ್ಚಗಳನ್ನು ಮಾಡಲಾಗುತ್ತಿತ್ತೆಂಬ ಅಂಶ ಗಮನಾರ್ಹವಾಗಿದ್ದು ಅದು ಮೊದಲಿನಿಂದಲೂ ಅಸ್ತಿತ್ವದಲ್ಲಿತ್ತೆಂದು ತಿಳಿದು ಬರುತ್ತದೆ. (೧೨).

ಇದೆಲ್ಲ ಜಮೀನಿನಿಂದ ಬರುವ ಆದಾಯವಾದರೆ ಇನ್ನು ಕೆಲವು ಮನೆಯ ಬಾಡಿಗೆಯ ಮೂಲಕವೂ ಮಂಗಸೂಳಿ ದೇಸಾಯಿಯವರಿಗೆ ಅಧಿಕ ಆದಾಯ ಬರುತ್ತಿತ್ತೆಂದು ತಿಳಿದು ಬರುತ್ತದೆ. ಆರಂಭದಲ್ಲಿ ಅಂದರೆ ಭೋಜರಾಜ ದೇಸಾಯಿ ಮತ್ತು ಅವರ ಪೂರ್ವಜರು ಮನೆಗಳ ಮೇಲೆ ಬಾಡಿಗೆ ವಿಧಿಸುತ್ತಿರಲಿಲ್ಲ ನಂತರದಲ್ಲಿ ಪತ್ರಬರೆಯಿಸಿಕೊಂಡೇ ಮನೆಯನ್ನು ಬಾಡಿಗೆ ನೀಡಲಾಗುತ್ತಿತ್ತು. ಬಾಡಿಗೆಯನ್ನೂ ಕೂಡ ಅತ್ಯಂತ ಕಡಿಮೆ ದರದಲ್ಲಿಯೇ ನೀಡಲಾಗುತ್ತಿತ್ತೆಂದು ಇಲ್ಲಿ ಉಲ್ಲೇಖಿಸಿದ ಪತ್ರವೊಂದರಿಂದ ತಿಳಿಯಬಹುದು. (೧೩).

ಅದರಂತೆ ಸಾಲಪತ್ರಗಳನ್ನು ಕೂಡ ಬರೆಸಿಕೊಳ್ಳುವ ಪದ್ದತಿ ಇದ್ದು ಕೊಟ್ಟ ಸಾಲಕ್ಕೆ ಯಾವುದೇ ರೀತಿಯಾದ ಬಡ್ಡಿಯನ್ನು ಸ್ವೀಕರಿಸುತ್ತಿರಲಿಲ್ಲ. ಕೊಟ್ಟ ಹಣಕ್ಕೆ (ಸಾಲಕ್ಕೆ) ಭದ್ರತೆ ಸಿಗಲೆಂದು ಈ ರೀತಿ ಸಾಲ ಪತ್ರಗಳನ್ನು ಬರೆದಿಡುತಿದ್ದರು. ಉದಾಹರಣೆಗೆ ಇಲ್ಲಿ ಒಂದು ಪತ್ರದ ವಿವರಗಳನ್ನು ನೋಡಬಹುದು. (೧೪).

ಕೃಷಿ ವ್ಯವಸಾಯದೊಂದಿಗೆ ಅದಕ್ಕೆ ಹೊಂದಿಕೊಂಡಂತೆ ಅನೇಕ ಉಪ ಕಸಬುಗಳು ಅಸ್ತಿತ್ವದಲ್ಲಿದ್ದು ಅವರೆಲ್ಲ ತಮ್ಮ ತಮ್ಮ ವೃತ್ತಿಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಹೀಗೆ ಅಸ್ತಿತ್ವದಲ್ಲಿದ್ದ ವೃತ್ತಿಗಳೆಂದರೆ ಬಡಿಗ, ಕಮ್ಮಾರ, ಚಮ್ಮಾರ, ಕುಂಬಾರ, ಮಡಿವಾಳ, ಜೋಶಿ ಮೊದಲಾದವರು. ಬಡಿಗನು ತನ್ನ ವೃತ್ತಿಗೆ ಪ್ರತಿರೂಪವಾಗಿ ಜೂಡಿಯನ್ನು, ಇನ್ನೂ ಕೆಲವು ಸಮಯದಲ್ಲಿ 'ಆಯ' ವನ್ನು ಪಡೆಯುತ್ತಿದ್ದನು. ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ರೈತರಿಗೆ ಒದಗಿಸುವ ವೃತ್ತಿ ಈತನದಾಗಿತ್ತು. ಅದರಂತೆ ಕಮ್ಮಾರನು ಕೂಡ ಆಯುಧಗಳನ್ನು ಮಾಡುವ ಮತ್ತು ಕೃಷಿಗೆ ಉಪಕರಣಗಳನ್ನು ಒದಗಿಸುತ್ತಿದ್ದನು. ಚಮ್ಮಾರನು ಕೂಡ ಚರ್ಮದ ಸಲಕರಣೆಗಳನ್ನು ಮತ್ತು ಪಾದರಕ್ಷೆಗಳನ್ನು ಮಾಡುವ ವೃತ್ತಿಯನ್ನಾಧರಿಸಿ ತನ್ನ ಜೀವನವನ್ನು ಸಾಗಿಸುತ್ತಿದ್ದನು. ಇವರು ಕೆಲವು ಸಮಯದಲ್ಲಿ ಭೂಮಿ (ಜೂಡಿ) ಯನ್ನು ಪಡೆದು ಅದರಲ್ಲಿ ತಮ್ಮ ಜೀವನ ಸಾಗಿಸುತ್ತಿದ್ದರಲ್ಲದೆ ಇನ್ನೂ ಕೆಲವು ಸಮಯದಲ್ಲಿ ವಾರ್ಷಿಕವಾಗಿ 'ಆಯ' ಎಂದು ಧಾನ್ಯಗಳ

---

(೧೨) ಧೈರ್ಯಶೀಲರಾವ್ ಅವರ ಆಪ್ತ ಸಹಾಯಕ ಶ್ರೀ ಸುಣದೋಳಿ ಅವರ ಸಂಗ್ರಹದಿಂದ

(೧೩) ಬಾಡಿಗೆಯ ಹಲವು ಪತ್ರಗಳು. ಅವುಗಳಲ್ಲಿ ಇದೊಂದು. ಅನುಬಂಧದಲ್ಲಿ ಉಲ್ಲೇಖಿಸಿದೆ.

(೧೪) ಅವರ ವಾಡೆಯಲ್ಲಿ ದೊರೆತ ಸಾಲ ಪತ್ರಗಳನ್ನು ಉಲ್ಲೇಖಿಸಿ ಅನುಬಂಧದಲ್ಲಿ ಕಾಣಿಸಲಾಗಿದೆ.

ರೂಪದಲ್ಲಿ ತಮ್ಮ ವೃತ್ತಿ ಫಲವನ್ನು ಪಡೆಯುತ್ತಿದ್ದರು.

ಮಂಗಸೂಳಿ ದೇಸಗತಿಗಳ ಕಾಲದಲ್ಲಿ ಅಲ್ಲಿಯ ವ್ಯಾಪಾರ ವಹಿವಾಟು ಕೂಡ ಅಷ್ಟೇ ಸಮೃದ್ಧವಾಗಿತ್ತು. ತಾವು ಬೆಳೆದ ಆಹಾರ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳನ್ನು ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಿದ್ದರು. ವಾರ್ಷಿಕವಾಗಿ ತಮ್ಮ ಉಪ ಜೀವನಕ್ಕೆ ಬೇಕಾಗುವಷ್ಟು ಧಾನ್ಯಗಳನ್ನು ಇಟ್ಟುಕೊಂಡು ಉಳಿದದ್ದನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಜೋಳ, ಗೋದಿ, ಶೇಂಗಾ, ಗೋವಿನ ಜೋಳ, ಹತ್ತಿ, ಕುಸುಬಿ ಮೊದಲಾದ ಧಾನ್ಯಗಳನ್ನು ಅಥಣಿ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬಿಜಾಪೂರ ಮತ್ತು ಹೊರರಾಜ್ಯಗಳ ಮೀರಜ ಸಾಂಗಲಿ, ಕೋಲ್ಹಾಪೂರ ಮತ್ತು ಸೋಲ್ಲಾಪೂರಗಳಲ್ಲಿಯ ಮಾರುಕಟ್ಟೆಗಳಿಗೆ ವಹಿವಾಟು ಮಾಡುತ್ತಿದ್ದರು. ಸೋಲ್ಲಾಪೂರ ಮಾರುಕಟ್ಟೆಯು ಹತ್ತಿ ವ್ಯಾಪಾರಕ್ಕೆ ಪ್ರಸಿದ್ಧಿಯನ್ನು ಪಡೆದುಕೊಂಡಿತ್ತು.

ಪ್ರಾಚೀನಕಾಲದಿಂದಲೂ ವ್ಯಾಪಾರ ವಹಿವಾಟು ನಡೆಯುತ್ತಿದ್ದುದು ಎತ್ತಿನ ಬಂಡೆಗಳ ಮತ್ತು ಪ್ರಾಣಿಗಳ ಮೂಲಕ ಸರಕುಗಳನ್ನು ಸಾಗಿಸಲಾಗುತ್ತಿತ್ತು. ಈ ಅವದಿಯಲ್ಲಿ ಈಗಿನಂತೆ ರಸ್ತೆ, ವಾಹನಗಳ ಸೌಲಭ್ಯ ವಿರಲಿಲ್ಲ ವಾದ್ದರಿಂದ ಹೆಚ್ಚಾಗಿ ಎತ್ತಿನ ಬಂಡೆಗಳ ಮೂಲಕವೇ ವ್ಯಾಪಾರವನ್ನು ನಡೆಸಲಾಗುತ್ತಿತ್ತು.

ಹೀಗೆ ಮಂಗಸೂಳಿ ಪವಾರ ದೇಸಾಯಿಗಳ ಒಡೆತನದಲ್ಲಿ ಕೃಷಿ ಸಮೃದ್ಧಿಯನ್ನು ಪಡೆದು ವ್ಯಾಪಾರ- ವಾಣಿಜ್ಯವು ಹೆಚ್ಚಿ ಆರ್ಥಿಕ ಸಮೃದ್ಧಿಗೆ ಕಾರಣವಾಗಿತ್ತು.

೩) ಕಂದಾಯ ವ್ಯವಸ್ಥೆ :

ದೇಸಗತಿಗಳಲ್ಲಿನ ಜಮೀನುಗಳು ರೈತವಾರಿ ಪದ್ದತಿಯನ್ನವಲಂಬಿಸಿದ್ದವು. ಸರಕಾರವು ಸರಪಳಿಯಿಂದ (ಸೌಕಳಿ) ಭೂಮಿಯನ್ನು ಅಳೆಯುವ ವ್ಯವಸ್ಥೆಯನ್ನು ಜಾರಿಗೊಳಿಸಿತ್ತು. ಈ ಸರಪಳಿಗೆ 'ತನಾಬ್' ಎಂದು ಕರೆಯುತ್ತಿದ್ದರು. ಭೂ ಮಾಪನ ಮಾಡುವ ಕಾರ್ಯವು ಕಂದಾಯ ಇಲಾಖೆಗೆ ಸೇರಿದ್ದಾಗಿತ್ತು. ಭೂಮಿಯ ಫಲವತ್ತತೆಯ ಅನುಗುಣವಾಗಿ ಕೃಷಿ ಭೂಮಿಯನ್ನು ಸ್ತರವಾಗಿ ವಿಭಾಗಿಸಿ ಆ ಪ್ರಕಾರವಾಗಿಯೇ ಕಂದಾಯವನ್ನು ನಿಗದಿಗೊಳಿಸಲಾಗಿತ್ತು. ಹೀಗೆ ಭೂಮಿಯ ಫಲವತ್ತತೆಯಿಂದ ಕೂಡಿದ್ದು ಮತ್ತು ನೀರಾವರಿಗೊಳಪಟ್ಟಿದ್ದರೆ. ಸಾಮಾನ್ಯವಾಗಿಯೇ ಅಂತಹ ಕೃಷಿ ಭೂಮಿಯ ಕಂದಾಯವು ಹೆಚ್ಚಿದ್ದಿತು. ಏಕೆಂದರೆ ಅಂತಹ ಪ್ರದೇಶದಲ್ಲಿ ಹೆಚ್ಚು ಉತ್ಪನ್ನ ಬರುತ್ತದೆಯಲ್ಲದೇ ವರ್ಷಕ್ಕೆ ಕಡಿಮೆ ಎಂದರೂ ಎರಡು ಬೆಳೆಗಳನ್ನಾದರೂ ಬೆಳೆಯಲಾಗುತ್ತಿತ್ತು. ಫಲವತ್ತತೆ ಅನುಸಾರವಾಗಿ ೧/೧೦ ದಿಂದ ೧/೨ ದಷ್ಟು ಭಾಗದವರೆಗೆ ಕಂದಾಯ ವಸೂಲಿ ಮಾಡಲಾಗುತ್ತಿತ್ತು (೧) ಆದರೆ ಮಂಗಸೂಳಿ ಪವಾರ ದೇಸಾಯಿಗಳು ಹೆಚ್ಚು ಜನ ಪ್ರೀತಿಗೆ ಕಾರಣರಾದದ್ದು. ರೈತರಿಗೆ ತೆರಿಗೆ ಭಾರ ಹೇರದೇ ಕಡಿಮೆ ತೆರಿಗೆಯನ್ನು ವಸೂಲಿ ಮಾಡುತ್ತಿದ್ದುದು ಆಗಿದೆ ಇದರೊಂದಿಗೆ ಜಾಗೀರು, ಇನಾಂ, ಅಗ್ರಹಾರ ಮತ್ತು ವಕ್ಫ್‌ಗಳಂತಹ ತೆರಿಗೆ ಪದ್ದತಿಯೂ ಜಾರಿಯಲ್ಲಿತ್ತು, ಸರಕಾರಕ್ಕೆ ಯುದ್ಧದಿಂದ ಗೆದ್ದು ಅಥವಾ ಕೊಳ್ಳೆಹೊಡೆದು ತಂದ ಸಂಪತ್ತು.

ಕಪ್ಪು ಕಾಣಿಕೆ, ತೆರಿಗೆಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ರಾಜನಿಗೆ ದೊರೆಯುತ್ತಿದ್ದ ಕಾಣಿಕೆಗಳೂ ಸೇರಿದ್ದವು.

ಕ್ರಿ.ಶಕ ೧೮-೧೯ ನೇ ಶತಮಾನದಲ್ಲಿ ಅಥಣಿಯ ಹಲವು ಭಾಗವು ಕೃಷಿ ಸಾಗುವಳಿ ಭೂಮಿಯಾಗಿರಲಿಲ್ಲ ಕಾರಣ ಅಲ್ಲಿ ಯಾವುದೇ ನೀರಾವರಿ ವ್ಯವಸ್ಥೆಯೂ ಇರಲ್ಲಿಲ್ಲ. ಬರಡು ಭೂಮಿಯಾಗಿದ್ದರಿಂದ ಕೃಷಿ ಜಮೀನು ವಿಸ್ತಾರವಾಗಿರಲ್ಲಿಲ್ಲವೆಂದು ತೋರುತ್ತದೆ. ಇಂತಹ ಬರಡು ಭೂಮಿಯನ್ನು ಕೃಷಿ ಭೂಮಿಗೆ ಪರಿವರ್ತಿಸುವದಕ್ಕೋಸ್ಕರ ಅದನ್ನು ''ಜೂಡಿ'' ಹಾಕಿಕೊಡಲಾಯಿಂತೆಂದು ತಿಳಿದು ಬರುತ್ತದೆ. ಸುಮಾರು ೧೮೮೦ ರಲ್ಲಿ ಸುಮಾರು ಹತ್ತಕ್ಕಿಂತಲೂ ಹೆಚ್ಚು ಗ್ರಾಮಗಳು ಪೂರ್ಣ ಇನಾಂಮನು ಮಂಗಸೂಳಿ ದೇಸಾಯರು ಪಡೆದಿದ್ದರೆಂದು ತಿಳಿದುಬರುತ್ತದೆ.

ಇಂತಹ ಆಡಳಿತ ವ್ಯವಸ್ಥೆಯು ಬ್ರಿಟಿಷ ಕಾಲದಲ್ಲಿಯ ಹೊಸ ವ್ಯವಸ್ಥೆಯೇನೂ ಆಗಿರಲ್ಲಿಲ್ಲ. ಇದು ಶಿವಾಜಿಯ ಕಾಲದಲ್ಲಾಗಲೀ ಅಸ್ತಿತ್ವದಲ್ಲಿದ್ದು, ಅಲ್ಲಿಂದ ಬ್ರಿಟಿಷರ ಈಸ್ಟ ಇಂಡಿಯಾ ಕಂಪನಿಯು ಅದನ್ನು ಮುಂದುವರೆಯಿಸಿಕೊಂಡು ಬಂದಿತು. ಪೇಶ್ವೆಗಳ ಕಾಲಕ್ಕೆ 'ಮಾಮ್ಲದಾರ' ಎಂದು ನೇಮಿಸಲಾಗುತ್ತಿದ್ದ, ಇವರನ್ನು ಪರಗಣೆಯ ಮುಖ್ಯಸ್ಥನೆಂದು ಪರಿಗಣಿಸಲಾಗುತ್ತಿತ್ತು. (ಅನುಬಂಧದಲ್ಲಿ

---

(೧) Bombay (Province) Land Revencce Act Part-II Page -18 (Code-1879)

ಅಥಣಿ ತಾಲೂಕಿನ ಅಲಿನೇಷನ ದಾಖಲೆ ನೀಡಲಾಗಿದೆ.) ದೇಸಾಯಿಯ ಇಚ್ಛೆಯಂತೆ ನೇಮಕಗೊಂಡ ಈತನಿಗೆ ತೆರಿಗೆ ವಸೂಲಿ ವಿಷಯಕ್ಕೆ ಸಂಬಂಧಿಸಿದಂತೆ ವಿಶಾಲ ಅಧಿಕಾರಗಳಿದ್ದವು. ಈತನಿಗೆ ತಿಂಗಳಿಗೆ ೧೮೦೦ ದಿಂದ ೩೦೦೦ ರೂ. ವರೆಗೆ ಸಂಬಳ ನೀಡಲಾಗುತ್ತಿತ್ತು. ಯಾವುದೇ ವತನ ಭೂಮಿಯ ರಜಿಸ್ಟರ ಪತ್ರಗಳ ಈತನ ಮುಖಾಂತರವೇ ರವಾನಿಸಲ್ಪಡುತ್ತಿದ್ದವು.

೧೮೫೪ ರಷ್ಟೊತ್ತಿಗಾಗಲೇ ಬ್ರಿಟಿಷರು ಭಾರತದಲ್ಲಿ ಪ್ರತ್ಯೇಕ ಕಂದಾಯ ಇಲಾಖಾ ಕೇಂದ್ರಗಳನ್ನು ತೆರೆದಿದ್ದರು. ಈ ಕಛೇರಿಗಳಲ್ಲಿ ಮಾಮ್ಲತದಾರ, ಶಿರಸ್ತೇದಾರ, ಖಜಾಂಚಿ, ಹೀಗೆ ಅನೇಕ ಅಧಿಕಾರಿಗಳನ್ನು ನೇಮಿಸಲಾಯಿತು. ಇದರಿಂದ ಕಂದಾಯಕ್ಕೆ ಸಂಬಂಧಿಸಿದ ಪ್ರತಿ ತಾಲೂಕುಗಳಲ್ಲಿ ಇಂತಹ ಕಛೇರಿಗಳನ್ನು ಸ್ಥಾಪಿಸಿ ಆ ಮೂಲಕ ಆಡಳಿತವನ್ನು ಸರಳೀಕರಣಗೊಳಿಸಲಾಗಿತ್ತು. ಮಂಗಸೂಳಿ ದೇಸಾಯಿಯರಲ್ಲಿ ಹದಿನಾಲ್ಕನೇಯ ಗಾದಿ ಮಾಲಿಕನಾದ ಭೋಜರಾಜ ಸಿದ್ದರಾಜ ಪವಾರ ದೇಸಾಯಿಯವರು ಕಂದಾಯದಲ್ಲಿ ಬಾಕಿ ಇದ್ದ ಹಣವನ್ನು ವಸೂಲಿ ಮಾಡಲು ೧೯೪೬ ರಲ್ಲಿ ಅಥಣಿಯ ನರಸಿಂಹ ದತ್ತಾತ್ರೇಯ ಮುತಾಲಿಕ ದೇಸಾಯಿ ಎಂಬುವವನನ್ನು ನೇಮಕಮಾಡಿ The Debt Adjestment Board, Athani. ಇಲ್ಲಿಗೆ ಅರ್ಜಿ ಸಲ್ಲಿಸಿದ್ದನ್ನು ಗಮನಿಸಬಹುದಾಗಿದೆ.

ಮುಂಬಯಿಯ ವತನ ಪದ್ದತಿಯ ರದ್ದತಿ ಕಾಯ್ದೆಯು ೧೯೫೫ ರಂದು ಜಾರಿಗೆ ಬಂದು ಸರಕಾರಕ್ಕೆ ಪೂರ್ಣಪ್ರಮಾಣದ ಕಂದಾಯ ನೀಡುವ ನಿಯಮ ಜಾರಿಗೆ ಬಂದಿತು. ಆ ಮಂಗಸೂಳಿ ದೇಸಾಯಿಯವರು ವತನಿನ ಆರ ಪಟ್ಟು ತುಂಬಿ 'ರಿಗ್ರ್ಯಾಂಟ್' ಮಾಡಿಸಿಕೊಂಡದ್ದನ್ನು ಕಾಣಬಹುದಾಗಿದೆ. ಹೀಗೆ ರೀಗ್ರ್ಯಾಂಟ್ (Regraut) ಮಾಡಿಸಿಕೊಂಡ ಒಂದು ಉಲ್ಲೇಖವನ್ನು ಈ ಕೆಳಗಿನಂತೆ ನೋಡಬಹುದು. ೧೯೫೬ ರಲ್ಲಿ ೧೫ ನೇ ಗಾದಿ ಮಾಲಿಕರಾದ ಶ್ರೀಮಂತ ಧೈರ್ಯಶೀಲರಾವ್ ಅವರು ಪಾಟಲ್ಕಿ ವತನ ಭೂಮಿಯನ್ನು ರೀಗ್ರ್ಯಾಂಟ್ ಪಡೆಯಲು ಪ್ರಾಂತ ಅಧಿಕಾರಿಗೆ ಅರ್ಜಿಸಲ್ಲಿಸಿದ್ದರು. ಸರ್ವೆ ನಂ. ೧೯೬೦ ರಲ್ಲಿಯ ಹನ್ನೊಂದು ಏಕರೆ ಮತ್ತು ೨೭ ಗುಂಟೆ ಭೂಮಿಯನ್ನು ಹನ್ನೆರಡು ರೂಪಾಯಿ ಹದಿಮೂರು ಆಣೆಗೆ ಅಳತೆ ಮಾಡಿಸಿದ ಪಾಟಲ್ಕಿವತನನ್ನು ೧೮೭೯ ರ ಬಾಂಬೆ ಭೂಕಂದಾಯ ಕಾಯ್ದೆಯ ಪ್ರಕಾರ ರೀಗ್ರ್ಯಾಂಟ್ ಆಗಿ ಮಾನ್ಯಮಾಡಬೇಕೆಂದು ಮತ್ತು ೬ ಪಟ್ಟು ಅಸೆಸ್ ಮೆಂಟನ್ನು (ಚಲನ ನಂ. ೧೧೭೯೮೦/೩-೩-೧೯೫೫) ತುಂಬಲಾಗಿದೆ ಎಂದು ೧೬ ನೇ ಜುಲೈ ೧೯೫೫ ರಂದು ಸರಕಾರಕ್ಕೆ ಮನವಿಮಾಡಿಕೊಂಡ ಪತ್ರವನ್ನು ಉಲ್ಲೇಖಿಸಬಹುದಾಗಿದೆ. ಈ ಪ್ರಕಾರವಾಗಿ ಈ ಮೊದಲು ಕಂದಾಯದ ಕೆಲವು ಭಾಗಮಾತ್ರ (ಜೂಡಿ) ಸರಕಾರಕ್ಕೆ ಸೇರುತ್ತಿತ್ತು. ಅಂದರೆ ಈ ಕಾಯ್ದೆ ಬಂದ ಮೇಲೆ ಪೂರ್ಣ ಪ್ರಮಾಣದ ನಿಗದಿತ ಕಂದಾಯವನ್ನು ಸರಕಾರಕ್ಕೆ ತುಂಬುವ ವ್ಯವಸ್ಥೆ ಜಾರಿಗೆ ಬಂದಿತು. ಅಂದರೆ ೧೯೫೦ ರಲ್ಲಿ ಬಾಂಬೆ ಪರಗಣಾ ಕುಲಕರ್ಣಿವತನ್ ನಿಷೇಧ ಕಾಯ್ದೆ ಜಾರಿಗೆ ಬಂದಿತು. ಆ ಪ್ರಕಾರ ಒಟ್ಟು ಕಂದಾಯದ ೫೦೦೦ ರೂ. ಗಳಲ್ಲಿ ಕೇವಲ ೮೦೦ ರೂ. ಗಳನ್ನು ಸರಕಾರಕ್ಕೆ ತುಂಬುತ್ತಿದ್ದುದು ತಿಳಿದರೆ

ಉಳಿದ ಭಾಗವನ್ನು ತಾವೇ ಉಪಭೋಗಿಸುತ್ತಿದ್ದರು ಎಂದು ತಿಳಿಯಬೇಕು. ಮುಂದೆ ೧೯೫೫ ರ ಕಾಯ್ದೆ ಈ ಪದ್ದತಿಯನ್ನು ರದ್ದುಗೊಳಿಸಿತು.

ಮಂಗಸೂಳಿ ಪವಾರ ದೇಸಾಯಿಗಳು ತಮ್ಮ ವತನ ಭೂಮಿಯನ್ನು ಬಾಡಿಗೆಗೆ ಕೊಟ್ಟು ರೈತರಿಂದ ಕೃಷಿ ಮಾಡಿಸುತ್ತಿದ್ದರೆಂಬುದಕ್ಕೆ ಅವರ ಬಾಡಿಗೆ ಪತ್ರಗಳು ಸಾಕ್ಷಿ ನೀಡುತ್ತವೆ. ಪವಾರ ದೇಸಾಯಿಗಳೆಂದೂ ರೈತರ ಮೇಲೆ ಈ ಕುರಿತು ಯಾವುದೇ ಕಿರಿಕಿರಿ ಮಾಡುತ್ತಿರಲೇ ಇಲ್ಲ ಎಂಬ ಅಂಶ ಅಲ್ಲಿ ಕೆಲವು ವಯೋವೃದ್ಧರನ್ನು ಸಂಪರ್ಕಿಸಿದಾಗ ತಿಳಿದು ಬಂತು. ನಿರ್ದಿಷ್ಟ ಪಡಿಸಿದ ಅವಧಿಗೆ ನಿರ್ದಿಷ್ಟಪಡಿಸಿದ ಭೂಮಿಯನ್ನು ರೈತರಿಗೆ ನೀಡಿ ಒಪ್ಪಂದದ ಪತ್ರವನ್ನು ಬರೆಯಿಸಿಕೊಳ್ಳಲಾಗುತ್ತಿತ್ತು. ಆ ಒಪ್ಪಂದದ ಪ್ರಕಾರವೇ ಬಾಡಿಗೆ ಪಡೆದ ರೈತರು ನಡೆದುಕೊಳ್ಳಬೇಕಿತ್ತು. ಒಂದು ವೇಳೆ ಅದಕ್ಕೆ ತಪ್ಪಿದಲ್ಲಿ ಕೋರ್ಟಿನಲ್ಲಿ ದಾವೆ ಹೂಡಲಾಗುತ್ತಿತ್ತು. ಅಂತಹ ಉದಾಹರಣೆಗೂ ಈ (೬. ಮಂಗಸೂಳಿ ಪವಾರ ದೇಸಾಯಿ ಅವರ ಮನೆಯಲ್ಲಿರುವ ದಾಖಲೆ ಪತ್ರಗಳು) ಅವಧಿಯಲ್ಲಿ ಸಾಕಷ್ಟು ಸಿಗುತ್ತವೆ. ಇಂತಹ ಪ್ರಕರಣಗಳು ಜಿಲ್ಲಾ ನ್ಯಾಯಾಲಯದಲ್ಲಷ್ಟೇ ಅಲ್ಲದೇ ಬಾಂಬೆ ಉಚ್ಚನ್ಯಾಯಾಲಯದಲ್ಲಿ ದಾವೆ ನಡೆದ ಪ್ರಸಂಗಳಿವೆ. ಅವುಗಳಲ್ಲಿ ಇಲ್ಲಿ ಒಂದನ್ನು ಉಲ್ಲೇಖಿಸಬಹುದಾದರೆ, ೧೪ ನೇ ಗಾದಿ ಮಾಲಿಕನಾದ ಭೋಜರಾಜ ಸಿದ್ಧರಾಜ ಮತ್ತು ಅವರ ಸೋದರ ಅಪ್ಪಾಸಾಹೇಬ (ವಿಲಾಸರಾಜೇ) ಅವರು ಈ ಮೊದಲು ಬೆಳಗಾಂವ ಜಿಲ್ಲಾ ನ್ಯಾಯಾಲಯದಲ್ಲಿ ದೇವೇಂದ್ರ ಚಿಂತಾಮಣಿ ಶೆಟ್ಟಿ ಎಂಬುವವನ ವಿರುದ್ಧದಾವೆ ಹೂಡಿ ಮೂರು ವರ್ಷ ಬಾಕಿ ಇರುವ ಬಾಡಿಗೆಯನ್ನು ಕೊಡಿಸಬೇಕೆಂದು ವಿನಂತಿಸಿಕೊಂಡಾಗ, ಜಿಲ್ಲಾ ನಾಯಾಲಯವು ಮೂರು ಕಂತುಗಳಲ್ಲಿ ದೇಸಾಯಿಯವರಿಗೆ ಕೊಡಬೇಕಾದ ಬಾಕಿ ಹಣವನ್ನು ಭರಿಸುವಂತೆ ಆಜ್ಞೆಮಾಡಿತು. ಆದರೆ ಶೆಟ್ಟಿಯು ಇದನ್ನು ಒಪ್ಪದೇ ಪ್ರಕರಣವನ್ನು ನ್ಯಾಯಾಲಯಕ್ಕೆ ಕೊಂಡೊಯ್ದದ್ದನ್ನು ದೇಸಾಯಿಯವರ ಮನೆಯಲ್ಲಿಯ ದಾಖಲೆಯಿಂದ ತಿಳಿದುಬರುತ್ತದೆ. (೨) ಅದರಂತೆಯೇ ಗುರಲಿಂಗಪ್ಪಾ ಮಹಾಲಿಂಗಪ್ಪಾ ಕಾವೇರಿಯ ವಿರುದ್ಧ, ಶಿವಲಿಂಗಪ್ಪ ಅಡಿವೆಪ್ಪಾ ಯಾದವಾಡೆ, ಬಂಡು ತುಕಾರಾಮ ಯಾದವಾಡೆ, ಕೃಷ್ಣಾ ಸತ್ತು ಮೆಟಗುಡೆ, ಬಾಳಪ್ಪಾ ಸದಲ್ಗೆ ಹೀಗೆ ಮೊದಲಾದವರ ವಿರುದ್ಧ ೧೯೪೩ ರಲ್ಲಿ ಬೆಳಗಾವಿ ಜಿಲ್ಲಾ ನ್ಯಾಯಾಲಯದಲ್ಲಿ ದಾವೆ ಹೂಡಿದ ಉಲ್ಲೇಖವನ್ನೂ ಇಲ್ಲಿ ಉದಾಹರಿಸಬಹುದು. ಹೀಗೆ ನಿಗದಿಪಡಿಸಿದ ಕಂದಾಯವನ್ನು ಅಥವಾ ಬಾಡಿಗೆಯನ್ನು ಕೊಡದೆ ಇದ್ದವರ ವಿರುದ್ದ ಏಕಕಾಲದಲ್ಲಿ ಸಾಕಷ್ಟು ಜನರ ವಿರುದ್ದ ದಾವೆ ಹೂಡಿದ ಉಲ್ಲೇಖವನ್ನು ಅವರ ಮನೆಯಲ್ಲಿಯೇ ದೊರೆತ ಈ ದಾಖಲೆಗಳನ್ನು ವೀಕ್ಷಿಸಿದರೆ, ಕೆಲವು ಅಂಶಗಳು ಬೆಳಕಿಗೆ ಬರುತ್ತದೆ.

---

(೨) ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ ಪ್ರತಿಯ ವಿವರ ಮತ್ತು ಮೊದಲು ಜಿಲ್ಲಾ ನ್ಯಾಯಾಲಯ ನೀಡಿದ ತೀರ್ಪನ್ನು ಅನುಬಂಧದಲ್ಲಿ ಉಲ್ಲೇಖಿಸಿದ ದಾಖಲೆಯನ್ನು ಆಧಾರವಾಗಿಸಿಕೊಳ್ಳಬಹುದು.

ಮಂಗಸೂಳಿ ಪವಾರ ದೇಸಾಯಿಗಳ ಮನೆಯಲ್ಲಿ ದೊರೆತ ಈ ದಾಖಲೆಗಳನ್ನು ವೀಕ್ಷಿಸಿದರೆ, ಕೆಲವು ಅಂಶಗಳು ಬೆಳಕಿಗೆ ಬರುತ್ತವೆ. ಮನೆ ಬಾಡಿಗೆ ದಾಖಲೆಗಳು, ಸಾಲ ಪತ್ರಗಳು, ಕೃಷಿ ಜಮೀನಿನ ಬಾಡಿಗೆ ಪತ್ರಗಳನ್ನು ನೋಡಲಾಗಿ ಅವುಗಳ ಭಾಷಾಶೈಲಿ, ಬರವಣಿಗೆಗಳು ವಿಶಿಷ್ಟವಾಗಿದೆ. ಇಂಗ್ಲೀಷ ಭಾಷೆಗೆ ಹೆಚ್ಚು ಮಹತ್ವವಿದ್ದರೂ ಕೂಡ ಮಂಗಸೂಳಿ ಪವಾರ ದೇಸಾಯರ ಪ್ರದೇಶದಲ್ಲಿ ಮರಾಠಿ ಪ್ರಭಾವವನ್ನು ಕಾಣಬಹುದಾಗಿದೆ. ಕನ್ನಡದಲ್ಲಿ ಬರೆದ ಹಲವು ದಾಖಲತೆಗಳಲ್ಲಿ ಕೆಲವು ಮರಾಠಿ ಪದ ಪ್ರಯೋಗಗಳನ್ನು ನೋಡಿದರೆ ಆ ಬಾಷೆಗೆ ಇದ್ದ ಸ್ಥಾನವನ್ನು ಸೂಚಿಸುತ್ತದೆ ಕನ್ನಡದಷ್ಟೇ ಮರಾಠಿ ಕಾಗದ ಪತ್ರಗಳನ್ನು ಅಲ್ಲಿ ನೋಡಬಹುದಾಗಿದೆ.

ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಈ ಕಂದಾಯ ಪದ್ದತಿಯು ಮಧ್ಯಯುಗದವರೆಗೂ ಮುಂದುವರೆದು ಬ್ರಿಟೀಷ್ ಆಡಳಿತೆಯಲ್ಲಿ ಒಂದು ನಿರ್ದಿಷ್ಟ ರೂಪ ತಳೆದು ವ್ಯವಸ್ಥಿತಗೊಂಡಿತೆಂದು ಅದನ್ನು ಈ ದೇಸಗತಿಗಳು ಮುಂದುವರೆಯಿಸಿಕೊಂಡು ಬಂದವೆಂದು ಹೇಳಬಹುದು.

ನ್ಯಾಯಾಡಳಿತ :

ನ್ಯಾಯಾಡಳಿತವೂ ಕೂಡ ಸುಸಂಬದ್ಧವಾಗಿಯೇ ಅಸ್ತಿತ್ವದಲ್ಲಿತೆಂಬುದನ್ನು ಅರಿಯ ಬಹುದಲ್ಲಿದೆ, ಬ್ರಿಟಿಷ ಪೂರ್ವದಲ್ಲಿ ಈ ದೇಸಾಯಿಗಳೇ ನ್ಯಾಯ, ಕಂದಾಯ, ನಾಗರಿಕ ಆಡಳಿತೆಯನ್ನು ನಡೆಸುತ್ತಿದ್ದರೆಂಬುದು ವಿಶೇಷ ತಮ್ಮ ಪರಗಣದ ವ್ಯಾಪ್ತಿಯ ನ್ಯಾಯಾಡಳಿತೆ ಇವರಿಗೆ ಸೇರಿದ್ದು ಗ್ರಾಮಗಳಲ್ಲಿ ಗೌಡನು ನ್ಯಾಯ ನಿರ್ಣಯ ನೀಡುತ್ತಿದ್ದನು. ಅಂತಿಮ ಮನವಿಯನ್ನು ಸುಲ್ತಾನನಿಗೆ ಸಲ್ಲಿಸಲಾಗುತ್ತಿತ್ತು. ದೇಸಗತಿ ವ್ಯಾಪ್ತಿಯಲ್ಲಿ ದೇಸಾಯಿಗೆ ಸಂಪೂರ್ಣ ನ್ಯಾಯ ನಿರ್ಣಯ ಅಧಿಕಾರವಿದ್ದಿತು.ದೇಸಾಯಿಯು ಸ್ವಂತಂತ್ರನಾಗಿದ್ದರು ಅರಸನ ಸಾಮಂತನಾಗಿರ ಬೇಕಾಗಿತ್ತೇಂದು ದಾಖಲೆಗಳಿಂದ ತಿಳಿದು ಬರುತ್ತದೆ. (೩) ಮಂಗಸೂಳಿ ಪವಾರ ದೇಸಾಯಿಗಳ ಅವಧಿಯಲ್ಲಿ ಅಂತಿಮ ಮನವಿಯನ್ನು ಪೇಶ್ವೆಗೆ ಅರ್ಪಿಸುತ್ತಿದ್ದರೆಂದು ತೋರುತ್ತದೆ. ಕಾರಣವೆಂದರೆ, ಇವರು ಪೇಶ್ವೆಗಳ ನಿಷ್ಠ ಅಧಿಕಾರಿಗಳಾಗಿದ್ದರು. ಊರ ಹಿರಿಯರ ಪಂಚಾಯತಿಯಲ್ಲಿಯೇ ಗೌಡನು ನ್ಯಾಯ ತೀರ್ಮಾನ ಮಾಡುವ ಪದ್ಧತಿ ಇತ್ತು. ೧೮೪೬ ರ ಸುಮಾರಿಗೆ ಬೆಳಗಾವಿ ಜಿಲ್ಲೆಯ ತಾಲೂಕುಗಳಲ್ಲಿ ದಿವಾಣಿ ನ್ಯಾಯಾಲಯಗಳಿದ್ದವು. ೧೮೪೬ ರ ಷ್ಟರಲ್ಲಿಯೇ ಪೇಶ್ವೆಯು ದಕ್ಷಿಣ ಭಾಗಗಳನ್ನು ಆಕ್ರಮಿಸಿ ಬ್ರಿಟಿಷ ಸೈನ್ಯಾಧಿಕಾರಿ ಜನರಲ್ ಮನ್ರೂನ ಕೇಂದ್ರ ಕಛೇರಿಯಾಗಿದ್ದಿತು.

ಈ ಪೂರ್ವದಲ್ಲಿ ಜಮೀನುದಾರರೇ ಆಯಾ ಪ್ರದೇಶಗಳ ನ್ಯಾಯಡಳಿತೆಯನ್ನು ನೋಡಿಕೊಂಡು ಪ್ರಕರಗಳನ್ನು ಇತ್ಯರ್ಥಪಡಿಸುತ್ತಿದ್ದರು. ಆದರೆ ವಾರನ್ ಹೇಸ್ಟಿಂಗ್ಸ್ ಗವರ್ನರ ಜನರಲ್ ಆಗಿ ಬಂದ ಮೇಲೆ ಜಮೀನ್ದಾರರ ಈ ಅಧಿಕಾರವನ್ನು ಮೊಟಕುಗೊಳಿಸಲಾಯಿತಲ್ಲದೇ

---

(೩) ಕರ್ನಾಟಕ ಪಾಳೆಗಾರರ ನ್ಯಾಯಾಡಳಿತ: ಸಂ. ಪ್ರೊ. ಲಕ್ಷ್ಮಣ ತೆಲಗಾವಿ ಪುಟ.೩೩೮ ವರ್ಷ (೨೦೦೮)

ಅದಕ್ಕೆಂದೇ ಪ್ರತ್ಯೇಕ ಅಧಿಕಾರಿಗಳನ್ನು ಮತ್ತು ಸಿವಿಲ್ ಹಾಗು ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಬಾಂಬೆ ಪ್ರಾಂತ್ಯಕ್ಕೆ ಸೇರಿದ ಕರ್ನಾಟದಲ್ಲಿ ಸುಮಾರು ೨೧ ತಾಲೂಕುದಳಿದ್ದು ಅವುಗಳಿಗೆ ಒಬ್ಬೊಬ್ಬ ಮಾಮ್ಲತದಾರ ಎಂಬ ಅಧಿಕಾರಿಯನ್ನು ನೇಮಿಸಲಾಗಿತ್ತು. ಇವರಿಗೆ ಸಹಾಯಕರಾಗಿ ೨-೩ ಅಧಿಕಾರಿಗಳನ್ನು ಅವರಿಗೆ ಖಿಲ್ಲೇದಾರರೆಂದು ನೇಮಿಸಲಾಗಿತ್ತು ಇವರಿಗೆ ಸಹಾಯಕರಾಗಿ ೨-೩ ಅಧಿಕಾರಿಗಳನ್ನು ಅವರಿಗೆ ಖಿಲ್ಲೇದಾರರೆಂದು ಕರೆಯುತ್ತಿದ್ದರು. ತಾಲೂಕಿನಾದ್ಯಂತ ಕಾರ್ಯನಿರ್ವಹಣೆಗಾಗಿ ಮುಲಕಿ ಪೌಜುದಾರ, ಪೋಲಿಸ ಅಧಿಕಾರಿಗಳನ್ನು ನೇಮಕಮಾಡಲಾಗಿತ್ತು. ಚಿಕ್ಕ ಪುಟ್ಟ ಪ್ರಕರಣಗಳನ್ನು ಗ್ರಾಮದ ಗೌಡ, ಶಾನ ಬೋಗರು ವಿಚಾರಣೆ ಮಾಡುತ್ತಿದ್ದರು ಪ್ರಕರಣಗಳು ಮಾಮ್ಲತದಾರರಿಗೆ ಬಂದರೆ ಆತನು ಸಂಚರ ನೆರವಿನಿಂದ ನ್ಯಾಯ ತೀರ್ಪು ನೀಡುತ್ತಿದ್ದನು. ಈ ರೀತಿಯಾಗಿಯೇ ಬೆಳಗಾವಿ ಜಿಲ್ಲೆಯಲ್ಲಿ ನ್ಯಾಯಾಡಳಿತೆಯು ವೈವಸ್ಥಿತಗೊಂಡಿತ್ತೆಂದು ಹೇಳಬಹುದು.

ಮಂಗಸೂಳಿ ಪವಾರ ದೇಸಾಯಿಗಳೂ ಈ ಮಾದರಿಯ ನ್ಯಾಯ ವ್ಯವಸ್ಥೆ ಹೊಂದಿದ್ದರೆಂದು ತಿಳಿದು ಬರುತ್ತದೆ. ೧೪ ನೇ ಗಾದಿ ಮಾಲಿಕರಾದ ಭೋಜರಾಜ ಪವಾರ ದೇಸಾಯಿಯುವರು ನ್ಯಾಯ ನಿಷ್ಠರಾಗಿದ್ದರು ಯಾವುದೇ ಮುಲಾಜಿಲ್ಲದೇ ಪಂಚಾಯತಿಯ ತೀರ್ಪು ನೀಡುತ್ತಿದ್ದರೆಂದು ಇವರ ಕಿರಿಯ ಸಮಕಾಲೀನರೊಬ್ಬರು ತಿಳಿಸುತ್ತಾರೆ. ಈ ಅವಧಿಯಲ್ಲಿ ಶಿಕ್ಷೆಗಳು ಅಷ್ಟೊಂದು ಕಠಿಣವಾಗಿರಲಿಲ್ಲವೆಂದೇ ಹೇಳಬಹುದು. ಘೋರ ಅಪರಾದಕ್ಕೆ ಗಡಿಪಾರು ಮಾಡುವ ಶಿಕ್ಷೆಯಿದ್ದಿತು. ಪಂಚಾಯತಿ ಕಟ್ಟೆಯ ಮುಂದೆ ಚಾಟಿ ಏಟಿನಿಂದ ನಿರ್ದಿಷ್ಟ ಪಡಿಸಿರುವಷ್ಟು ಸಲ ಬಡಿಯುವುದು ಸಾಮಾಜಿಕ ಬಹಿಷ್ಕಾರ ಹಾಕುವುದು. ಮೊದಲಾದವುಗಳು ಶಿಕ್ಷೆಯ ಪ್ರಕಾರಗಳಾಗಿದ್ದವು ಬ್ರಿಟೀಷ ಆಡಳಿತೆಯಲ್ಲಿ ಶಿಕ್ಷೆಗಳು ಕಠಿಣ ರೂಪ ತಳೆದಿದ್ದನ್ನು ಕಾಣಬಹುದು.

ಸೈನ್ಯ :

ಆರಂಭದಲ್ಲಿ ಈ ದೇಸಗತಿಗಳು ಚಿಕ್ಕ ಪುಟ್ಟ ಸೈನಿಕ ತುಕಡಿಯನ್ನು ಹೊಂದಿದ್ದವೆಂಬುದು ಸ್ಪಷ್ಟವಾಗುತ್ತದೆ. ಸರಗಣಾ ಪತನ್‌ದ ಮಾಲಿಕರಾಗಿದ್ದ ಈ ದೇಸಾಯಿಗಳಲ್ಲಿ ಚಿಕ್ಕ ಸೈನಿಕ ಪಡೆಯಿದ್ದು ಸೈನ್ಯದಲ್ಲಿ ಕೃಷಿಕರು, ಕೂಲಿಕಾರರ, ನಿರುದ್ಯೋಗಿಗಳನ್ನು ನೇಮಕ ಮಾಡಲಾಗಿತ್ತು. ಇದು ಕಾಯಿದ್ದಿಟ್ಟ ಪಡೆಯಾಗಿರಲಿಲ್ಲ ಹೊರತಾಗಿ ಕಷ್ಟದ ಸಮಯದಲ್ಲಿ ಅಂದರೆ ಯುದ್ದದ ಸಮಯದಲ್ಲಿ ಇಂತಹವರಿಂದ ಕೂಡಿದ ಸೈನ್ಯ ತುಕಡಿಯನ್ನು ತಮ್ಮ ಒಡೆಯನಿಗೆ ಕಳುಹಿಸಿಕೊಡಲಾಗುತ್ತಿತ್ತು. ಈ ಸೈನಿಕರು ಅಷ್ಟೋಂದು ತರಬೇತಿ ಹೊಂದಿದವರಾಗಿರಲಿಲ್ಲವೆಂದು ಹೇಳಬಹುದು. ಏಕೆಂದರೆ ವರ್ಷವಿಡೀ ಕೃಷಿ ಕೂಲಿಯನ್ನು ಮಾಡಿಕೊಂಡಿರುವವರೂ ಆಗಿದ್ದರು ಅವರಲ್ಲಿ ಕೆಲವರಂತೂ ಯುದ್ಧಕಲೆಯನ್ನು ಬಲ್ಲವರಾಗಿದ್ದರು. ಮಂಗಸೂಳಿ ದೇಸಾಯಿಗಳ ವಾಡೆಯಲ್ಲಿ ದೊರೆತ ಯುದ್ಧ ಉಪಕರಣಗಳನ್ನು ಗಮನಿಸಿದರೆ ಇವರಲ್ಲಿಯೂ ಸೈನ್ಯದ ತುಕಡಿ ಇದ್ದಿರಬೇಕೆಂದು ತಿಳಿದು ಬರುತ್ತದೆ.

